ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 26 | ಜೂನ್ 24-30, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಕಾಮ್ರೇಡ್ ಮಂಗಳೇಶ್ವರಿದೇವಿ ಇನ್ನಿಲ್ಲ





ಕಾಮ್ರೇಡ್ ಬಿ.ಮಾಧವ ಕಣ್ಮರೆಯಾದ ಕಾರ್ಮಿಕರ ಕಣ್ಮಣಿ



ಅಮೇರಿಕ ಮುಂದೆ ಮಂಡಿಯೂರುವ ಮೋದಿ



ಸಮರ್ಪಕ ಬರ ನಿರ್ವಹಣೆಗೆ ಕೂಲಿಕಾರರ ಒತ್ತಾಯ



ಜಿಂದಾಲ್ ಕಂಪನಿಗೆ 3667 ಎಕರೆ ಭೂಮಿ ನೀಡುವ ತೀರ್ಮಾನ ರದ್ದಾಗಲಿ

ಬಲಪಂಥೀಯ ದಾಳಿಯ ಕ್ರೋಢೀಕರಣಕ್ಕೆ ಎದುರಾಗಿ ವರ್ಗ ಪರ್ಯಾಯವನ್ನು ಆಧರಿಸಿದ ಎಡಪಂಥೀಯ ಪ್ರತಿಧಾಳಿ–ಇದೀಗ ದೇಶದಲ್ಲಿನ ಹೊಸ ಧ್ರುವೀಕರಣ: ಸೀತಾರಾಂ ಯೆಚುರಿ

“17ನೇ ಲೋಕಸಭಾ ಚುನಾವಣೆಗಳಲ್ಲಿ ಬಲಪಂಥೀಯರಿಗೆ ಒಂದು ದೊಡ್ಡ ವಿಜಯ ಸಿಕ್ಕಿದೆ, ಇದು ಕಳೆದ ಐದು ವರ್ಷಗಳಲ್ಲಿ ನಡೆಸಿದ ಬಲಪಂಥೀಯ ದಾಳಿಗಳ ಕ್ರೋಢೀಕರಣ, ಎಡಶಕ್ತಿಗಳು ದೊಡ್ಡ ಹಿನ್ನಡೆ ಅನುಭವಿಸಿವೆ, ಆದರೆ ಎಡಪಂಥೀಯರು, ಕೆಲವರು ಹೇಳುವ ಹಾಗೆ ನಿಶ್ಶಸ್ತ್ರರಾಗಿಲ್ಲ, ಅಥವ ನಿರ್ಮೂಲಗೊಂಡಿಲ್ಲ., ನೆನಪಿಟ್ಟುಕೊಳ್ಳಿ, ಬಲಪಂಥೀಯ ರಾಜಕೀಯ ದಾಳಿಯನ್ನು ಎಡಪಂಥೀಯ ರಾಜಕೀಯ ಪ್ರತಿಧಾಳಿ ಮಾತ್ರವೇ ಎದುರಿಸಬಲ್ಲದು. ಈ ಪ್ರತಿದಾಳಿ ಒಂದು ವರ್ಗ ಪರ್ಯಾಯವನ್ನು, ವರ್ಗ ರಾಜಕೀಯವನ್ನು ಆಧರಿಸಿದೆ. ಕೇಂದ್ರ ಸಮಿತಿಯಲ್ಲಿ ಸಿಪಿಐ(ಎಂ) ಈಗ ಇದನ್ನೇ ಮಾಡಲು ನಿರ್ಧರಿಸಿದೆ” ಎಂದು ಸೀತಾರಾಮ್ ಯೆಚುರಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹೇಳಿದ್ದಾರೆ.


ಅವರು ಜೂನ್ 7ರಿಂದ 9 ರವರೆಗೆ ನಡೆದ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಚರ್ಚೆಗಳು, ನಿರ್ಧಾರಗಳ ಬಗ್ಗೆ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತಾಡುತ್ತಿದ್ದರು. ಎಡಶಕ್ತಿಗಳು ಹಿಮ್ಮೆಟ್ಟುತ್ತಿಲ್ಲ, ಪ್ರತಿದಾಳಿ ನಡೆಸುತ್ತವೆ. ಇದೀಗ ಎಡಶಕ್ತಿಗಳು ಸೆಟೆದು ನಿಲ್ಲುವ ಸಮಯ, ಆಧುನಿಕ ಭಾರತದ ಮೌಲ್ಯಗಳನ್ನು ಎತ್ತಿ ಹಿಡಿಯಲು, ನಮ್ಮ ಸಂವಿಧಾನದ ಆಶ್ವಾಸನೆಗಳನ್ನು ರಕ್ಷಿಸಿಕೊಳ್ಳಲು ಮತ್ತು ಜನಗಳ ಪ್ರಜಾಪ್ರಭುತ್ವ ಹಕ್ಕುಗಳು ಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳಲು ಸೆಟೆದು ನಿಲ್ಲುವ ಸಮಯ. ಬಲಪಂಥ ಬಲಗೊಂಡಾಗ, ಎಡಪಂಥವೂ ಶಕ್ತಿಶಾಲಿಯಾಗಬೇಕಾಗುತ್ತದೆ. ಇದೀಗ ದೇಶದಲ್ಲಿನ ಹೊಸ ಧ್ರುವೀಕರಣ, ಮೆದು ಹಿಂದುತ್ವವು ಕಟ್ಟಾ ಹಿಂದುತ್ವಕ್ಕೆ ಉತ್ತರವಾಗದು, ಎಡ ಪಂಥ ಮಾತ್ರವೇ ಏಕೈಕ ಆಯ್ಕೆ ಎಂದು ಯೆಚುರಿ ಹೇಳಿದರು.

ಸಿಪಿಐ(ಎಂ) ಕೇಂದ್ರ ಸಮಿತಿ ಈ ಮೂರು ದಿನಗಳ ಸಭೆಯಲ್ಲಿ 17ನೇ ಲೋಕಸಭಾ ಚುನಾವಣೆಗಳ ಫಲಿತಾಂಶದ ಪ್ರಾಥಮಿಕ ವಿಮರ್ಶೆ ನಡೆಸಿದೆ. ಬಿಜೆಪಿ ಕಳೆದ ಐದು ವರ್ಷಗಳಲ್ಲಿ ಹರಿಯಬಿಟ್ಟಿರುವ ಬಲಪಂಥೀಯ ದಾಳಿ ಈ ಜನಾದೇಶದೊಂದಿಗೆ ಕ್ರೋಢೀಕರಣಗೊಂಡಿದೆ ಎಂದು ವಿಶ್ಲೇಷಿಸಿರುವ ಕೇಂದ್ರ ಸಮಿತಿ, ಪ್ರತಿಪಕ್ಷಗಳ ವಿಫಲತೆ, ಎಡಶಕ್ತಿಗಳ ತೀವ್ರ ಪರಾಭವದ ಪ್ರಾಥಮಿಕ ವಿಮರ್ಶೆಯನ್ನು ನಡೆಸಿತು.

ಪಕ್ಷದ ಸ್ವತಂತ್ರ ಶಕ್ತಿ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳು ದುರ್ಬಲಗೊಳ್ಳುತ್ತಲೇ ಇವೆ ಎಂದು ಗಮನಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ ಇಂತಹ ಒಂದು ಪ್ರವೃತ್ತಿ ಆಳಗೊಳ್ಳಲು ಕಾರಣವಾಗಿರುವ ವಿವಿಧ ಅಂಶಗಳನ್ನು ಚರ್ಚಿಸಿತು. ಮತ್ತು ಈ ಅವನತಿಯನ್ನು ತಡೆಯಲು ಹಾಗೂ ತಿರುಗುಮುರುಗುಗೊಳಿಸಲು ಪಕ್ಷವು ಕೈಗೊಳ್ಳುವ ತಕ್ಷಣದ ಸಂಘಟನಾತ್ಮಕ ಮತ್ತು ರಾಜಕೀಯ ಕ್ರಮಗಳನ್ನು ರೂಪಿಸಿತು.

ಈ ನಿರ್ಣಾಯಕ ಬಿಜೆಪಿ ವಿಜಯವು ಖಂಡಿತವಾಗಿಯೂ ಒಡ್ಡಲಿರುವ ಸವಾಲುಗಳನ್ನು ಎದುರಿಸಲು ದೇಶ ಮತ್ತು ಜನತೆ ಸಿದ್ಧರಾಗಬೇಕಾಗಿದೆ ಎಂಬ ತೀರ್ಮಾನಕ್ಕೆ ಕೇಂದ್ರ ಸಮಿತಿ ಬಂದಿದೆ. ಅದು ಇಂತಹ ನಾಲ್ಕು ಮುಖ್ಯ ಸವಾಲುಗಳನ್ನು ಗಮನಿಸಿ, ಅವನ್ನು ಎದುರಿಸುವ ಬಗೆಗಳನ್ನೂ ಗುರುತಿಸಿದೆ.

ಪಕ್ಷಕ್ಕೆ ಆಗಿರುವ ಹಿನ್ನಡೆಯಿಂದಾಗಿ ಉಂಟಾಗಿರುವ ಗಂಭೀರ ಸನ್ನಿವೇಶವನ್ನು ಎದುರಿಸಲು ಕೇಂದ್ರ ಸಮಿತಿ, ಪಕ್ಷದ ಕೊಲ್ಕತಾ ಪ್ಲೀನಂನ ಮಹತ್ವದ ನಿರ್ಣಯಗಳ ಜಾರಿಯ ವಿಮರ್ಶೆಯೂ ಸೇರಿದಂತೆ ಹಲವಾರು ಕ್ರಮಗಳನ್ನು ಮತ್ತು ಕಾರ್ಯಭಾರಗಳನ್ನು ಅಂಗೀಕರಿಸಿದೆ.



ಕೇಂದ್ರ ಸಮಿತಿಯ ಸಭೆ ಚುನಾಣಾ ಸುಧಾರಣೆಗಳ, ಅದರಲ್ಲೂ ಚುನಾವಣಾ ಆಯೋಗದ ಸುಧಾರಣೆಗಳ ಅಗತ್ಯ ಮತ್ತು ಇಲೆಕ್ಟ್ರಾನಿಕ್ ಮತಯಂತ್ರಗಳ ಬಗ್ಗೆ ಎದ್ದಿರುವ ಸಂದೇಹಗಳನ್ನೂ ಚರ್ಚಿಸಿತು.

ಚುನಾವಣೆಗಳ ನಂತರ ಮುಂಬಯಿಯಲ್ಲಿ ಖ್ಯಾತ ಜಾತ್ಯತೀತ ಚಿಂತಕ ಡಾ. ರಾಮ್ ಪುನಿಯಾನಿಯವರಿಗೆ ಬೆದರಿಕೆಗಳು ಬರುತ್ತಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ, ಹಾಗೂ ಚುನಾವಣಾ ಫಲಿತಾಂಶಗಳು ಪ್ರಕಟವಾಗುವ ಹಿಂದಿನ ದಿನವೇ ಜಾತಿ ಕಿರುಕುಳ–ದ್ವೇಷ ಪ್ರಚಾರಕ್ಕೆ ಬಲಿಯಾದ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿನಿ ಡಾ. ಪಾಯಲ್ ತಡ್ವಿ ಆತ್ಮಹತ್ಯೆಯ ಬಗ್ಗೆ ದುಃಖ ವ್ಯಕ್ತಪಡಿಸಿದೆ.

ಈ ಸಭೆಯ ನಂತರ ಪ್ರಕಟಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ.

ಲೋಕಸಭಾ ಚುನಾವಣೆಗಳ ಪ್ರಾಥಮಿಕ ಪರಾಮರ್ಶೆ

ಬಿಜೆಪಿ ವಿಜಯ:

17ನೇ ಲೋಕಸಭಾ ಚುನಾವಣೆಗಳ ತೀರ್ಪು ಬಿಜೆಪಿ ನೇತೃತ್ವದ ಎನ್.ಡಿ.ಎ. ಗೆ 2014ರಲ್ಲಿ ಗೆದ್ದುದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಮತ್ತು ಹೆಚ್ಚಿನ ಮತಗಳಿಕೆಯನ್ನು ಕೊಟ್ಟಿದೆ. ಇದು ಅವರ ಪರವಾದ ಒಂದು ನಿರ್ಣಾಯಕ ಜನಾದೇಶವಾಗಿದೆ. ಬಿಜೆಪಿ ಕಳೆದ ಐದು ವರ್ಷಗಳಲ್ಲಿ ಹರಿಯಬಿಟ್ಟಿರುವ ಬಲಪಂಥೀಯ ದಾಳಿ ಈ ಜನಾದೇಶದೊಂದಿಗೆ ಕ್ರೋಢೀಕರಣಗೊಂಡಿದೆ.

ಪುಲ್ವಾಮ ಮತ್ತು ಬಾಲಾಕೋಟ್ ನಂತರ ಜನಗಳ ನಡುವೆ ಕಥನವನ್ನು ಕಳೆದ ಐದು ವರ್ಷಗಳಲ್ಲಿ ಎನ್.ಡಿ.ಎ. ಸರಕಾರ ಹೇರಿದ ಹತ್ತು–ಹಲವು ಜೀವನಾಧಾರದ ಪ್ರಶ್ನೆಗಳಿಂದ ಪಲ್ಲಟಗೊಳಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಸಂಕುಚಿತ ಕೋಮುವಾದಿ ರಾಷ್ಟ್ರವಾದಿ ಅಬ್ಬರದ ಹೊಸ ಕಥನಕ್ಕೆ ಹಲವಾರು ಅಂಶಗಳ ಮೂಲಕ ಮೋದಿಯ ವ್ಯಕ್ತಿತ್ವವನ್ನು ಕಟ್ಟಿದ್ದು ಇದಕ್ಕೆ ನೆರವಾಯಿತು. ಮಾಧ್ಯಮಗಳ ವಿಭಾಗಗಳು ಈ ಪ್ರಾಜೆಕ್ಟಿನಲ್ಲಿ ಪಾಲುದಾರರಾದವು. ಹಿಂದೆಂದೂ ಕಾಣದಂತಹ ಹಣಬಲದ ಬಳಕೆ ಈ ಚುನಾವಣೆಗಳಲ್ಲಿ ಕಂಡು ಬಂತು. ಚುನಾವಣಾ ಬಾಂಡುಗಳ ಮೂಲಕ ಅಗಾಧ ಮೊತ್ತಗಳು ಬಿಜೆಪಿಗೆ ವರ್ಗಾಯಿಸಲ್ಪಟ್ಟವು. ಚುನಾವಣಾ ಆಯೋಗದ ಪಾತ್ರವೂ ತನ್ನ ಕೊಡುಗೆ ನೀಡಿತು.

ಪ್ರತಿಪಕ್ಷಗಳು:

ಹೆಚ್ಚಿನ ಪ್ರತಿಪಕ್ಷಗಳು, ತಮಿಳುನಾಡು, ಆಂಧ್ರಪ್ರದೇಶ, ಇನ್ನು ಕೆಲವು ರಾಜ್ಯಗಳನ್ನು ಬಿಟ್ಟರೆ ಬೇರೆಡೆಗಳಲ್ಲಿ ದೊಡ್ಡ ನಷ್ಟವನ್ನು ಕಂಡಿವೆ.

ಪ್ರತಿಪಕ್ಷಗಳು, ನಿರ್ದಿಷ್ಟವಾಗಿ ಕಾಂಗ್ರೆಸ್, ಚುನಾವಣೆಗಳ ಮೊದಲು ಮುಂದಿಟ್ಟ ಜಾತ್ಯತೀತ ಪ್ರತಿಪಕ್ಷಗಳ ಐಕ್ಯತೆಯನ್ನು ಪ್ರಸ್ತುತಪಡಿಸುವಲ್ಲಿ ವಿಫಲವಾದವು. ಕೋಮುವಾದಿ ದಾಳಿಗೆ ಎದುರಾಗಿ ಜಾತ್ಯತೀತತೆಯನ್ನು ರಕ್ಷಿಸಿಕೊಳ್ಳುವ ಒಂದು ಪ್ರಚಾರಾಂದೋಲನವನ್ನು ನಡೆಸಲಿಲ್ಲ. ಕಟ್ಟಾ ಹಿಂದುತ್ವಕ್ಕೆ ಮೆದು ಹಿಂದುತ್ವ ಉತ್ತರವಲ್ಲ. ಹಿಂದುತ್ವ ಮತ್ತು ಜಾತ್ಯತೀತತೆಯ ನಡುವಿನ ಸೈದ್ಧಾಂತಿಕ ಸಮರವನ್ನು ಶಕ್ತಿಯುತವಾಗಿ ನಡೆಸಲಿಲ್ಲ.

ಸಿಪಿಐ(ಎಂ) ಮತ್ತು ಎಡಶಕ್ತಿಗಳಿಗೆ ತೀವ್ರ ಪರಾಭವ:

ಸಿಪಿಐ(ಎಂ) ಮತ್ತು ಎಡಶಕ್ತಿಗಳು ಒಂದು ತೀವ್ರ ಹಿನ್ನಡೆಯನ್ನು, ವಿಶೇಷವಾಗಿ ಕೇರಳ, ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿನ ತಮ್ಮ ಬಲಿಷ್ಟ ನೆಲೆಗಳಲ್ಲಿ, ಅನುಭವಿಸಿವೆ.

ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ಈ ಎರಡರಲ್ಲೂ ಚುನಾವಣೆಗಳು ತೀವ್ರ ಭಯೋತ್ಪಾದನೆ ಮತ್ತು ಹಿಂಸಾಚಾರದ ವಾತಾವರಣದಲ್ಲಿ ನಡೆದವು. ಇಂತಹ ಹಿಂಸಾಚಾರದಲ್ಲಿ ಪಶ್ಚಿಮ ಬಂಗಾಲದಲ್ಲಿ ಐವರು ಮತ್ತು ತ್ರಿಪುರಾದಲ್ಲಿ ಒಬ್ಬರು ಸಿಪಿಐ(ಎಂ) ಕಾರ್ಯಕರ್ತರು ಜೀವ ಕಳಕೊಂಡಿದ್ದಾರೆ. ತ್ರಿಪುರಾ ಪಶ್ಚಿಮ ಕ್ಷೇತ್ರ ಮತ್ತು ಪಶ್ಚಿಮ ಬಂಗಾಲದ ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ಬಹುಪಾಲು ಮತಗಟ್ಟೆಗಳಲ್ಲಿ ಚುನಾವಣಾ ಮೋಸ ನಡೆದಿದೆ, ಮತ್ತು ಇತರ ಹಲವು ಕ್ಷೇತ್ರಗಳಲ್ಲಿ ದೂಷಿತಗೊಂಡಿದೆ. ಚುನಾವಣಾ ಆಯೋಗಕ್ಕೆ “ಮುಕ್ತ ಮತ್ತು ನ್ಯಾಯಯುತ ಮತದಾನ”ಗಳನ್ನು ನಡೆಸುವ ತನ್ನ ಆಶ್ವಾಸನೆಯನ್ನು ಜಾರಿಗೊಳಿಸಲು ಆಗಲಿಲ್ಲ.

ಈ ಮೂರು ರಾಜ್ಯಸಮಿತಿಗಳು ನಡೆಸಿರುವ ಪ್ರಾಥಮಿಕ ವಿಮರ್ಶೆಗಳನ್ನು ಕೇಂದ್ರ ಸಮಿತಿ ಚರ್ಚಿಸಿತು. ಒಂದು ವಿವರವಾದ ಮತಗಟ್ಟೆವಾರು ವಿಮರ್ಶೆ ನಡೆಯುತ್ತಿದ್ದು, ಅದರ ಆಧಾರದಲ್ಲಿ ಅಂತಿಮ ಅನುಭವಗಳ ಮೌಲ್ಯಮಾಪನ ಮಾಡಲಾಗುವುದು.

ಈ ಚುನಾವಣೆಗಳಲ್ಲಿ, ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಬೇಕು, ಸಂಸತ್ತಿನಲ್ಲಿ ಎಡಪಕ್ಷಗಳ ಬಲವನ್ನು ಹೆಚ್ಚಿಸಬೇಕು ಮತ್ತು ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತಿತ ಸರಕಾರವನ್ನು ಸ್ಥಾಪಿಸಲು ಅನುವು ಮಾಡಿಕೊಡಬೇಕು ಎಂದು ಸಿಪಿಐ(ಎಂ) ಕರೆ ನೀಡಿತ್ತು. ಈ ಧ್ಯೇಯೋದ್ದೇಶಗಳನ್ನು ಈ ಜನಾದೇಶ ನಿರಾಕರಿಸಿದೆ.

ಕೇರಳದಲ್ಲಿ ಮತದಾರರು ಒಂದು ಪರ್ಯಾಯ ಜಾತ್ಯತೀತ ಸರಕಾರವನ್ನು ರಚಿಸುವಲ್ಲಿ ಕಾಂಗ್ರೆಸ್‌ಗೇ ಸಾಧ್ಯತೆ ಹೆಚ್ಚು ಎಂದು ಭಾವಿಸಿದರು. ಇದರ ಫಲಿತಾಂಶವಾಗಿ ಜಾತ್ಯತೀತ ಒಲವಿನ ಜನಗಳು ಮತ್ತು ಅಲ್ಪಸಂಖ್ಯಾತರು ಅವರಿಗೆ ಮತನೀಡುವಂತಾಯಿತು. ಶಬರಿಮಲೆ ಕುರಿತ ಸುಪ್ರಿಂ ಕೋರ್ಟ್ ತೀರ್ಪನ್ನು ಜಾರಿಗೊಳಿಸಲು ಬದ್ಧವಾಗಿದ್ದ ಎಲ್.ಡಿ. ಎಫ್. ಸರಕಾರದ ಸರಿಯಾದ ನಿಲುವನ್ನು ಕುರಿತಂತೆ ಬಿಜೆಪಿ ಮತ್ತು ಯುಡಿಎಫ್ ಆಸ್ತಿಕ ಜನವಿಭಾಗಗಳಲ್ಲಿ ಹಲವರಲ್ಲಿ ತಪ್ಪು ಕಲ್ಪನೆಗಳನ್ನು ಸೃಷ್ಟಿಸಿದವು. ಈ ವಿಭಾಗಗಳನ್ನು ಮತ್ತೆ ನಮ್ಮ ತೆಕ್ಕೆಗೆ ತರಲು ಪಕ್ಷವು ಸರ್ವ ಪ್ರಯತ್ನಗಳನ್ನು ನಡೆಸುತ್ತದೆ.

ಪಶ್ಚಿಮ ಬಂಗಾಲದಲ್ಲಿ ಚುನಾವಣೆಗಳು ಅತ್ಯಂತ ಧ್ರುವೀಕೃತ ವಾತಾವರಣದಲ್ಲಿ ನಡೆದಿವೆ. ಮಾಧ್ಯಮ ಒಂದು ಅವಳಿ ಕಥನವನ್ನು ಕಟ್ಟಿ ಟಿಎಂಸಿ ಮತ್ತು ಬಿಜೆಪಿ ನಡುವೆ ಇಂತಹ ಧ್ರುವೀಕರಣದಲ್ಲಿ ನೆರವಾಗುವಲ್ಲಿ ಒಂದು ದೊಡ್ಡ ಪಾತ್ರವನ್ನು ವಹಿಸಿತು. ಕೋಮುವಾದ ಪ್ರೇರಿತ ಪ್ರಚಾರವು ಮತದಾರರನ್ನು ಮತ್ತಷ್ಟು ಧ್ರುವೀಕರಿಸಿತು. ಟಿಎಂಸಿ ವಿರುದ್ಧ ಅಧಿಕಾರಸ್ಥ–ವಿರೋಧಿ ಭಾವನೆ ಬಹಳ ಗಟ್ಟಿಯಾಗಿತ್ತು. ಅದಕ್ಕೆ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಪರ್ಯಾಯ ಎಂದು ಮತದಾರರು ಕಾಣಲಿಲ್ಲ, ಇದರಿಂದಾಗಿ ನಮ್ಮ ಪಾರಂಪರಿಕ ಬೆಂಬಲಿಗರಲ್ಲಿ ಒಂದು ವಿಭಾಗ ಪಲ್ಲಟಗೊಳ್ಳುವಂತಾಯಿತು. ಬಿಜೆಪಿ–ವಿರೋಧಿ, ಟಿಎಂಸಿ–ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಢೀಕರಿಸುವ ಎಡಪಕ್ಷಗಳ ಪ್ರಸ್ತಾವವನ್ನು ಸ್ವೀಕರಿಸಲು ಕಾಂಗ್ರೆಸ್ ನಿರಾಕರಿಸಿದ್ದು ಈ ಅವಳಿ ಕಥನವನ್ನು ಗಟ್ಟಿಗೊಳಿಸಿತು.

ತ್ರಿಪುರಾದಲ್ಲಿ ಎರಡರಲ್ಲಿ ಒಂದು ಸ್ಥಾನದಲ್ಲಿ ಸುಮಾರಾಗಿ ಚುನಾವಣಾ ಮೋಸವೇ ನಡೆದಿದೆ.

ಪುಟ 14 ಕ್ಕೆ

50 ಕೋಟಿ ಜನ ಬರದಿಂದ ತತ್ತರ– ಯುದ್ಧೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಜಂಟಿ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಸಿಪಿಐ(ಎಂ) ಕೇಂದ್ರ ಸಮಿತಿ ಭಾರತದ ಹಲವು ಭಾಗಗಳು ಬರ ಪರಿಸ್ಥಿತಿಯಿಂದ ನರಳುತ್ತಿರುವ ಬಗ್ಗೆ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. ಸ್ಕೈಮೆಟ್, ಒಂದು ಖಾಸಗಿ ಹವಾಮಾನ ಪರಿವೀಕ್ಷಣಾ ಸಂಸ್ಥೆಯ ಪ್ರಕಾರ ಈ ಬಾರಿಯದ್ದು ಕಳೆದ 65 ವರ್ಷಗಳಲ್ಲಿ ಎರಡನೇ ಬಾರಿಗೆ ಅತೀ ಒಣ ಮಾನ್ಸೂನ್–ಪೂರ್ವ ಸೀಝನ್. 2012ರಲ್ಲಿ ಸಂಚಿತ ಮಳೆ ಕೊರತೆ 31%ಕ್ಕೆ ಏರಿತ್ತು. ಈ ವರ್ಷ ಮಾನ್ಸೂನ್–ಪೂರ್ವ ಮಳೆಯಲ್ಲಿ 25ಶೇ. ವಿಳಂಬವಿದೆ.

ವಿಶ್ವಾಸಾರ್ಹ ಮುನ್ನೆಚ್ಚರಿಕೆ ವ್ಯವಸ್ಥೆಗಳ ಪ್ರಕಾರ ದೇಶದ 40ಶೇ.ಕ್ಕಿಂತಲೂ ಹೆಚ್ಚು ಜನಸಂಖ್ಯೆ, ಅಂದರೆ 50 ಕೋಟಿ ಜನಗಳನ್ನು ಬರ ಪರಿಸ್ಥಿತಿ ತೀವ್ರವಾಗಿ ತಟ್ಟುತ್ತಿದೆ. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಕರ್ನಾಟಕ, ಬಿಹಾರ, ಗುಜರಾತ, ಝಾರ್ಖಂಡ್ ಮತ್ತು ಹೊಂದಿಕೊಂಡಿರುವ ಪಶ್ಚಿಮ ಬಂಗಾಲ. ರಾಜಸ್ಥಾನ, ತಮಿಳುನಾಡಿನ ಜಿಲ್ಲೆಗಳು ಬರವು ತೀವ್ರವಾಗಿ ತಟ್ಟಿರುವ ಪ್ರದೇಶಗಳು ಎಂದು ದಿಲ್ಲಿಯಲ್ಲಿ ಜೂನ್ 7 ರಿಂದ ಸಭೆ ಸೇರಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಆಣೆಕಟ್ಟುಗಳಲ್ಲಿ ನೀರಿನ ದಾಸ್ತಾನು ಗಂಡಾಂತರಕಾರಿ ಮಟ್ಟಕ್ಕೆ ಇಳಿದಿದೆ. ಕೇಂದ್ರ ಸರಕಾರ ಕೆಲವು ರಾಜ್ಯಗಳಿಗೆ ಬರ ಪರಿಸ್ಥಿತಿಯ ಸಲಹಾ ಪತ್ರವನ್ನು ಕಳಿಸಿದೆ. ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಒಡಿಶ ಮತ್ತು ರಾಜಸ್ಥಾನ ರಾಜ್ಯಸರಕಾರಗಳು ತಮ್ಮ ಹಲವು ಜಿಲ್ಲೆಗಳನ್ನು ಬರಪೀಡಿತ ಎಂದು ಘೋಷಿಸಿವೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ರಾಜ್ಯಗಳಿಗೆ ಪರಿಹಾರವನ್ನು ಕೊಡಲು ಮುಂದೆ ಬರುತ್ತಿಲ್ಲ ಎಂದಿರುವ ಕೇಂದ್ರ ಸಮಿತಿ, ಪ್ರಸಕ್ತ ವಿಶೇಷ ಬರ ಸನ್ನಿವೇಶವನ್ನು ಒಂದು ರಾಷ್ಟ್ರೀಯ ಅನಾಹುತ ಎಂದು ಘೋಷಿಸಬೇಕು, ಮತ್ತು ಯುದ್ಧೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಆಗ್ರಹಿಸಿದೆ.

ಕುಡಿಯುವ ನೀರಿನ ಮತ್ತು ಜಾನುವಾರುಗಳಿಗೆ ಮೇವಿನ ತೀವ್ರ ಕೊರತೆಯು ವಿಪರೀತ ಸಂಕಟವನ್ನು ಉಂಟುಮಾಡಿದೆ, ಬೆಳೆ ಸಾಗುವಳಿಯನ್ನು ಇದು ತೀವ್ರವಾಗಿ ಬಾಧಿಸಿದೆ. ದೊಡ್ಡ ಪ್ರಮಾಣದಲ್ಲಿ ಹತಾಶ ವಲಸೆ ನಡೆಯುತ್ತಿದೆ. ಹಸಿವಿನಿಂದ ಸಾವುಗಳು ಸಂಭವಿಸಿರುವ ಪ್ರಕರಣಗಳು ವರದಿಯಾಗುತ್ತಿವೆ. ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ. ಕೇಂದ್ರ ಮತ್ತು ಸಂಬಂಧಿತ ರಾಜ್ಯ ಸರಕಾರಗಳು ಕೂಡಲೇ ಬಾಕಿಯಿರುವ ಮನರೇಗ ಕೂಲಿಗಳನ್ನು ಬಿಡುಗಡೆ ಮಾಡಬೇಕು, ಶಾಲಾಶುಲ್ಕಗಳನ್ನು ಮನ್ನಾ ಮಾಡಬೇಕು ಮತ್ತು ತುರ್ತಾಗಿ ಪರಿಹಾರಗಳನ್ನು ಒದಗಿಸಬೇಕು ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಜನಗಳನ್ನು ಒಂದುಗೂಡಿಸಿ ಪ್ರತಿಭಟನಾ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಮತ್ತು ಮೂರ್ತ ಹಾಗೂ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಪ್ರಜಾಪ್ರಭುತ್ವ ಮನೋಭಾವದ ರೈತ ಸಂಘಟನೆಗಳು ಮತ್ತಿತರ ಸಾಮೂಹಿಕ ಸಂಘಟನೆಗಳ ಜೊತೆಗೆ ಪ್ರತಿಭಟಿಸಬೇಕು ಎಂದು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಗಿರೀಶ ಕಾರ್ನಾಡ್ ನಿಧನ– ಆಧುನಿಕ ಭಾರತಕ್ಕೆ ಒಂದು ದೊಡ್ಡ ನಷ್ಟ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ

ಗಿರೀಶ ಕಾರ್ನಾಡ್ ಸಮಕಾಲೀನ ಭಾರತದ ಸೃಜನಶೀಲ ಮನಸ್ಸುಗಳಲ್ಲಿ ಒಬ್ಬರಾಗಿದ್ದರು ಎಂದು ಅವರ ನಿಧನಕ್ಕೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಒಬ್ಬ ಅಪರೂಪದ ಲೇಖಕ, ನಿರ್ದೇಶಕ, ರಂಗ ವ್ಯಕ್ತಿ ಮತ್ತು ನಟನಾಗಿದ್ದ ಅವರು ಸಾಮಾಜಿಕ ಉದ್ಧಾರ ಮತ್ತು ಜಾತ್ಯತೀತತೆಗೆ ಅವಿರತ ಬದ್ಧತೆಯನ್ನು ಎತ್ತಿಹಿಡಿದವರು. ಅವರ ಸಾವು ಆಧುನಿಕ ಭಾರತಕ್ಕೆ ಒಂದು ದೊಡ್ಡ ನಷ್ಟ ಎಂದಿರುವ ಪೊಲಿಟ್‌ಬ್ಯುರೊ ಸಿಪಿಐ(ಎಂ)ನ ಹಾರ್ದಿಕ ಸಂತಾಪಗಳನ್ನು ಅವರ ಪುತ್ರ ರಘು ಕಾರ್ನಾಡ್‌ಮತ್ತು ಅವರ ಕುಟುಂಬದ ಇತರ ಸದಸ್ಯರಿಗೆ ತಿಳಿಸಿದೆ.

ಸಂಪಾದಕೀಯ

ಮೋಡ ಬಿತ್ತನೆಯ ಬದಲಾಗಿ ಮೌಢ್ಯ ಬಿತ್ತನೆ

ಭೀಕರ ಬರದಿಂದ ರಾಜ್ಯ ತತ್ತರಿಸುತ್ತಿರುವುದು ನಿಜ. ಬರದಿಂದ 138 ತಾಲೂಕುಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ. ರಾಜ್ಯದ 13 ಅಣೆಕಟ್ಟುಗಳಲ್ಲಿ ಒಟ್ಟು ನೀರಿನ ಪ್ರಮಾಣ ಶೇ. 19 ರಷ್ಟು ಇದೆ. ಕೆರೆಗಳು, ನದಿಗಳು ಬತ್ತಿಹೋಗಿವೆ. 24 ಜಿಲ್ಲೆಗಳಲ್ಲಿ ಬೇಸಿಗೆ ಮಳೆ ಕೊರತೆಯಾಗಿದೆ. ಇದರಿಂದಾಗಿ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಜಾನುವಾರಗಳಿಗೆ ಮೇವು, ನೀರು ಒದಗಿಸಲಾಗದೆ ರೈತರು ಅವುಗಳನ್ನು ಅರ್ಧ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಗ್ರಾಮೀಣ ಕೆಲಸಗಾರರು ಗೂಳೆ ಹೋಗುವುದು ಗಣನೀಯವಾಗಿ ಹೆಚ್ಚಾಗಿದೆ. ರೈತರು ಮಾತ್ರ ಅನಿವಾರ್ಯವಾಗಿ ಆಕಾಶದತ್ತ ಮುಖ ಮಾಡಿಕೊಂಡು ಮಳೆಗಾಗಿ ಪರಿತಪಿಸುತ್ತಿದ್ದಾರೆ.

ಬರಗಾಲ ಕರ್ನಾಟಕಕ್ಕೆ ಹೊಸದೇನಲ್ಲ. ಕಳೆದ 8–10 ವರ್ಷಗಳ ಅವಧಿಯಲ್ಲಿ ರಾಜ್ಯವು ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಾ ಬಂದಿದೆ. ಆದರೆ ಆಗಾಗ ಅಧಿಕಾರಕ್ಕೆ ಬರುವ ಸರ್ಕಾರಗಳಿಗೆ ಪದೆ ಪದೆ ಪುನರಾವರ್ತನೆಯಾಗುತ್ತಿರುವ ಭೀಕರ ಬರವನ್ನು ಸಮರ್ಪಕವಾಗಿ ನಿಭಾಯಿಸುವ ಇಚ್ಛಾಶಕ್ತಿಯಾಗಲಿ, ಬರಗಾಲವನ್ನು ತಡೆಗಟ್ಟಲು ಶಾಶ್ವತ ಕ್ರಮಗಳನ್ನು ಕೈಗೊಳ್ಳುವ ಆದ್ಯತೆಯಾಗಲಿ ಇಲ್ಲದಿರುವುದು ಅತ್ಯಂತ ಖೇದದ ಸಂಗತಿಯಾಗಿದೆ. ಬರಪೀಡಿತ ಜನಗಳ ಗೋಳು ಅರ್ಥಮಾಡಿಕೊಳ್ಳಲು ವಿಫಲವಾಗಿರುವ ಈ ಅಧಿಕಾರ ವ್ಯವಸ್ಥೆಯನ್ನು ಎಷ್ಟು ಖಂಡಿಸಿದರೂ ಸಾಲದು.

ವಿಪರ್ಯಾಸವೆಂದರೆ, ರಾಜ್ಯ ಸರ್ಕಾರ ಮೋಡ ಬಿತ್ತನೆಯಂತಹ ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವ ಬದಲಾಗಿ ಮಳೆಯಿಲ್ಲದೆ ಕಂಗೆಟ್ಟ ಜನಗಳ ಮನಸುಗಳಲ್ಲಿ ಮೌಢ್ಯ ಬಿತ್ತುವ ಕೆಲಸಕ್ಕೆ ಮುಂದಾಗಿದೆ. ಮುಜರಾಯಿ ಇಲಾಖೆಯಿಂದ ರಾಜ್ಯಾದ್ಯಂತ ಇಲಾಖೆಯ ವ್ಯಾಪ್ತಿಗೆ ಬರುವ ಸುಮಾರು 40 ಸಾವಿರ ದೇವಸ್ಥಾನಗಳಲ್ಲಿ ವಿಶೇಷ ಅಭಿಷೇಕ, ಹೋಮ ಹವನಗಳನ್ನು ಹಮ್ಮಿಕೊಳ್ಳಲು ಸರ್ಕಾರ ಆದೇಶ ನೀಡಿದೆ. ಪ್ರತಿಯೊಂದು ದೇವಾಲಯಕ್ಕೆ 10 ಸಾವಿರ ರೂ. ನೀಡಲಾಗಿದೆ. ಒಂದು ಸೆಕ್ಯೂಲರ್ ಸರ್ಕಾರ ಹೀಗೆ ಮಾಡಬಹುದೆ?

ಪೂಜೆ ಪುನಸ್ಕಾರಗಳಲ್ಲಿ ಇಡುವ ನಂಬಿಕೆ ವೈಯಕ್ತಿಕವಾದದ್ದು. ಮುಖ್ಯಮಂತ್ರಿ ಆದಿಯಾಗಿ ಎಲ್ಲರಿಗೂ ವ್ಯಕ್ತಿಗತ ನಂಬಿಕೆಗಳನ್ನು ಇಟ್ಟುಕೊಳ್ಳಲಿಕ್ಕೂ, ಅವುಗಳನ್ನು ಖಾಸಗಿಯಾಗಿ ಆಚರಿಸಲಿಕ್ಕೂ ಹಕ್ಕಿದೆ. ಆದರೆ ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ ಎಂಬ ಗಾದೆ ಮಾತನ್ನು ಆಗಾಗ ಉಲ್ಲೇಖಿಸುತ್ತಾ ಅದೇ ಮಂತ್ರ ತಂತ್ರಗಳಿಗೆ ಮೊರೆ ಹೋಗುವುದು ಎಷ್ಟು ಸರಿ?

ಮಳೆಗಾಗಿ ಪ್ರಾರ್ಥಿಸಿದರೆ ತಪ್ಪೇನು? ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ವ್ಯಕ್ತಿಗತವಾಗಿ ಪ್ರಾರ್ಥಿಸುವುದು ಅಥವ ಪೂಜೆ ಮಾಡಿಸುವುದರಲ್ಲಿ ತಪ್ಪಿಲ್ಲ. ಆದರೆ ಸರ್ಕಾರವೇ ಪೂಜೆ ಮಾಡಿಸುವುದು ಸಂವಿಧಾನ ಬಾಹಿರವಾಗಿದೆ. ಈ ದೇಶ ಹಲವು ಧರ್ಮ, ಹಲವು ಧಾರ್ಮಿಕ ನಂಬಿಕೆಗಳನ್ನು ಹೊಂದಿರುವ ಜನ ವಾಸಿಸುತ್ತಿರುವ ದೇಶ. ವಿವಿಧ ಮತ ಪಂಥಗಳಿಗೆ ಸೇರಿದ ಜನ ಇಲ್ಲಿ ಮತದಾನ ಮಾಡಿ ಒಂದು ಸರ್ಕಾರವನ್ನು ಅಸ್ಥಿತ್ವಕ್ಕೆ ತರುತ್ತಾರೆ. ಅವರ ಧಾರ್ಮಿಕ ನಂಬಿಕೆಗಳು, ಆಚರಣೆಗಳು ಬೇರೆ ಬೇರೆಯಾಗಿರುತ್ತವೆ. ಆ ಎಲ್ಲ ನಂಬಿಕೆಗಳನ್ನು ಮತ್ತು ಆಚರಣೆಗಳನ್ನು ಸರ್ಕಾರ ಗೌರವಿಸಬಹುದೇ ಹೊರತು ಅವುಗಳನ್ನು ಆಚರಿಸಲಾಗದು. ಎಲ್ಲಾ ಮತಧರ್ಮಗಳನ್ನು ಗೌರವಿಸುವ ಸರ್ಕಾರ ಜಾತ್ಯಾತೀತ (ಸೆಕ್ಯೂಲರ್) ಆಗಿರಬೇಕು. ಸರಕಾರ ಯಾವುದೇ ಒಂದು ಮತ ಧರ್ಮವನ್ನು ಹೊಂದಿರಬಾರದು. ಈ ಕಾರಣಕ್ಕಾಗಿಯೂ ಒಂದು ಸರ್ಕಾರ ಒಂದು ಮತಧರ್ಮದ ಆಚರಣೆಗಳನ್ನು ಸರ್ಕಾರಿ ಕಚೇರಿಗಳಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಆಚರಿಸಬಾರದು.

ಮುಜರಾಯಿ ಇಲಾಖೆ ಇರುವುದು ದೇವಾಲಯಗಳನ್ನು ಸುವ್ಯವಸ್ಥಿತವಾಗಿ ಇಟ್ಟುಕೊಳ್ಳಲು. ಅಲ್ಲಿ ಬರುವ ಆದಾಯದ ದುರುಪಯೋಗ ತಡೆಯುವುದು, ಅಲ್ಲಿ ಬರುತ್ತಿರುವ ಭಕ್ತರಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸುವುದು, ಅಲ್ಲಿಯ ಕಾನೂನುಬದ್ಧ ಆಚರಣೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಮೊದಲಾದವುಗಳು ಮುಜರಾಯಿ ಇಲಾಖೆಯ ಕರ್ತವ್ಯಗಳು. ಅಲ್ಲಿ ತಾನೇ ನಿಂತು ಪೂಜೆಗಳನ್ನು ಏರ್ಪಡಿಸುವುದು. ಮುಜರಾಯಿ ಇಲಾಖೆಯ ಕರ್ತವ್ಯವಲ್ಲ. ಭಕ್ತರು ಖಾಸಗಿಯಾಗಿ ಹೋಗಿ ಅಲ್ಲಿ ಪೂಜೆ ಸಲ್ಲಿಸಬಹುದು. ಹಾಗೆಯೇ ಮಂತ್ರಿಮಾನ್ಯರು ಖಾಸಗಿ ರೀತಿಯಲ್ಲಿ ಹೋಗಿ ಅಲ್ಲಿ ಹೋಮ–ಹವನಗಳನ್ನು ಏರ್ಪಡಿಸಬಹುದು. ಅದನ್ನು ಯಾರೂ ಆಕ್ಷೇಪಿಸಲಾರರು.

ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರ್ಕಾರ ಮೌಢ್ಯದ ವಿರುದ್ಧ ನಿರ್ದಿಷ್ಟ ಕ್ರಮಕ್ಕೆ ಮುಂದಾಗಿತ್ತು. ಹೀಗಾಗಿ ಅದು ರಾಜ್ಯದ ಎಲ್ಲಾ ಮತಧರ್ಮಗಳ ಪ್ರಗತಿಪರರ ಗೌರವಕ್ಕೆ ಪ್ರಾಪ್ತವಾಗಿತ್ತು. ಆದರೆ ಪ್ರಸಕ್ತ ಮೈತ್ರಿ ಸರ್ಕಾರ ಮೌಢ್ಯವನ್ನು ಬೆಳೆಸಲು ಮುಂದಾಗಿರುವುದು ಆಕ್ಷೇಪಾರ್ಹವಾಗಿದೆ.

ಕೂಳೂರು ಹಳೆಯ ಸೇತುವೆ ಸಂಚಾರ ನಿರ್ಬಂಧಕ್ಕೆ ವಿರೋಧ

ಕೂಳೂರು ಹಳೆಯ ಸೇತುವೆ ಸಂಚಾರಕ್ಕೆ ಅನರ್ಹಗೊಂಡಿರುವ ಕುರಿತು ವರ್ಷದ ಹಿಂದೆಯೇ ವರದಿ ಬಂದಿದ್ದರೂ, ಹೊಸ ಸೇತುವೆ ನಿರ್ಮಾಣಕ್ಕೆ ಈವರಗೆ ಯಾವ ಸಿದ್ದತೆಗಳನ್ನೂ ಮಾಡದೆ, ಪರ್ಯಾಯ ವ್ಯವಸ್ಥೆಗಳೂ ಇಲ್ಲದೆ ಈಗ ಏಕಾಏಕಿ ಹಳೆಯ ಸೇತುವೆಯಲ್ಲಿ ಪ್ರಯಾಣಿಕ ಸಾರಿಗೆ ಸಹಿತ ಘನವಾಹನಗಳಿಗೆ ನಿಷೇಧ ಹೇರಲು ನಿರ್ಧರಿಸಿರುವುದು ಖಂಡನೀಯ, ಉಳಿದ ಒಂದೇ ಅಗಲ ಕಿರಿದಾದ ಸೇತುವೆಯಲ್ಲಿ ದ್ವಿಮುಖ ಸಂಚಾರದಿಂದ ಈ ಭಾಗದಲ್ಲಿ ವಾಹನ ದಟ್ಟನೆಯಿಂದ ಅರಾಜಕತೆ ಉಂಟಾಗಲಿದ್ದು ಮಂಗಳೂರು, ಸುರತ್ಕಲ್, ಉಡುಪಿ ಮಧ್ಯೆ ಹೆದ್ದಾರಿಯಲ್ಲಿ ಸಂಪರ್ಕವೇ ಕಡಿತಗೊಳ್ಳಲಿದೆ ಎಂದು "ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ, ಸುರತ್ಕಲ್" ಇದರ ಸಂಚಾಲಕ ಮುನೀರ್ ಕಾಟಿಪಳ್ಳ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಹೆದ್ದಾರಿ ಪ್ರಾಧಿಕಾರ "ಹಳೆಯ ಸೇತುವೆ ದುರ್ಬಲಗೊಂಡಿದೆ, ವಾಹನ ಸಂಚಾರ ನಿಷೇಧಿಸಿ" ಎಂದು ಜಿಲ್ಲಾಡಳಿತಕ್ಕೆ ಸೂಚಿಸಿದಾಗಲೆ, ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ ಪರ್ಯಾಯ ವ್ಯವಸ್ಥೆಗಳಿಲ್ಲದೆ ಸೇತುವೆ ಮುಚ್ಚುವ ಪ್ರಸ್ತಾಪವನ್ನು ವಿರೋಧಿಸಿತ್ತು. ತಕ್ಷಣವೇ ಹೊಸ ಸೇತುವೆ ನಿರ್ಮಾಣ ಕೈಗೊಂಡು ವರ್ಷದೊಳಗಡೆ ಪೂರ್ಣಗೊಳಿಸುವಂತೆ ಹೋರಾಟಗಳನ್ನೂ ನಡೆಸಿತ್ತು. ಆ ಸಂದರ್ಭ ಸೇತುವೆಯಲ್ಲಿ ಸಂಚಾರ ನಿರ್ಬಂಧದ ಪ್ರಸ್ತಾಪವನ್ನು ಮುಂದೂಡಿದ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತ ಒಂದು ವರ್ಷಗಳ ಕಾಲ ದುರ್ಬಲಗೊಂಡಿರುವ ಹಳೆಯ ಸೇತುವೆಯ ಬದಲಿಯಾಗಿ ಹೊಸ ಸೇತುವೆ ನಿರ್ಮಿಸುವ ಪ್ರಾಥಮಿಕ ಕೆಲಸಗಳನ್ನೂ ಮಾಡದೆ ಕಾಲತಳ್ಳಿದೆ. ಈಗಲೂ ಹೊಸ ಸೇತುವೆ ನಿರ್ಮಾಣದ ನೀಲನಕ್ಷೆಯನ್ನೂ ಸಿದ್ದಪಡಿಸದೆ ಸೇತುವೆ ಮುಚ್ಚಲು ಹೊರಟಿದೆ. ಹೆದ್ದಾರಿ ಪ್ರಾಧಿಕಾರ, ಜಿಲ್ಲಾಡಳಿತದ ಈ ಬೇಜವಾಬ್ದಾರಿ ನಡೆಯನ್ನು ಜನತೆ ಪ್ರಶ್ನಿಸದೇ ಮೌನವಹಿಸಿದರೆ ಕನಿಷ್ಟ ಒಂದು ದಶಕಗಳ ಕಾಲ ಈ ಭಾಗದಲ್ಲಿ ಪ್ರಯಾಣವೇ ಸಾಧ್ಯವಾಗದೆ ಚಿತ್ರಹಿಂಸೆಗೆ ಗುರಿಯಾಗಬೇಕಾಗುತ್ತದೆ. ಮಂಗಳೂರು, ಸುರತ್ಕಲ್, ಉಡುಪಿ ಮಧ್ಯೆಯ ಸಂಚಾರದ ಅವ್ಯವಸ್ಥೆ ಅವಳಿ ಜಿಲ್ಲೆಗಳ ವ್ಯಾಪಾರ, ಉದ್ಯಮ, ಉದ್ಯೋಗ, ಶೈಕ್ಷಣಿಕ ವಲಯಗಳ ಮೇಲೂ ಗಂಭೀರ ಪರಿಣಾಮ ಬೀಳಲಿದ್ದು, ಜನತೆ ಪರಿತಪಿಸುವ ಸ್ಥಿತಿ ನಿರ್ಮಾಣವಾಗಲಿದೆ.

ಮುಂಬೈ, ಕೊಚ್ಚಿನ್, ಬೆಂಗಳೂರಿನಂತಹ ಪ್ರಮುಖ ವಾಣಿಜ್ಯ ಕೇಂದ್ರಗಳನ್ನು ಸಂಪರ್ಕಿಸುವ, ಅದರಲ್ಲೂ ಟೋಲ್ ಸಂಗ್ರಹಿಸುವ ಹೆದ್ದಾರಿಯ ಸೇತುವೆಗಳ ಧಾರಣಾ ಸಾಮರ್ಥ್ಯವನ್ನು ಕಾಲ ಕಾಲಕ್ಕೆ ಪರಿಶೀಲಿಸದೆ, ತೀರಾ ಕುಸಿಯುವ ಭೀತಿ ಎದುರಾಗುವವರೆಗೂ ನಿರಾತಂಕವಾಗಿರುವುದು ಹೆದ್ದಾರಿ ಪ್ರಾಧಿಕಾರದ ಕಾರ್ಯಕ್ಷಮತೆಯ ಕೊರತೆಯನ್ನು ಎತ್ತಿತೋರಿಸುತ್ತದೆ. ಕನಿಷ್ಟ ವರದಿ ಬಂದ ಮೇಲೂ ಹೊಸ ಸೇತುವೆ ನಿರ್ಮಾಣಕ್ಕೆ ಯಾವ ಸಿದ್ದತೆಯನ್ನೂ ಮಾಡಿಕೊಳ್ಳದಿರುವುದು ಕ್ಷಮಿಸಲಾಗದ ವೈಫಲ್ಯ, ಈ ಕುರಿತು ಹಲವು ಹೋರಾಟಗಳು ನಡೆದಿದ್ದರೂ ಮೌನವಾಗಿದ್ದು, ಈಗ ಸಂಚಾರ ನಿಷೇಧಿಸಲು ಹೊರಟಿರುವುದನ್ನು ಯಾವ ಕಾರಣಕ್ಕೂ ಒಪ್ಪಲಾಗದು. ಈ ಎಲ್ಲಾ ಸಮಸ್ಯೆಗಳಿಗೆ ಹೆದ್ದಾರಿ ಪ್ರಾಧಿಕಾರ, ಜಿಲ್ಲಾಡಳಿತದ ಜೊತೆಗೆ ಸಂಸದ ನಳಿನ್ ಕುಮಾರ್ ಕಟೀಲ್ ನೇರಕಾರಣರಾಗಿದ್ದಾರೆ. ಪಂಪ್ ವೆಲ್, ತೊಕ್ಕೊಟ್ಟು ಮೇಲ್ಸೇತುವೆ, ಸುರತ್ಕಲ್ ಅಕ್ರಮ ಟೋಲ್ ಗೇಟ್ ಮುಚ್ಚುವಿಕೆ, ಕೂಳೂರು ಹೊಸ ಸೇತುವೆ ಕುರಿತು ಸತತವಾಗಿ ಸಂಘಟನೆಗಳು ಧ್ವನಿ ಎತ್ತುತ್ತಾ ಬಂದಿದ್ದರೂ, ಹೆದ್ದಾರಿ ಪ್ರಾಧಿಕಾರ, ಕೇಂದ್ರ ಸಾರಿಗೆ ಇಲಾಖೆಗಳ ಕಿವಿ ಹಿಂಡಿ ಸಮಸ್ಯೆ ಪರಿಹರಿಸದೆ, ಸುಳ್ಳು ಭರವಸೆ, ಉನ್ಮಾದಕಾರಿ ಭಾಷಣಗಳಿಂದಲೇ ಜನತೆಯನ್ನು ದಿಕ್ಕುತಪ್ಪಿಸುತ್ತಾ ಬಂದಿದ್ದಾರೆ. ಸಂಸದರ ಇಂತಹ ಅಪ್ರಬುದ್ಧ ನಡವಳಿಕೆಗಳೇ ಮಂಗಳೂರು ಉಡುಪಿ ಮಧ್ಯೆಯಲ್ಲಿ ಹೆದ್ದಾರಿ ಸಮಸ್ಯೆಗಳು ಜನಜೀವನವನ್ನೇ ಅಸ್ತವ್ಯಸ್ಥಗೊಳಿಸತೊಡಗಿದೆ.

ಸಮಸ್ಯೆಗಳು ಏನೆ ಇದ್ದರೂ ಹೊಸ ಸೇತುವೆ ನಿರ್ಮಿಸದೆ, ಹಳೆಯ ಸೇತುವೆಯಲ್ಲಿ ಸಂಚಾರ ನಿರ್ಬಂಧವನ್ನು ಒಪ್ಪಲು ಸಾಧ್ಯವಿಲ್ಲ. ಹೆದ್ದಾರಿ ಪ್ರಾಧಿಕಾರ, ರಾಜ್ಯ ಸರಕಾರ ಸಮರೋಪಾದಿ ಕಾಮಗಾರಿಯ ಮೂಲಕ ಕಾಲಮಿತಿಯೊಳಗಡೆ ಹೊಸ ಸೇತುವೆಯನ್ನು ಕೂಳೂರಿನಲ್ಲಿ ನಿರ್ಮಿಸಬೇಕು. ಅಲ್ಲಿಯವರಗೆ ಹಳೆ ಸೇತುವೆಯನ್ನು ಆಧುನಿಕ ತಂತ್ರಜ್ಞಾನವನ್ನು ಬಳಸಿ ತಾತ್ಕಾಲಿಕ ದುರಸ್ಥಿ ನಡೆಸಿ ಸಂಚಾರಕ್ಕೆ ಯೋಗ್ಯಗೊಳಿಸಬೇಕು. ಅದಲ್ಲದೆ ಹಳೆ ಸೇತುವೆ ಮುಚ್ಚಲು ಹೊರಟು ಅರಾಜಕತೆ ಸೃಷ್ಟಿಸಲು ಮುಂದಾದರೆ ಜನಸಮೂಹವನ್ನು, ಸಂಘಟನೆಗಳನ್ನು ಜೊತೆ ಸೇರಿಸಿ "ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ" ನೇತೃತ್ವದಲ್ಲಿ ಪ್ರಬಲ ಹೋರಾಟವನ್ನು ಸಂಘಟಿಸಲಾಗುವುದು ಎಂದು ಮುನೀರ್ ಕಾಟಿಪಳ್ಳ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತವನ್ನು ಎಚ್ಚರಿಸಿದ್ದಾರೆ.

–ಮುನೀರ್ ಕಾಟಿಪಳ್ಳ

ಬಿಹಾರದಲ್ಲಿ ತೀವ್ರ ಮಿದುಳು ಉರಿಯೂತದಿಂದ ನೂರಕ್ಕೂ ಹೆಚ್ಚು ಮಕ್ಕಳ ಸಾವು –ಯುದ್ಧೋಪಾದಿಯಲ್ಲಿ ಸಾಂಕ್ರಾಮಿಕಕ್ಕೆ ತಡೆ ಹಾಕಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಬಿಹಾರದಲ್ಲಿ, ಮುಖ್ಯವಾಗಿ ಮುಝಫ್ಫರ್ಪುರ್‌ನಲ್ಲಿ ಇದುವರೆಗೆ 120ಕ್ಕೂ ಹೆಚ್ಚು ಮಕ್ಕಳು ಎಇಎಸ್ ಎಂಬ ತೀವ್ರ ಮಿದುಳು ಉರಿಯೂತಕ್ಕೆ ಬಲಿಯಾಗಿದ್ದಾರೆ. ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಮಕ್ಕಳ ಸಾವಿಗೆ ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಕೇಂದ್ರ ಮತ್ತು ರಾಜ್ಯ ಆರೋಗ್ಯ ಅಧಿಕಾರಿಗಳು ಈ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಯುದ್ಧೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಬಿಹಾರದ ಸಿಪಿಐ(ಎಂ) ಮುಖಂಡರ ಒಂದು ನಿಯೋಗ ಸಾವಿಗೀಡಾದ ಮಕ್ಕಳ ಪಾಲಕರನ್ನು ಭೇಟಿಯಾಗಿ ಈ ದುರಂತಕ್ಕೆ ಕಾರಣಗಳನ್ನು ತಿಳಿಯಲು ಪ್ರಯತ್ನಿಸುತ್ತಿದೆ. ಈ ಸಾಂಕ್ರಾಮಿಕವನ್ನು ತಡೆಯಲು, ವೈದ್ಯರ ಒಂದು ತಂಡವೂ ಸೇರಿದಂತೆ ಏನಲ್ಲಾ ಸಹಾಯ ಬೇಕೋ ಅದನ್ನು ಒದಗಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಮಕ್ಕಳ ದುಃಖತಪ್ತ ಕುಟುಂಬಗಳಿಗೆ ತನ್ನ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.





'ದೇಣಿಗೆದಾರ'ರಿಗೆ ಮರುಪಾವತಿ ಮತ್ತು 'ವೋಟುದಾರ'ರಿಗೆ ಬಲವಂತದ ಲೂಟಿ: ಮೋದಿ-02 ಸರಕಾರದ ಧ್ಯೇಯ

'ಭಾರಿ ಸದ್ದಿನ ಸುಧಾರಣೆ'ಗಳ ವಿರುದ್ಧ ದುಡಿಮೆಗಾರರ ಐಕ್ಯತೆಯ ಬಲಪ್ರಯೋಗಕ್ಕೆ ಸಿಐಟಿಯು ಕರೆ

ಮೋದಿ-02 ಸರಕಾರ ಅಧಿಕಾರ ವಹಿಸಿಕೊಳ್ಳುತ್ತಿರುವಂತೆಯೇ ಅದು ಐದು ವರ್ಷಗಳ ಹಿಂದೆ ಸೃಷ್ಟಿಸಿದ 'ನೀತಿ' ಆಯೋಗ ಕಾರ್ಮಿಕ ಕಾನೂನುಗಳ ಬದಲಾವಣೆಗಳಿಂದ ಹಿಡಿದು 46 ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಅಥವ ಮುಚ್ಚುವ 'ಭಾರೀ ಸದ್ದಿನ ಸುಧಾರಣೆ'ಗಳನ್ನು ತರುವುದಾಗಿ ಪ್ರಕಟಿಸಿದೆ. "ಅವರು (ವಿದೇಶಿ ಹೂಡಿಕೆದಾರರು) ಸಂತೋಷ ಪಡುತ್ತಾರೆ.. .. ಸರಕಾರ ವಿದೇಶಿ ಹೂಡಿಕೆದಾರರಿಗೆ ಕೊಡಮಾಡಲು ಸರಕಾರೀ ಜಮೀನಿನ ಒಂದು ದಾಸ್ತಾನು ಪಟ್ಟಿಯನ್ನು ತಯಾರಿಸುತ್ತದೆ" ಎಂದು ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಹೇಳಿದ್ದಾರೆ.

ಅತ್ತ ಅಮೆರಿಕನ್ ಖಾಸಗಿ ಕಾರ್ಪೊರೇಟ್‌ಗಳು ಭೂಮಿ ಮತ್ತು ಕಾರ್ಮಿಕ ಕಾನೂನುಗಳು ಇ-ವಾಣಿಜ್ಯದಲ್ಲಿ ಬದಲಾವಣೆಗಳು ಸೇರಿದಂತೆ 'ಧೀರ ಸುಧಾರಣೆ'ಗಳನ್ನು ತರಬೇಕು ಎಂದು ಭಾರತದ ಹೊಸ ಸರಕಾರಕ್ಕೆ ಹೇಳಿರುವ ಹೇಳಿಕೆಯೊಂದಿಗೆ ನೀತಿ ಆಯೋಗದ ಉಪಾಧ್ಯಕ್ಷರ ಹೇಳಿಕೆಯನ್ನು ನೋಡಬೇಕು ಎಂದು ಸಿಐಟಿಯು ಹೇಳಿದೆ.

ದೇಶದ ಕಾರ್ಮಿಕ ವರ್ಗ ಮತ್ತು ರೈತಾಪಿಗಳು ವಿರೋಧಿಸಿರುವ ಧೋರಣೆಗಳನ್ನೇ ಮೋದಿ-02 ಸರಕಾರ ರಭಸದಿಂದ ಅನುಸರಿಸಲಿದೆ ಎಂಬುದರ ಒಂದು ಸ್ಪಷ್ಟ ಸಂಕೇತವನ್ನು ಕಾರ್ಮಿಕ ವರ್ಗಕ್ಕೆ ಮತ್ತು ಭಾರತದ ಶ್ರಮಜೀವಿಗಳಿಗೆ ನೀಡಲಾಗಿದೆ ಎಂದು ಅದು ಹೇಳಿದೆ.

ದುಡಿಮೆಗಾರರ ಮೇಲೆ ಗುಲಾಮಗಿರಿಯ ಪರಿಸ್ಥಿತಿಗಳನ್ನು ಹೇರಲು ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆಗಳನ್ನು ನಿಖರವಾಗಿ ರೂಪಿಸಲಾಗುತ್ತಿದೆ. ಅದೇ ರೀತಿ, ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣವು ರಾಷ್ಟ್ರೀಯ ಆಸ್ತಿಗಳನ್ನು ಸರಕಾರದ ಅತ್ಯಂತ ಪ್ರೀತಿಯ ಕಾರ್ಪೊರೇಟ್‌ಗಳ ಲೂಟಿ ಹೊಡೆಯಲು ಅವಕಾಶ ಮಾಡಿಕೊಡುತ್ತದೆ, ಮತ್ತು ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ದೇಶೀ ತಯಾರಿಕಾ ಸಾಮರ್ಥ್ಯವನ್ನು ನಾಶಮಾಡಲು ಹಾಗೂ ವಿಕೈಗಾರಿಕೀಕರಣಕ್ಕೆ ಹಾದಿ ಮಾಡಿ ಕೊಡುತ್ತದೆ ಎಂದು ಸಿಐಟಿಯು ಹೇಳಿದೆ.

ಮೋದಿ ಸರಕಾರದ ಭಾರೀ ಸದ್ದಿನ ಸುಧಾರಣೆ ಅದಕ್ಕೆ ಒಂದು ನಿರ್ಣಾಯಕ ಆದೇಶದ ನೀಡಿದ ಜನಸಮೂಹಗಳ ಜೀವನ ಮತ್ತು ಜೀವನಾಧಾರಗಳನ್ನೇ ಧ್ವಂಸಗೊಳಿಸುವತ್ತ ಒಯ್ಯುತ್ತದೆ. ದೇಶೀ ಮತ್ತು ವಿದೇಶೀ 'ದೇಣಿಗೆದಾರರಿಗೆ' ಮರುಪಾವತಿ ಮತ್ತು 'ವೋಟುದಾರರಿಗೆ' ಅಂದರೆ ಜನಸಾಮಾನ್ಯರಿಗೆ ಬಲವಂತದ ಲೂಟಿ– ಇದೇ ಮೋದಿ-02 ಸರಕಾರದ ಧ್ಯೇಯವಾಗಿದೆ ಎಂದು ಸಿಐಟಿಯು ಹೇಳಿದೆ.

ಸರಕಾರದ ಈ ವಿನಾಶಕಾರಿ ಜನ-ವಿರೋಧಿ ಮತ್ತು ದೇಶ-ವಿರೋಧಿ ನಡೆಯನ್ನು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳ ಐಕ್ಯ ವೇದಿಕೆಯ ನೇತೃತ್ವದಲ್ಲಿ ಕಾರ್ಮಿಕ ಜನಸಮೂಹಗಳ ಐಕ್ಯ ಹೋರಾಟದ ಸಂಪೂರ್ಣ ಬಲಪ್ರಯೋಗದಿಂದ ವಿರೋಧಿಸಬೇಕು ಎಂದಿರುವ ಸಿಐಟಿಯು ದೇಶದ ಕಾರ್ಮಿಕ ವರ್ಗ ತಾನು ಶ್ರಮಪಟ್ಟು ಗಳಿಸಿರುವ ಹಕ್ಕುಗಳನ್ನು ಮತ್ತು ದೇಶದ ಸಾರ್ವಭೌಮತೆಯನ್ನು ರಕ್ಷಿಸಲು ದೊಡ್ಡ ಹೋರಾಟಗಳಿಗೆ ಸನ್ನದ್ಧಗೊಳ್ಳಬೇಕು ಎಂದು ಕರೆ ನೀಡಿದೆ.

ದೇಶಪ್ರೇಮಿಗಳ ಜನಾದೇಶ ಕಾರ್ಮಿಕರ ಹಕ್ಕುಗಳನ್ನು, ಆರ್ಥಿಕ ಸಾರ್ವಭೌಮತೆಯನ್ನು ಧ್ವಂಸಗೊಳಿಸಲಿಕ್ಕಲ್ಲ–ಬಿಇಎಫ್‌ಐ

ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆಯ ಹೆಸರಲ್ಲಿ ಬದಲಾವಣೆಗಳು, ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಮತ್ತಿತರ ಕ್ರಮಗಳನ್ನು ಮೋದಿ-01 ಸರಕಾರ ಜಾರಿಗೊಳಿಸಲು ಯೋಚಿಸಿತ್ತು. ಆದರೆ ಇಂತಹ ರಾಷ್ಟ್ರ-ವಿರೋಧಿ ನಿರ್ಧಾರಗಳಿಗೆ ಕಾರ್ಮಿಕ ವರ್ಗದ, ರೈತಾಪಿ ಜನಗಳು, ಮಧ್ಯಮ ವರ್ಗದ ನೌಕರರು, ವಿದ್ಯಾರ್ಥಿಗಳು, ಯುವಜನರು ಮತ್ತು ಒಟ್ಟು ಜನಸಾಮಾನ್ಯರ ಬಲವಾದ ಪ್ರತಿರೋಧದಿಂದಾಗಿ, ವ್ಯಾಪಕ ಜನಾಂದೋಲನಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ದೇಶದ ಕಾರ್ಮಿಕ ವರ್ಗ ಸಪ್ಟಂಭರ್ 2015, ಸಪ್ಟಂಬರ್2016 ಮತ್ತು ಜನವರಿ 2019ರಲ್ಲಿ ಒಟ್ಟು ನಾಲ್ಕು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿತು. ಈಗ ಇಂತಹ ಭಾರೀ ವಿರೋಧವನ್ನು ತುಳಿದು ಹಾಕುವ ಅಜೆಂಡಾವನ್ನು ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳು ಮೋದಿ-02 ಸರಕಾರದ ಮುಂದಿಟ್ಟಿವೆ ಎಂದು ಭಾರತದ ಬ್ಯಾಂಕ್ ನೌಕರರ ಒಕ್ಕೂಟ(ಬಿಇಎಫ್‌ಐ) ಇದನ್ನು ವರ್ಣಿಸಿದೆ.

ಇತ್ತೀಚೆಗೆ ದೇಶದ ಜನತೆ ಕೇಂದ್ರದಲ್ಲಿ ಈ ಸರಕಾರಕ್ಕೆ ನಿರ್ಣಾಯಕ ಮತನೀಡಿ ಪುನರಾಯ್ಕೆ ಮಾಡಿದ್ದಾರೆ. ಆದರೆ ದೇಶಪ್ರೇಮಿ ನಾಗರಿಕರ ಈ ಜನಾದೇಶ ನಮ್ಮ ದೇಶದ ಆರ್ಥಿಕ ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ಧ್ವಂಸಗೊಳಿಸುವ ಇಂತಹ ಜನ-ವಿರೋಧಿ 'ಸುಧಾರಣಾ' ಅಜೆಂಡಾಕ್ಕೆ ಅಲ್ಲ ಎಂದು ಬಿಇಎಫ್‌ಐ ಹೇಳಿದೆ.

ಸಮರ ಘೋಷಣೆಯಾಗಿದೆ. ಸರಕಾರ ಇಂತಹ ಮಹಾ ಹಾನಿಕಾರಕ ಧೋರಣೆಗಳನ್ನು ಅನುಸರಿಸಲು ಕಟಿಬದ್ಧವಾಗಿರುವುದಾಗಿ ಸ್ಪಷ್ಟಪಡಿಸಿದೆ. ದೇಶದ ಎಲ್ಲ ಜನವಿಭಾಗಗಳು ನಮ್ಮ ಪ್ರೀತಿಯ ದೇಶಕಯಿಂತಹ "ಭಾರೀ ಸದ್ದಿನ ಆರ್ಥಿಕ ಸುಧಾರಣೆ"ಗಳ ವಿರುದ್ಧ ಎದ್ದು ನಿಲ್ಲತ್ತವೆ ಎಂಬ ವಿಶ್ವಾಸವನ್ನು ಬಿಇಎಫ್‌ಐ ವ್ಯಕ್ತಪಡಿಸಿದೆ.

ಅಮೆರಿಕಾ ಆಣತಿ ಎದುರು ಇಳಿದು ಹೋಯಿತೇ ಮೋದಿ ಸರಕಾರದ 'ರಾಷ್ಟ್ರವಾದ'ದ ಅಬ್ಬರ?

ಟ್ರಂಪ್ ಆಡಳಿತದ ದಬಾವಣೆಗಳಿಗೆ ಪ್ರತಿಕ್ರಮಗಳೇಕೆ ಇಲ್ಲ? – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಮೆರಿಕ ಸಂಯುಕ್ತ ಸಂಸ್ಥಾನ 'ಜನರಲೈಸ್ಡ್ ಸಿಸ್ಟಮ್ ಆಫ್ ಪ್ರಿಫರೆನ್ಸ್' (ಸಾಮಾನ್ಯೀಕರಿಸಿದ ಆದ್ಯತೆಯ ವ್ಯವಸ್ಥೆ) ಅಡಿಯಲ್ಲಿ ಭಾರತಕ್ಕೆ ಇದ್ದ ಆದ್ಯತೆಯ ಅವಕಾಶಗಳನ್ನು ಕೊನೆಗೊಳಿಸಲು ನಿರ್ಧರಿಸಿದೆ. ಇದು ಅಕಾರಣ ಮತ್ತು ಅನಗತ್ಯ ಕ್ರಮ. ಇದು ಅಮೆರಿಕಾಕ್ಕೆ ಅನುಕೂಲಕರವಾಗುವಂತಹ ವ್ಯಾಪಾರ ಷರತ್ತುಗಳನ್ನು ಒಪ್ಪಿಕೊಳ್ಳುವಂತೆ ಭಾರತವನ್ನು ಬಲವಂತ ಮಾಡಲು ಟ್ರಂಪ್ ಆಡಳಿತ ಆರಂಭಿಸಿರುವ ಅಮೆರಿಕ-ಭಾರತ ವ್ಯಾಪಾರ ಕುರಿತ ಕ್ರಮಗಳ ಸರಣಿಯ ಒಂದು ಭಾಗವಾಗಿದೆ. ಈ ಹಿಂದೆ ಅದು ಭಾರತದಿಂದ ಆಮದು ಮಾಡುವ ಉಕ್ಕು ಮತ್ತು ಅಲ್ಯುಮಿನಿಯಂ ಮೇಲೆ ಸುಂಕಗಳನ್ನು ಹೆಚ್ಚಿಸಿತ್ತು.

ಮಾರ್ಚ್ ತಿಂಗಳ ಆರಂಭದಲ್ಲೇ ಟ್ರಂಪ್ ಆಡಳಿತ ಈ ಕ್ರಮವನ್ನು ಕೈಗೊಳ್ಳುವ ಬಗ್ಗೆ ಪ್ರಕಟಿಸಿದ್ದರೂ ಇದನ್ನು ತಡೆಯಲು ಅಥವ ಇದನ್ನು ಎದುರಿಸಲು ಏನೂ ಮಾಡಲಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ. ಇರಾನಿನಿಂದ ತೈಲ ಖರೀದಿಯನ್ನು ಅಮೆರಿಕಾ ನಿಷೇಧಿಸಿದಾಗ ತಳೆದಂತೆ, ಈಗಲೂ ಶರಣಾಗುವ ನಿಲುವನ್ನು ತಳೆಯುತ್ತಿದೆ.

ಇದು ನರೇಂದ್ರ ಮೋದಿ ಮತ್ತು ಬಿಜೆಪಿ ಅಬ್ಬರಿಸುತ್ತಿದ್ದ 'ರಾಷ್ಟ್ರವಾದ'ವನ್ನು ನಗೆಪಾಟಲು ಮಾಡುತ್ತಿದೆ, ಅವರ ಈ 'ರಾಷ್ಟ್ರವಾದ' ಅಮೆರಿಕಾದ ಆಣತಿಗಳು ಬಂದಾಗ ಕೆಲಸವನ್ನೇ ಮಾಡುವದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ತ್ರಿಭಾಷಾ ಸೂತ್ರದ ಬಲವಂತ ಬೇಡ, ಕರಡನ್ನು ಹಿಂದಕ್ಕೆ ಪಡೆಯಬೇಕು–ಸಿಪಿಐ(ಎಂ) ಪೊಲಿಟ್ ಬ್ಯುರೊ

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಬಿಡುಗಡೆ ಮಾಡಿರುವ ಕರಡು ರಾಷ್ಟ್ರೀಯ ಶಿಕ್ಷಣ ಧೋರಣೆ ಶಾಲಾ ಶಿಕ್ಷಣದ ಪ್ರಾಥಮಿಕ ಹಂತದಿಂದಲೇ ತ್ರಿಭಾಷಾ ಸೂತ್ರವನ್ನು ಅನುಸರಿಸುವ ಪ್ರಸ್ತಾವವನ್ನು ಇಟ್ಟಿದೆ. ಈ ರೀತಿಯ ಹೇರಿಕೆಅಯನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ನಿಸ್ಸಂದಿಗ್ಧವಾಗಿ ವಿರೋಧಿಸಿದೆ. ಈ ವಿರೋಧ ಯಾವುದೇ ಒಂದು ಭಾಷೆಗೆ ಅಲ್ಲ, ಬದಲಾಗಿ ಎಲ್ಲ ಭಾರತೀಯ ಭಾಷೆಗಳಿಗೆ ಬೆಳೆಯಲು ಮತ್ತು ಸಮೃದ್ಧಗೊಳ್ಳಲು ಸಮಾನ ಅವಕಾಶಗಳನ್ನು ಖಾತ್ರಿಗೊಳಿಸುವುದಕ್ಕಾಗಿ ಎಂದು ಸಿಪಿಐ(ಎಂ) ಹೇಳಿದೆ.

ಕರಡಿನಲ್ಲಿರುವ ಈ ಸಂವೇದನಾಹೀನ ವಿಚಾರದ ವಿರುದ್ಧ ವ್ಯಾಪಕ ಪ್ರತಿಕ್ರಿಯೆಗಳು, ವಿಶೇಷವಾಗಿ ದಕ್ಷಿಣದ ರಾಜ್ಯಗಳಿಂದ ವ್ಯಕ್ತವಾಗಿವೆ. ಬಲವಂತದ ಹೇರಿಕೆ ಭಾಷಾ ಸಂಕುಚಿತವಾದದ ಭಾವನೆಗಳು ಬೆಳೆಯಲು ಕಾರಣವಾಗುತ್ತದೆ, ಆ ಮೂಲಕ ನಮ್ಮ ಜನಗಳ ಮತ್ತು ದೇಶದ ಐಕ್ಯತೆಗೆ ಹಾನಿಕಾರಕವಾಗುತ್ತದೆ.

ಈ ಬಲವಾದ ಟೀಕೆ ಸರಕಾರವನ್ನು ಕುಟುಕಿದ್ದು, ಈ ದಸ್ತಾವೇಜು ಕೇವಲ ಕರಡು ಮಾತ್ರ ಎಂದು ಅದು ಸ್ಪಷ್ಟೀಕರಣ ನೀಡಿದೆ. ಇದು ಅತ್ಯಂತ ಸೂಕ್ಷ್ಮ ಸ್ವರೂಪದ ಪ್ರಶ್ನೆಯಾದ್ದರಿಂದ ಕರಡನ್ನು ಸರಕಾರ ಹಿಂತೆಗೆದುಕೊಳ್ಳಬೇಕು ಮತ್ತು ಈ ವಿವಾದಕ್ಕೆ ಪೂರ್ಣವಿರಾಮ ಹಾಕಿ ಹೊಸದೊಂದು ಕರಡನ್ನು ಮಂಡಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಸರಕಾರ ಮುಂದಿಟ್ಟಿರುವ ಈ ಕಳವಳಕಾರಿ ಹೆಜ್ಜೆಯನ್ನು ಹಿಂದಕ್ಕೆ ಸೆಳೆಯುವಂತೆ ಒತ್ತಡ ತರಲು ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಸರಿಯಾದ ದಿಕ್ಕಿನಲ್ಲಿ ಯೋಚಿಸುವ ನಾಗರಿಕರು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಂಗಳಲ್ಲಿರುವ ಸಂಘಟನೆಗಳು, ಗುಂಪುಗಳು ಮತ್ತು ವ್ಯಕ್ತಿಗಳೆಲ್ಲರೂ ತಮ್ಮ ದನಿಯನ್ನು ಎತ್ತಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ ಮಾಡಿಕೊಂಡಿದೆ.

ಬಿಜೆಪಿ ಸರಕಾರಗಳ ವಿರುದ್ಧ ಮತ್ತೆ ಬೀದಿಗಿಳಿದ ಮಹಾರಾಷ್ಟ್ರ ರೈತರು

ಜೂನ್ 1 ರಂದು, ಕೇಂದ್ರದಲ್ಲಿ ಹೊಸ ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡ ಎರಡೇ ದಿನಗಳ ನಂತರ. ಅದರ ವಿರುದ್ಧ ಮತ್ತು ಮಹಾರಾಷ್ಟ್ರದ ಬಿಜೆಪಿ-ಶಿವಸೇನಾ ಸರಕಾರದ ವಿರುದ್ಧ ಹಲವು ಜಿಲ್ಲೆಗಳಲ್ಲಿ ಸಾವಿರಾರು ರೈತರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಬರ ಪರಿಹಾರ, ಸಾಲ ಮನ್ನಾ, ನ್ಯಾಯಯುತ ಬೆಲೆಗಳು, ಭೂಮಿ ಹಕ್ಕುಗಳು, ಪಡಿತರ, ಪೆನ್ಶನ್ ಮತ್ತಿತರ ಸ್ಥಳೀಯ ಪ್ರಶ್ನೆಗಳಲ್ಲಿ ಸರಕಾರದ ವಿಶ್ವಾಸಘಾತದ ವಿರುದ್ಧ ಪ್ರತಿಭಟಿಸಿದರು. ಜೂನ್ 1 ರಾಜ್ಯದ ರೈತ ಆಂದೋಲನದ ಇತಿಹಾಸದಲ್ಲಿ ಒಂದು ಚಾರಿತ್ರಿಕ ದಿನವೂ ಆಗಿದೆ. 2017ರಲ್ಲಿ ನಡೆದ ಇಲ್ಲಿಯ ರೈತರ ಚಾರಿತ್ರಿಕ 11 ದಿನಗಳ ಮುಷ್ಕರದ ಎರಡನೇ ವಾರ್ಷಿಕಾಚರಣೆಯ ದಿನವೂ ಆಗಿತ್ತು.





ಜಿಂದಾಲ್ ಕಂಪೆನಿಗೆ 3667 ಎಕರೆ ಭೂಮಿ ನೀಡುವ ತೀರ್ಮಾನ ರದ್ದಾಗಲಿ – ಸಿಪಿಐ(ಎಂ)

ಜಿಂದಾಲ್ ಕಂಪನಿಗೆ ತೋರಣ ಗಲ್ಲು ಹತ್ತಿರ 3667 ಎಕರೆ ಭೂಮಿಯನ್ನು ನೀಡುವ ರಾಜ್ಯ ಸರ್ಕಾರದ ತೀರ್ಮಾನದ ವಿರುದ್ಧ ಸಿಪಿಐ(ಎಂ) ತಾಲ್ಲೂಕು ಸಮಿತಿ ಸೊಂಡೂರಿನಲ್ಲಿ 6 ಜೂನ್ 2019 ರಂದು ಮಾನವ ಸರಪಳಿ ರಚಿಸಿ ಪ್ರತಿಭಟಿಸಿತು. ತಹಶಿಲ್ದಾರಗೆ ಮನವಿ ಪತ್ರ ನೀಡಲಾಯಿತು. ಆರ್.ಎಸ್. ಬಸವರಾಜ, ಚನ್ನಬಸಯ್ಯ, ಎ.ಸಾಮಿ, ಯು. ತಿಪ್ಪೇಸ್ವಾಮಿ, ಗಾಳಿ ಬಸವರಾಜ, ದುರುಗಮ್ಮ, ಇತರರು ಭಾಗವಹಿಸಿದ್ದರು.

ಜಿಂದಾಲ್ ಸೌತ್ ವೆಸ್ಟ್ ಸ್ಟೀಲ್ ಲಿಮಿಟೆಡ್ ಕಂಪನಿಗೆ ತೋರಣಗಲ್ಲು ಹತ್ತಿರ 3667 ಎಕರೆ ಭೂಮಿಯನ್ನು ನೀಡುವ ರಾಜ್ಯ ಸಚಿವ ಸಂಪುಟದ ತೀರ್ಮಾನದಿಂದ ರಾಜ್ಯದ ಬೊಕಸಕ್ಕೆ ನಷ್ಟವಾಗಲಿದ್ದು ಜನ ವಿರೋಧಿ ಹೊಸ ಕ್ರಯ ಪತ್ರವನ್ನು ರದ್ದು ಪಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ದಿನಾಂಕ 27 ಮೇ 2019 ರಂದು ನಡೆದ ಕರ್ನಾಟಕ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಗ್ರಾಮ ಮತ್ತು ಕುರೇಕುಪ್ಪ ಪುರಸಭೆ ವ್ಯಾಪ್ತಿಯ 2000.58 ಎಕರೆ ಭೂಮಿಯನ್ನು ರೂ. 1,22,200 ಮತ್ತು ಸುಲ್ತಾನಾಪುರ ಗ್ರಾಮದ ಮೂಸಿನಾಯಕನಹಳ್ಳಿ, ಯರಬನಹಳ್ಳಿಗಳಲ್ಲಿ 1666.73 ಜಮೀನು ರೂ. 1,50,635 ಬೆಲೆ ನಿಗದಿಮಾಡಿ ಅನುಮೋದನೆ ನೀಡಲಾಗಿದೆ. ಇದು ಮಾರುಕಟ್ಟೆ ಬೆಲೆಗೆ ತೀರಾ ಕಡಿಮೆಯಾಗಿದೆ. ಕಾನೂನು ಇಲಾಖೆಯ ಅಕ್ಷೇಪವನ್ನು ಸಹ ನಿರ್ಲಕ್ಷಿಸಲಾಗಿದೆ. ಕಳೆದ 13 ವರ್ಷಗಳ ಹಿಂದೆ 2005ರಲ್ಲಿ ಇದೇ ಭೂಮಿಯನ್ನು ಪ್ರತಿ ಎಕರೆಗೆ ರೂ. 90,000 ಕ್ಕೆ ಮತ್ತು 2007ರಲ್ಲಿ ರೂ. 1,22,199 ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡಿತ್ತು. ಜಿಂದಾಲ್ ಸೌತ್ ವೆಸ್ಟ್ ಸ್ಟೀಲ್ ಲಿಮಿಟೆಡ್ ಬೃಹತ್ ಕೈಗಾರಿಕೆಗಳು ಸ್ಥಾಪಿಸಿರುವ ಈ ಪ್ರದೇಶದಲ್ಲಿ ಅವಧಿ ಮುಕ್ತಾಯ ನಂತರ ಹೊಸ ಕ್ರಯ ಪತ್ರದ ಸಂದರ್ಭದಲ್ಲಿ ಈ ಹಿಂದಿನ ಕರಾರು ಒಪ್ಪಂದಗಳ ಜಾರಿ ಮತ್ತು ಈಗಿನ ಮಾರುಕಟ್ಟೆ ಬೆಲೆ ವಿಮರ್ಶೆ ಮಾಡದೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸುವ ಮೂಲಕ ಜನವಿರೋಧಿ ನೀತಿಯನ್ನು ಅನುಸರಿಸಿ ರಾಜ್ಯ ಬೊಕ್ಕಸಕ್ಕೆ ಕೋಟ್ಯಾಂತರ ರೂ. ಗಳ ಹಾನಿಯನ್ನು ಉಂಟುಮಾಡಲಾಗಿದೆ. ಈ ಹಿಂದೆ 125 ಕೋಟಿ ಲಂಚ ಪ್ರಕರಣದಿಂದ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಇನ್ನೂ ಚೇತರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಬಿಜೆಪಿ ರಾಜ್ಯ ಅಧ್ಯಕ್ಷ ಹಾಗೂ ಮಾಜಿ ಮುಖ್ಯ ಮಂತ್ರಿ ಬಿ. ಎಸ್. ಯಡಿಯೂರಪ್ಪ ನವರ ಕುಟಂಬ ನೇತೃತ್ವದ ಸಂಸ್ಥೆ 40 ಕೋಟಿ ಹಣವನ್ನು ಚೆಕ್ ಮೂಲಕ ಪಡದು ಜಿಂದಾಲ್ ಅಕ್ರಮಗಳಿಗೆ ಸಹಾಯ ಮಾಡಿದೆ. ಕಾಂಗ್ರೆಸ್ ಗಣಿ ಅಕ್ರಮಗಳ ವಿರುದ್ಧ ಕಾಲು ನಡಿಗೆ ಜಾಥ ನಡೆಸಿ ಅಧಿಕಾರ ಪಡೆದು ನಂತರ ಅಕ್ರಮ ಗಣಿಗಳಿಗೆ ಸಹಾಯ ಮಾಡಿದೆ. ಜಿಲ್ಲೆಯ ಜನತೆ ಯಾರು ಅಧಿಕಾರಕ್ಕೆ ಬಂದರೂ ತಮಗೆ ರಕ್ಷಣೆ ದೊರಯುತ್ತಿಲ್ಲ ಎಂಬ ಆತಂಕದಲ್ಲಿದ್ದಾರೆ. ಜಿಂದಾಲ್ ಮತ್ತು ಗಣಿ ಉದ್ಯಮೆಗಳ ಅಕ್ರಮಗಳು ನಿರಂತರವಾಗಿ ನಡೆದಿವೆ.

19.05.2011 ರಲ್ಲಿ ವಡ್ಡು ಮತ್ತು ಎಸ್. ಬಸಾಪುರ ಗ್ರಾಮದಲ್ಲಿ ಪ್ರತಿ ಎಕರೆಗೆ ರೂ.3,00,000 ದಂತೆ 841.12 ಎಕರೆ ಜಮೀನಿಗೆ ರೂ. 27,76,29,000 ಹಣ ಪಡೆದು 10 ವರ್ಷಕ್ಕೆ ಕರಾರು ಪತ್ರ ಮಾಡಿಕೊಂಡಿದೆ. ಗೋನಾಳ್ (ಭುವನಹಳ್ಳಿ) 629.92 ಎಕರೆ ರೂ. 6,00,000 ಮತ್ತು ಲಕ್ಷ್ಮಿಪುರ, ಬುಜಂಗನಗರ ಹಾಗೂ ಹಿಲಿಕುಂಟೆ ಗ್ರಾಮಗಳಲ್ಲಿ 4 ಮತ್ತು 6 ಲಕ್ಷ ರೂಪಾಯಿಗಳಿಗೆ ಕೆಐಎಡಿಬಿ ಕರಾರು ಪತ್ರ ಮಾಡಿಕೊಂಡಿದೆ. ಈ ಬೃಹತ್ ಭೂಮಿ ಒಪ್ಪಂದದಲ್ಲಿ ಕಡಿಮೆ ಬೆಲೆ ನಿಗದಿ ಮಾಡಲಾಗಿದೆ, ಕರ್ನಾಟಕ ಸರ್ಕಾರ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅದೇಶ Cl 82SPI2005 BANGALORE DATED 06.08.2007, ಸೈಡ್ ಲ್ಯಾಂಡ್–1, 1700, ಅಟ 314, ಖಕಖ 2007 ಸೈಡ್ ಲ್ಯಾಂಡ್–2, 242.92 ಎಕರೆ ಲೀಸ್ ಕಂ ಸೇಲ್ ಡೀಡ್ ಮಾಡಿಕೊಂಡು ಭೂಮಿಯನ್ನು ಪಡೆದು ಮತ್ತೊಂದು ಕಂಪನಿಗೆ ಲೀಸ್ ನೀಡಿದೆ. 15.06.215ರಲ್ಲಿ ಪರಿಸರಕ್ಕೆ ಅಪಾಯಕಾರಿ ಡಾಂಬರ್ ಕಾರ್ಖಾನೆ ಸ್ಥಾಪಿಸಲು 26.03.2016 ರಂದು ರೂ. 2,14,12,500 ಮುಂಗಡ ಹಣ ಪ್ರತಿ ಎಕರೆಗೆ ರೂ. 6,25,000 ಪಡೆದಿದೆ. ಪ್ರತಿ ಎಕರೆಗೆ ವಾರ್ಷಿಕ ರೂ. 1000 ಬಾಡಿಗೆ ಪಡೆಯುತ್ತಿದೆ. ಇದೇ ರೀತಿ ಹಲವು ಕಾರ್ಖಾನೆಗಳಿಗೆ ಹೆಚ್ಚುವರಿ ಭೂಮಿಯನ್ನು ಪಡೆದು ಸಬ್ ಲೀಸ್ ಮೂಲಕ ಬಾಡಿಗೆಗೆ ನೀಡುತ್ತಿದೆ. ಸಬ್ ಲೀಸ್ ಗಿಂತ ಕಡಿಮೆ ಹಣ ಪಡೆಯುತ್ತಿದೆ

JSW 140 ದೇಶಗಳಲ್ಲಿ ಉದ್ಯಮೆ ವ್ಯಾವಹಾರ ನಡೆಸುತ್ತಿದ್ದು 18 ಸ್ಟೀಲ್ ಉತ್ಪಾದನೆಯ ತೀವ್ರಗತಿಯಲ್ಲಿ ಬೆಳವಣಿಗೆ ಸಾಧಿಸಿದ ಸಂಸ್ಥೆಯು ವರ್ಷದಿಂದ ವರ್ಷಕ್ಕೆ ಲಾಭಾಂಶ ಹೆಚ್ಚುತ್ತಿದೆ. ಒಟ್ಟು ಅಧಾಯ 2017 ರಲ್ಲಿ ರೂ. 52545.57, 2018, ರೂ. 65188.00 ಮತ್ತು 2019, ರೂ. 77246.00 ಕೋಟಿಗೆ ಹೆಚ್ಚಿದ್ದು, ಸ್ಟೀಲ್ ಉತ್ಪಾದನೆಯಲ್ಲಿ ಏಷ್ಯದಲ್ಲಿ ಪ್ರಥಮ ಸ್ಥಾನದತ್ತ ಸಾಗಿದೆ. ಆದರೆ ಸರ್ಕಾರಕ್ಕೆ ನೀಡಬೇಕಾದ ಬಾಕಿ ಹಣ ರೂ. 2000 ಕೋಟಿಗೂ ಹೆಚ್ಚು ಬಾಕಿ ಉಳಿಸಿಕೊಂಡಿದೆ. ಬಾಕಿ ವಸೂಲಿಗೆ ಕ್ರಮ ಕೈಗೊಳ್ಳುತ್ತಿಲ್ಲ. ಮತ್ತು ಲೀಸ್ ಕಂ ಸೇಲ್ ಒಪ್ಪಂದದ ಸಂದರ್ಭದಲ್ಲಿ ಮಾರುಕಟ್ಟೆ ಬೆಲೆ ನಿಗದಿ ಮಾಡಿ ಹಣವನ್ನು JSW ರವರಿಂದ ಮುಂಗಡ ಠೇವಣಿ ಪಡೆಯಲು ಕಾನೂನು ಇಲಾಖೆಯ ಸಲಹೆಯನ್ನು ತಿರಸ್ಕರಿಸಲಾಗಿದೆ. ಸಂಘ_ಸಂಸ್ಥೆಗಳು ಮತ್ತು ಜನ ವಿರೋಧ ವ್ಯಕ್ತಪಡಿಸಿದರೂ ಮುಂದುವರಿದಿರುವದು ಆತಂಕಕ್ಕೆ ಕಾರಣವಾಗಿದೆ. ಸಾರ್ವಜನಕರಲ್ಲಿ ಅನುಮಾನಗಳು ಹುಟ್ಟುಹಾಕಿದೆ.

ಭಾರಿ ಬೆಲೆ ಬಾಳುವ ಭೂಮಿಯ ಕ್ರಯ ಪತ್ರ ಪ್ರಸ್ತಾವಕ್ಕೆ ನೀಡಿರುವ ರಾಜ್ಯ ಸಚಿವ ಸಂಪುಟದ ತೀರ್ಮಾನವನ್ನು ರದ್ದುಗೊಳಿಸಿ ರಾಜ್ಯ ಬೊಕ್ಕಸಕ್ಕೆ ಆಗುವ ನಷ್ಟವನ್ನು ತಡೆಯಬೇಕು. ಕ್ರಯ ಪತ್ರದಲ್ಲಿನ ಒಪ್ಪಂದಗಳನ್ನು ಜಾರಿಗೊಳಿಸಿ ಪರಿಸರ ಉದ್ಯೋಗ, ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳ ಬೇಕೆಂದು ಒತ್ತಾಯಿಸುತ್ತೇವೆ. ಸಂಡೂರು ತಾಲ್ಲೂಕು ಕೇಂದ್ರದ ವಿಜಯ ವೃತ್ತದಲ್ಲಿ ಸರ್ಕಾರದ ಜನವಿರೋಧಿ ನೀತಿಯನ್ನು ವಿರೋಧಿಸಿ ಪ್ರತಿಕೃತ ದಹನ ಮೂಲಕ ಪ್ರತಿಭಟನೆ ನಡೆಸುವ ಮೂಲಕ ಹಕ್ಕೋತ್ತಾಯ ಮಾಡಲಾಯಿತು.



1) ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವ 3667 ಎಕರೆ ಕೈಗಾರಿಕೆ ಲೀಜ್ ಕಂ ಸೇಲ್‌ಗೆ ಒಪ್ಪಿಗೆ ನೀಡಿರುವ ಸಚಿವ ಸಂಪುಟದ ತೀರ್ಮಾನವನ್ನು ರದ್ದುಗೊಳಿಸಬೇಕು. ಕಾನೂನು ಇಲಾಖೆ ಅಕ್ಷೇಪವನ್ನು ಪರಿಗಣಿಸಬೇಕು. ಬೊಕ್ಕಸಕ್ಕೆ ನಷ್ಟ ಉಂಟುಮಾಡುವ ಕ್ರಯ ಪತ್ರ ರಚಿಸಲು ಶಾಮೀಲು ಆದ ಭ್ರಷ್ಟ ಉನ್ನತ ಅಧಿಕಾರಗಳ ಮೇಲೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಹೊಸ ಮಾರುಕಟ್ಟೆ ಬೆಲೆಯಲ್ಲಿ ಕ್ರಯ ಪತ್ರ ರಚಿಸಬೇಕು.
2) ಸರ್ಕಾರದಿಂದ ಲೀಸ್ ಕಂ ಸೇಲ್ ಒಪ್ಪಂದ ಮಾಡಿಕೊಂಡು ಹೆಚ್ಚುವರಿ ಭೂಮಿಯನ್ನು ಅಕ್ರಮವಾಗಿ ECPL ಡಾಂಬರ್, ಕಾರ್ಬನ್ ಬ್ಲಾಕ್, ಬಣ್ಣದ ಪರಿಸರ ಅಫಾಯಕಾರಿಗಳಿಗೆ ಸಬ್ ಲೀಸ್ ಕೊಟ್ಟಿರುವದನ್ನು ರದ್ದು ಮಾಡಿ ಭೂಮಿಯನ್ನು ವಶಪಡಿಸಿಕೊಳ್ಳಬೇಕು. ಈ ಹಿಂದೆ ನಡೆದ ಕರಾರು ಪತ್ರಗಳಲ್ಲಿ ಮಾಡಿಕೊಂಡ ಒಪ್ಪಂದಗಳಂತೆ ಭೂ ಸಂತ್ರಸ್ಥರಿಗೆ ಮತ್ತು ಸ್ಥಳೀಯರಿಗೆ ಉದ್ಯೋಗ, ಗಣಿ ಮತ್ತು ಕೈಗಾರಿಕೆಗಳಿಂದ ಸಂತ್ರಸ್ಥವಾಗಿರು ಗ್ರಾಮಗಳಿಗೆ ಪರಿಸರ ರಕ್ಷಣೆ, ಕುಡಿಯುವ ನೀರು, ಅರೋಗ್ಯ, ಶಿಕ್ಷಣ ಸೇರಿದಂತೆ ಮೂಲಭೂತ ಸೌಲಭ್ಯಗಳು ನೀಡುವಲ್ಲಿ ವಿಫಲವಾಗಿರುವದನ್ನು ಗಂಬೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು. ಒಪ್ಪಂದಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
3) ಶ್ರೀ ಕುಮಾರಸ್ವಾಮಿ ದೇವಸ್ಥಾನ, ರಾಮಘಡ ಒಳಗೊಂಡ ಕಾಯ್ದಿಟ್ಟ ದಟ್ಟ ಅರಣ್ಯ ಹೊಂದಿರುವ ಭೂಮಿಯನ್ನು ಗಣಿಗಳಿಗೆ ನೀಡುತ್ತಿರುವದನ್ನು ರದ್ದುಗೊಳಿಸಬೇಕು. ಬಯಲು ಅರಣ್ಯ ಭೂಮಿಯಲ್ಲಿ ಉಳುಮೆ ಮಾಡುತ್ತಿರುವ ಬಡ ಉಳಿಮೆಗಾರರಿಗೆ ಪಟ್ಟ ನೀಡಿ ಒಕ್ಕಲೆಬ್ಬಿಸುವದನ್ನು ತಡೆಯಬೇಕು.

ಆರ್. ಎಸ್. ಬಸವರಾಜ

ಸಿಪಿಐ(ಎಂ) ಪಕ್ಷವು ಬಾಗೇಪಲ್ಲಿಯ ಪುರಸಭೆಯಲ್ಲಿ 2 ಸ್ಥಾನ ಹಾಗೂ ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ 1 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ.

ಹೆಸರು	ವಾರ್ಡ್	ಗಳಿಸಿದ ಮತ	ಗೆದ್ದ ಅಂತರ
1. ಸರೋಜಮ್ಮ	2ನೇ ವಾರ್ಡ್	356	78
2. ವನಿತಾ ಸೋಮಶೇಖರ್	13ನೇ ವಾರ್ಡ್	419	214
ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ			
3. ಬಿ.ವಿ. ನರಸಿಂಹಮೂರ್ತಿ (STD)	9ನೇ ವಾರ್ಡ್	779	706



ಕಾಮ್ರೆಡ್ ಮಂಗಳೇಶ್ವರಿ ದೇವಿ. ಬುಡಕಟ್ಟು ಸಮುದಾಯದ ನಾಯಕಿ. ತ್ರಿಪುರಾದ ಮಾಜಿ ಮುಖ್ಯಮಂತ್ರಿ, ಹಿರಿಯ ಸಿಪಿಎಂ ಮುಖಂಡರಾದ ಕಾಮ್ರೆಡ್ ದಶರಥ ದೇವ್ ಅವರ ಬಾಳ ಸಂಗಾತಿ ನಮ್ಮನ್ನು ಅಗಲಿದ್ದಾರೆ.



ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ಕೂಡಲೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಬೇಕೆಂದು ಕೋರುತ್ತೇವೆ.

–ಸಂಪಾದಕರು

ವಿಶೇಷ ಲೇಖನ

ಮಾತೃಭಾಷಾ ಮಾಧ್ಯಮದ ಮೂಲಕ ವಿದೇಶಿ ಭಾಷಾ ಕಲಿಕೆ VS. ವಿದೇಶಿ ಭಾಷಾ ಮಾಧ್ಯಮ

ಪ್ರೊ. ಜೋಗಾ ಸಿಂಗ್

ಭಾರತೀಯ ಭಾಷೆಗಳಿಗೆ ಅವಶ್ಯಕವಾದ ಮತ್ತು ನ್ಯಾಯಯುತವಾದ ಅಂತಸ್ತನ್ನು ಸ್ವಾತಂತ್ರ್ಯಾನಂತರ ನೀಡಲು ಪ್ರಾರಂಭಿಸಿದ್ದರೂ ಸಹ, ಕಳೆದ ಸುಮಾರು 30 ವರ್ಷಗಳಿಂದ ಈಚೆಗೆ ಅವುಗಳ ಸ್ಥಿತಿ ಮತ್ತಷ್ಟು ಹದಗೆಡುತ್ತಲೇ ಬಂದಿದೆ. ಇಂಗ್ಲಿಷ್ ಭಾಷೆಯು ಶಾಲೆಗಳಲ್ಲಿ ಶಿಕ್ಷಣದ ಮಾಧ್ಯಮವಾಗಿರುವುದು ಭಾರತೀಯ ಉನ್ನತ ವರ್ಗದವರ (ಎಲೀಟ್‌ಗಳ) ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರವೇ ಆಗಿದ್ದರೂ ಸಹ, ಇದಕ್ಕೆ ಬೆಂಬಲವಾಗಿ ಹಲವು ಸುಳ್ಳು ವಾದಗಳನ್ನು ಸೃಷ್ಟಿಸಿ, ಗಟ್ಟಿಯಾಗಿ ಹೇಳಿ, ಸ್ಥಿರಗೊಳಿಸಲಾಗುತ್ತದೆ. ಈ ಮಿಥ್ಯೆಗಳು ಮಾನವ ಸಂವಹನದಲ್ಲಿ ಭಾಷೆಯ ಪಾತ್ರ, ಶಿಕ್ಷಣದ ಮಾಧ್ಯಮ ಭಾಷೆಯ ಆಯ್ಕೆ, ಕಲಿಕೆ ಮತ್ತು ಬೋಧನೆಯ ಅತ್ಯುತ್ತಮ ವಿಧಾನಗಳು, ಭಾಷೆ ಶಿಕ್ಷಣಗಳ ಮೂಲಕ ಜ್ಞಾನ ವಿಜ್ಞಾನಗಳ ಆರ್ಜನೆಯ ಪ್ರಕ್ರಿಯೆ, ಒಂದು ವಿದೇಶೀ ಭಾಷೆಯನ್ನು ಕಲಿಯುವ ಸರಿಯಾದ ವಿಧಾನ – ಇಂಥ ವಿಷಯಗಳ ಜೊತೆ ತಳಕು ಹಾಕಿಕೊಂಡಿದೆ. ಈ ಮಿಥ್ಯೆಗಳನ್ನು ಹೋಗಲಾಡಿಸುವ ಮತ್ತು ಈ ವಿಷಯಗಳ ಬಗ್ಗೆ ಸಮಕಾಲೀನ ಅಂತರ್ರಾಷ್ಟ್ರೀಯ ವೈಜ್ಞಾನಿಕ ಪರಿಣತರ ಅಭಿಪ್ರಾಯದ ಒಂದು ಸಂಕ್ಷಿಪ್ತ ವರದಿಯನ್ನು ನೀಡುವ ಪ್ರಯತ್ನವನ್ನು ಪಂಜಾಬ್ ವಿ.ವಿ.ಯ ಭಾಷಾಶಾಸ್ತ್ರಜ್ಞ ಪ್ರೊ. ಜೋಗಾ ಸಿಂಗ್ ಒಂದು ದೀರ್ಘ ಲೇಖನದಲ್ಲಿ ಮಾಡಿದ್ದಾರೆ. ಅದರ ಒಂದು ಭಾಗ. ಪೂರ್ಣ ಲೇಖನ ಅವರ ವೆಬ್ ಸೈಟಿನಲ್ಲಿದೆ.

ಯುನೆಸ್ಕೋದ ಒಂದು ಹೇಳಿಕೆಯಿಂದ ಪ್ರಾರಂಭಿಸುವುದು ಸೂಕ್ತ:

“ಭಾಷೆ ಮತ್ತು ಕಲಿಕೆಯ ಬಗ್ಗೆ ಕೆಲವು ಮಿಥ್ಯೆಗಳ ಒಂದು ಗುಂಪು ನಮ್ಮ ದಾರಿಗೆ ಅಡ್ಡವಾಗಿ ನಿಂತಿರುವಂತೆ ತೋರುತ್ತದೆ; ಮತ್ತು ಈ ಮಿಥ್ಯೆಗಳನ್ನು ಇರುವಂತೆಯೇ ಅನಾವರಣಗೊಳಿಸಿ, ಜನರ ಕಣ್ಣುಗಳನ್ನು ತೆರೆಸಬೇಕು. ಇಂಥ ಒಂದು ಮಿಥ್ಯೆ ಎಂದರೆ : ಎರಡನೇ (ವಿದೇಶೀ ಅಥವಾ ಇಂಗ್ಲಿಷ್ ಎಂದು ಓದಿಕೊಳ್ಳಿ) ಭಾಷೆಯನ್ನು ಕಲಿಯಲು ಇರುವ ಅತ್ಯುತ್ತಮ ವಿಧಾನ ಎಂದರೆ ಅದನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದು. (ವಾಸ್ತವವಾಗಿ, ಹೆಚ್ಚುವರಿ ಭಾಷೆಗಳನ್ನು ಅಧ್ಯಯನದ ವಿಷಯಗಳಾಗಿ ಕಲಿಯುವುದು ಸಾಮಾನ್ಯವಾಗಿ ಹೆಚ್ಚು ಪರಿಣಾಮಕಾರಿ). ಇನ್ನೊಂದು ಮಿಥ್ಯೆ : ಎರಡನೇ ಭಾಷೆಯನ್ನು ಕಲಿಯಲು ನೀವು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಪ್ರಾರಂಭಿಸಬೇಕು. (ಮುಂಚೆ ಪ್ರಾರಂಭಿಸುವ ಕಲಿಯುವವರಿಗೆ ಉಚ್ಚಾರಣೆಯ ಶೈಲಿ ಎಂದರೆ “ಆ್ಯಕ್ಸೆಂಟ್” ಹೊಂದಲು ಸಹಾಯ ಮಾಡಬಹುದು, ಆದರೆ, ಹೀಗಿಲ್ಲದಿದ್ದರೆ, ಚೆನ್ನಾಗಿ ಅಭಿವೃದ್ಧಿ ಹೊಂದಿದ ಮೊದಲನೇ ಭಾಷೆಯ ಅಡಿಪಾಯ ಇರುವ ಕಲಿಯುವವರಿಗೆ ಅನುಕೂಲ ದಕ್ಕುತ್ತದೆ). ಮೂರನೇ ಮಿಥ್ಯೆ : ಎರಡನೇ ಭಾಷೆ ಕಲಿಯುವಲ್ಲಿ ಮನೆಯ (ದೇಶಿಯ, ಮಾತೃಭಾಷೆ) ಅಡ್ಡಿಪಡಿಸುತ್ತದೆ. (ಒಂದನೇ ಭಾಷೆ ಯಲ್ಲಿ ಸುಭದ್ರ ಅಡಿಪಾಯ ಕಟ್ಟುವುದು ಹೆಚ್ಚುವರಿ ಭಾಷೆಗಳ ಕಲಿಕೆಯ ಮೇಲೆ ಉತ್ತಮ ಪರಿಣಾಮ ಉಂಟುಮಾಡುತ್ತದೆ). ಸುಸ್ಪಷ್ಟವಾಗಿ, ಈ ಮಿಥ್ಯೆಗಳು ನಿಜಕ್ಕಿಂತ ಹೆಚ್ಚು ಸುಳ್ಳಾಗಿದ್ದು, ಆದರೂ ಸಹ, ಇತರ ಭಾಷೆ ಗಳನ್ನು ಮಾತನಾಡುವವರು ಪ್ರಬಲ ಅಥವಾ ಅಧಿಕೃತ ಭಾಷೆಗಳನ್ನು ಹೇಗೆ ಕಲಿಯಬೇಕು ಎನ್ನುವುದರ ಬಗ್ಗೆ ನೀತಿ ರೂಪಿಸುವವರು ಯೋಚನೆಯನ್ನು ಇವು ಪ್ರಭಾವ ಬೀರಿ, ನಡೆಸುತ್ತವೆ.” (ಯುನೆಸ್ಕೋ, 2008:12 - The Improvement in the Quality of Mother Tongue - Based Literacy and Learning)


ಈ ಹೇಳಿಕೆಯು ಎಲ್ಲಾ ಖಂಡಗಳ ಮೇಲೆ ಹರಡಿರುವ 12 ದೇಶಗಳಲ್ಲಿ ನಡೆಸಲಾದ ಅಧ್ಯಯನಗಳನ್ನು ಆಧರಿಸಿದೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ಭಾರತವೂ ಸೇರಿತ್ತು. ಅಧ್ಯಯನಕ್ಕೆ ಹಣಕಾಸು ಒದಗಿಸಿದ್ದು ವಿಶ್ವಬ್ಯಾಂಕ್. ಅದೇನೂ ಇಂಗ್ಲಿಷ್ ವಿರೋಧಿ ಆಗಿರಲಿಲ್ಲ.

ಸ್ವೀಡನ್‌ಗೆ ವಲಸೆ ಹೋದ ಫಿನ್ನಿಶ್ ಮಕ್ಕಳ ಬಗ್ಗೆ ಇರುವ ಇದೇ ರೀತಿಯ ಇನ್ನೊಂದು ಅಧ್ಯಯನ ಇದನ್ನು ತೋರಿಸಿದೆ “ಭಾರಿ ಪ್ರಮಾಣದಲ್ಲಿ ಫಿನ್‌ಲ್ಯಾಂಡ್‌ನಲ್ಲಿ ಹಲವು ವರ್ಷ ಶಾಲೆಗೆ ಹೋದ ಪರಿಣಾಮವಾಗಿ ಒಬ್ಬ ವಿದ್ಯಾರ್ಥಿಗೆ ಫಿನ್ನಿಶ್ ಚೆನ್ನಾಗಿ ಗೊತ್ತಿದ್ದಷ್ಟೂ, ಆತನ ಸ್ವೀಡಿಶ್ ಕಲಿಕೆ ಹೆಚ್ಚು ಉತ್ತಮವಾಗಿತ್ತು. ಒಟ್ಟಿಗೆ ಬೆಳೆದ ಮಕ್ಕಳ ಸಾಮರ್ಥ್ಯಗಳ ಒಂದು ಪರೀಕ್ಷೆಯಲ್ಲಿ, ಸರಾಸರಿ 10ನೇ ವಯಸ್ಸಿನಲ್ಲಿ ಫಿನ್‌ಲೆಂಡ್‌ನಿಂದ ಬಂದವರು, ಹೆಚ್ಚು–ಕಮ್ಮಿ ಸಾಮಾನ್ಯ ಫಿನ್ನಿಶ್ ಮಟ್ಟ ಉಳಿಸಿಕೊಂಡು, ಸ್ವೀಡಿಶ್ ವಿದ್ಯಾರ್ಥಿಗಳ ಸ್ವಿಡಿಶ್ ಭಾಷೆಯ ಮಟವನ್ನು ಗಳಿಸಿಕೊಳ್ಳುತ್ತಿದ್ದರು. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಬಂದ ಮಕ್ಕಳು, ಅಥವಾ ಸ್ವೀಡನ್‌ನಲ್ಲಿ ಹುಟ್ಟಿದವರು ಅಷ್ಟು ಚೆನ್ನಾಗಿ ಕಲಿಯಲಿಲ್ಲ, ಅವರು ಸ್ವೀಡಿಶ್ ಭಾಷಾ ಅಭಿವೃದ್ಧಿ ಸಾಮಾನ್ಯವಾಗಿ 12ನೇ ವಯಸ್ಸಿಗೆ ನಿಲ್ಲುತ್ತದೆ. ಇದಕ್ಕೆ ಕಾರಣ ಮಾತೃಭಾಷೆಯಲ್ಲಿ ಅವರಿಗೆ ಗಟ್ಟಿ ಅಡಿಪಾಯ ಇಲ್ಲದಿರುವುದು ಎಂಬುದು ಸ್ಪಷ್ಟ” (ಪಾಲ್‌ಸ್ಟನ್, 1977:92-93 -. Research. In, Bilingual Education: Current Perspectives. Linguistics. pp. 87-151)

ಹೀಗಾಗಿ, ಮಾತೃಭಾಷೆ ಮಾಧ್ಯಮದ ಮೂಲಕ ಓದುವುದರಿಂದ ವಿದೇಶಿ ಭಾಷೆಗಳ ಕಲಿಕೆ ಹೆಚ್ಚು ಸುಲಭ ಎನ್ನುವುದು ಸುಸ್ಪಷ್ಟ. ಈ ಮುಂದಿನ ಹೇಳಿಕೆ ಇದು ಹೇಗೆ ಎನ್ನುವುದಕ್ಕೆ ವಿವರಣೆ ನೀಡುತ್ತದೆ.:

“ವಿದೇಶಿ ಭಾಷೆಯ ಕಲಿಕೆ ಮತ್ತು ಬೋಧನೆಯಲ್ಲಿ, ಅದೊಂದು ಪ್ರಮುಖ ಸಂಪನ್ಮೂಲ ಎಂದು ನಾವು ದೇಶೀ ಭಾಷೆಯ ಪಾತ್ರವನ್ನು ಮರು–ಸೂತ್ರೀಕರಿಸಲೇಬೇಕು, ಎಂದು ಬುಟ್ಜ್‌ಕಾಮ್ ಆಗ್ರಹಿಸುತ್ತಾರೆ. ಮಕ್ಕಳು ತಮ್ಮ ಮಾತೃಭಾಷೆಯ ಒಳಕ್ಕೆ ಬೆಳೆದಂತೆ ಅವರು” (1) ತಮ್ಮ ಪ್ರಪಂಚವನ್ನು ಪರಿಕಲ್ಪಿಸಿಕೊಳ್ಳುವುದನ್ನು ಅವರು ಕಲಿತಿರುತ್ತಾರೆ ಮತ್ತು ಭಾಷೆಯ ಸಾಂಕೇತಿಕ ಕಾರ್ಯವನ್ನು ಸಂಪೂರ್ಣವಾಗಿ ಗ್ರಹಿಸಿರುತ್ತಾರೆ; (2) ಅವರು ಸಂವಹನ ಮಾಡಲು ಕಲಿತಿರುತ್ತಾರೆ; (3) ಅವರು ಮಾತನಾಡುವುದು ಮತ್ತು ತಮ್ಮ ಧ್ವನಿಯನ್ನು ಉಪಯೋಗಿಸಲು ಕಲಿತಿರುತ್ತಾರೆ; (40 ಅವರು ವ್ಯಾಕರಣವನ್ನು ಆಂತರ್ಯದಿಂದ ಅರ್ಥೈಸುವುದನ್ನು ಪಡೆದುಕೊಂಡು, ಭಾಷೆಯ ಅನೇಕ ಸೂಕ್ಷ್ಮ ಅಂಶಗಳ ಬಗ್ಗೆ ಅರಿವು ಮೂಡಿಸಿಕೊಂಡಿರುತ್ತಾರೆ; (6) ಅವರು ಓದುವುದು ಮತ್ತು ಬರೆಯುವುದರ ಪೂರಕ ಕೌಶಲ್ಯಗಳನ್ನು ಬೆಳೆಸಿಕೊಂಡಿದ್ದಾರೆ. ಆದ್ದರಿಂದ ಜನರು ವಿದೇಶಿ ಭಾಷೆಯ ಕಲಿಕೆಗೆ ತರುವ ಅತಿ ಉನ್ನತ ಆಸ್ತಿ ಎಂದರೆ ಮಾತೃಭಾಷೆ. ಮೊದಲನೆಯದಾಗಿ, ಮಾತೃಭಾಷೆಯು ಒಂದು ಅತ್ಯವಶ್ಯಕ ಭಾಷಾ ಆರ್ಜನೆಯ ಬೆಂಬಲ ವ್ಯವಸ್ಥೆ ನೀಡಿ, ಬೋಧನೆಯನ್ನು ಸಾಧ್ಯ ಮಾಡುತ್ತದೆ.” (ವಿಕಿಪೀಡಿಯಾ)

“ಯಶಸ್ವೀ ಕಲಿಕೆ ಸಾಧಿಸುವವರು ಮಾತೃಭಾಷೆಯ ಮೂಲಕ ಆ ಮೊದಲು ಸಂಗ್ರಹಿಸಿರುವ ಅಪಾರ ಮಟ್ಟದ ಭಾಷೆ ಕೌಶಲ್ಯಗಳು ಮತ್ತು ಪ್ರಾಪಂಚಿಕ ಜ್ಞಾನದ ಬಂಡವಾಳವನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಅವರು ಹೆಚ್ಚಿನಂಶ ತಮ್ಮ ಪ್ರಪಂಚವನ್ನು ಹೊಸಭಾಷೆಯಲ್ಲಿ ಮರು–ಪರಿಕಲ್ಪಿಸಿಕೊಳ್ಳಬೇಕಾಗಿಲ್ಲ. ಅವರು ಎಲ್1ನ್ನು (ಮೊದಲ ಭಾಷೆಯನ್ನು) ಅದರ ಜೊತೆ ಹೊಂದಿಕೊಂಡಿರುವ ವಾಚನಾ ಕೌಶಲ್ಯಗಳು ಮತ್ತು ಸಮತೋಲಿತ, ಗಂಭೀರ ಜ್ಞಾನಗಳ ಜೊತೆ ಪಡೆದಿರುತ್ತಾರೆ ಮತ್ತು ಇವು ಗಮ್ಯ ಭಾಷೆಯ ವ್ಯವಸ್ಥೆಯ ಒಳಕ್ಕೆ ಅಳವಡಿಸಿಕೊಳ್ಳಲು ನೇರವಾಗಿ ಲಭ್ಯ ಇರುತ್ತದೆ. ಉದಾಹರಣೆಗೆ, ಕೋರಿಕೆಗಳು, ಹಾರೈಕೆಗಳು ಅಥವಾ ಎಚ್ಚರಿಕೆಗಳು ಹೇಳಿಕೆಗಳಂತೆ ಕಾಣಬಹುದು, ಎಂದು ಅವರಿಗೆ ಹೇಳಿಕೊಡುವ ಅವಶ್ಯಕತೆ ಇಲ್ಲ. ಎಲ್1 ವ್ಯಾಕರಣದ ಪಥ–ದರ್ಶಕ ಶಕ್ತಿಯು ಎರಡೂ ಭಾಷೆಗಳು ಒಂದೇ ರೀತಿಯ ವ್ಯಾಕರಣ ವೈಶಿಷ್ಟ್ಯಗಳನ್ನು ಹೊಂದಿವೆ ಎನ್ನುವ ಅಂಶದ ಮೇಲೆ ಅವಲಂಬಿಸಿಲ್ಲ. ಇದಕ್ಕೆ ಕಾರಣ ಏನೆಂದರೆ, ಭಾಷೆಗಳು ಇವನ್ನು ಹೇಗೆ ಸಾಧಿಸಿದ್ದರೂ ಸಹ – ಸಂಖ್ಯೆ, ಪ್ರತಿನಿಧಿ, ಉಪಕರಣ, ನಕಾರ, ಕಾರಣ, ಸ್ಥಿತಿ, ಋಣ ಇತ್ಯಾದಿ – ಇಂತಹ ಅಮೂರ್ತ ಪರಿಕಲ್ಪನೆಗಳನ್ನು ವ್ಯಕ್ತಪಡಿಸುವ ಸಾಧನಗಳನ್ನು ಎಲ್ಲಾ ಭಾಷೆಗಳು ಕ್ರಮೇಣ ಅಭಿವೃದ್ಧಿಪಡಿಸಿಕೊಂಡಿವೆ; ಒಂದು ಸಹಜ ಭಾಷೆ ಇತರ ಭಾಷೆಗಳ ವ್ಯಾಕರಣಗಳಿಗೆ ಬಾಗಿಲು ತೆಗೆಯಲು ಸಾಕು. ಏಕೆಂದರೆ, ಎಲ್ಲಾ ಭಾಷೆಗಳೂ ಒಂದೆ ಪರಿಕಲ್ಪನಾ ಬಟ್ಟೆಯಿಂದ ಹೊಲೆದಂಥವು. ಆಳವಾದ ಅರ್ಥದಲ್ಲಿ, ನಾವು ಭಾಷೆಯನ್ನು ಕಲಿಯುವುದು ಕೇವಲ ಒಂದೇ ಬಾರಿ.” (http://en.wikipedia.org/wiki/Wolfgang butzkamm)



ಕೃಪೆ: ಪಿ. ಮಹಮ್ಮದ್. ವಾ.ಭಾ

ಇದುವರೆಗೂ ವಿವರಿಸಲಾಗಿರುವ ವಾಸ್ತವಾಂಶಗಳು ಭಾರತೀಯ ನೀತಿ ರೂಪಿಸುವವರ ಕಣ್ಣುಗಳಿಗೆ ಕಟ್ಟಿರುವ ಬಟ್ಟೆ ತೆಗೆದು, ಕಿವಿಗಳಲ್ಲಿ ತುಂಬಿರುವ ಕಿವುಡು ಉಂಟಾಗಿಸುವ ಮೇಣವನ್ನು ಹೊರತೆಗೆಯಲು ಸಾಕಾಗಬೇಕು. ಇಷ್ಟಾದರೂ ಸಹ, ಭಾಷೆಗೆ ಸಂಬಂಧಿಸಿದಂತೆ ಪ್ರಪಂಚದ ಇತರ ಭಾಗಗಳಲ್ಲಿ ಏನಾಗುತ್ತದೆ ಎಂದು ಗಮನಿಸುವುದರಲ್ಲಿ ಯಾವ ಹಾನಿಯೂ ಇಲ್ಲ.

ವಾಸ್ತವವಾಗಿ, ಎಲ್ಲೆಲ್ಲಿ ಇಂಗ್ಲಿಷ್, ಅಲ್ಲಿ ಅದು ವಿದೇಶೀ ಭಾಷೆ ಆಗಿದ್ದರೂ ಸಹ, ಶಿಕ್ಷಣದ ಮಾಧ್ಯಮ ಆಗಿದ್ದಿತೋ, ಅದನ್ನು ಹಂತಗಳಲ್ಲಿ ಹೊರಗೆ ಕಳುಹಿಸಲಾಗಿದೆ, ಅಥವಾ ದಿನ ಕಳೆದಂತೆ ಕನಿಷ್ಟ ಕಡಿಮೆ ಆಗುತ್ತಾ ಹೋಗುತ್ತಿದೆ. ಇದಕ್ಕೆ ಪುರಾವೆಯಾಗಿ ಕೆಲವು ಉದಾಹರಣೆಗಳು ಸಾಕಾಗಬಹುದು.

ಮೊದಲ ಮೂರು ವರ್ಷಗಳಲ್ಲಿ ಮಾತೃಭಾಷೆಗಳನ್ನು ಶಿಕ್ಷಣದ ಮಾಧ್ಯಮವಾಗಿ, ಮತ್ತು ಇಂಗ್ಲಿಷ್‌ನ್ನು ಒಂದು ವಿಷಯವಾಗಿ ಬೋಧಿಸಬೇಕು ಎಂದು 2007ರಲ್ಲಿ ಯುಗಾಂಡ ನಿರ್ಧಾರ ತೆಗೆದುಕೊಂಡಿತು. ಇದು ಆ ದೇಶಕ್ಕೆ ಯಶಸ್ಸನ್ನು ಸಹಾ ತಂದ ಕೊಟ್ಟಿದೆ. 2008 ರಲ್ಲಿ ನಡೆಸಿದ ಒಂದು ಮೌಲ್ಯಮಾಪನವು ಹೊಸನೀತಿಯು ಸಾಕ್ಷರತೆ ಉತ್ತಮಗೊಳ್ಳುವದರಲ್ಲಿ ಪಾತ್ರ ವಹಿಸಿತು ಎಂದು ತೋರಿಸಿತು.

ಯುಗಾಂಡಾದಲ್ಲಿ 52 ಭಾಷಾ ಗುಂಪುಗಳು ಇವೆ ಎಂದು ಇಲ್ಲಿ ವಿಶೇಷವಾಗಿ ಹೇಳಬೇಕು. ಯುಗಾಂಡಾದಲ್ಲಿ ಆದ ಬದಲಾವಣೆಗೆ ಆಧಾರ, ಒಬ್ಬ ವಿದ್ಯಾರ್ಥಿ ತನ್ನ ಮಾತೃಭಾಷೆಯಲ್ಲಿ ಉತ್ತರ ಅಡಿಪಾಯ ಹೊಮದಿದ್ದರೆ ಅವನು/ಅವಳು ಒಂದು ವಿದೇಶೀ ಭಾಷೆಯನ್ನು ಕಲಿಯುವುದು ಸುಲಭ ಎನ್ನುವ ಅಭಿಪ್ರಾಯ. ಈ ಹೊಸ ನೀತಿಗೆ ಮೊದಲು, ಯುಗಾಂಡಾದಲ್ಲಿ ಶಾಲಾ ಶಿಕ್ಷಣ ಮೊದಲಿಂದಲೇ ಇಂಗ್ಲಿಷ್ ಮಾಧ್ಯಮದಲ್ಲಿ ಇರುತ್ತಿತ್ತು. (ಈ ವಾಸ್ತವಾಂಶಗಳಿಗಾಗಿ ಕವುಮಾ, 2009 ನೋಡಿರಿ).

ಮಲೇಷಿಯ ದೇಶವು 2009ರಲ್ಲಿ ಗಣಿತ ಮತ್ತು ವಿಜ್ಞಾನವನ್ನು ರಾಷ್ಟ್ರೀಯ ಶಾಲೆಗಳಲ್ಲಿ ಬಹಾಸ ಮಲೇಷಿಯಾದಲ್ಲಿ ಮತ್ತು ಸ್ಥಳೀಯ ಶಾಲೆಗಳಲ್ಲಿ ಚೈನೀಸ್ ಮತ್ತು ತಮಿಳು ಭಾಷೆಗಳಲ್ಲಿ ಬೋಧಿಸಬೇಕು ಎಂದು ನಿರ್ಧರಿಸಿತು.

ತಮಿಳರಿಗೆ ತಮಿಳಿನ ಮಾಧ್ಯಮದಲ್ಲಿ ಬೋಧಿಸುವುದು ಸರಿ ಎಂದು ಮಲೇಶಿಯಾದಲ್ಲಿ ಅಂದುಕೊಂಡರೆ, ಇಲ್ಲಿ ಭಾರತದಲ್ಲಿ ಅದೊಂದು ಅಪರಾಧ ಎಂದೇ ಪರಿಗಣಿಸಲಾಗುತ್ತಿದೆ. ಭಾರತೀಯ ನೀತಿ ರೂಪಿಸುವವರ ಅನಕ್ಷರತೆ ಮತ್ತು ಅವಿವೇಕಕ್ಕೆ ಬೇರೆ ಉತ್ತಮ ಭಾಷ್ಯ ಬೇಕಾಗಿಲ್ಲ. ಪಂಜಾಬಿನಲ್ಲಿ ಒಂದು ಗಾದೆಯ ಪ್ರಕಾರ “ಪರಿಜ್ಞಾನ ಇಲದಿದ್ದರೆ, ಬಾವಿಗಳೂ ಒಣಗುತ್ತವೆ” ಅದರ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲದೇ ಇದ್ದರೂ ಸಹ, ಖಂಡಿತವಾಗಿಯೂ ಇಂಗ್ಲಿಷ್ ಸೋಂಕು ತಗುಲಿರುವ ಭಾರತೀಯ ತಲೆಗಳು ಖಾಲಿ ಆಗಿವೆ. ಏನೇ ಆಗಲಿ, ಇಲ್ಲಿ ಇನ್ನಷ್ಟು ಪುರಾವೆಗಳನ್ನು ಗಮನಿಸುವುದರಿಂದ ಯಾರಿಗೂ ಏನೂ ಹಾನಿ ಇಲ್ಲ.

“ಇತ್ತೀಚಿನ ವರ್ಷಗಳಲ್ಲಿ ನ್ಯೂಜಿಲೆಂಡ್ ಮತ್ತು ಬ್ರಿಟನ್ ತಮ್ಮ ಸ್ಥಳೀಯ ಅಲ್ಪಸಂಖ್ಯಾತ ಭಾಷೆಗಳಿಗೆ (ವಲಸಿಗರ ಭಾಷೆಗಳಿಗೆ ಅಲ್ಲ) ಹೆಚ್ಚಿನ ಮಾನ್ಯತೆ ತೋರಿಸಿದ್ದಾರೆ. ಮತ್ತೆ ಇದು ಶಾಲೆಗಳಲ್ಲಿ ಅವುಗಳ ಅನುಷ್ಠಾನದಲ್ಲೂ ಕಂಡುಬರುತ್ತದೆ. ಮಾವೂರಿ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ನ್ಯೂಜಿಲೆಂಡ್‌ನ ನೀತಿಯ ಇತ್ತೀಚಿನ ಚರಿತ್ರೆಯನ್ನು ಎಸ್.ಮೇ ಅವರು ಒಂದು ಆಶಾದಾಯಕ ದೃಷ್ಟಿಕೋನದಿಂದ (ಪುಟ 21–41) ನೋಡಿದ್ದಾರೆ. ಹೊಸದಾಗಿ ಸಾಂಸ್ಥಿಕಗೊಳಿಸಲಾದ, ಮಾವೂರಿ ಶಿಕ್ಷಣ ಮಾಧ್ಯಮ ಇರುವ ಮಾವೂರಿ ಪ್ರಾಥಮಿಕ ಶಾಲೆಗಳು (ಕುರಾ–ಕೌಪಾಪಾ) ಮೊದಲ ಮೌಲ್ಯಮಾಪನಗಳು ಸಲಹೆ ಮಾಡುವುದು, ಮಕ್ಕಳ ಶೈಕ್ಷಣಿಕ ಪ್ರಗತಿಯು, ಮುಖ್ಯವಾಹಿನಿಯಲ್ಲಿರುವ ಅವರು ಸಮವಯಸ್ಕರ ಜೊತೆ ಹೋಲಿಸುವಂತೆ ಇದ್ದು, ಇದೇ ಸಮಯದಲ್ಲಿ ದ್ವಿಭಾಷಿಕತೆಯ ಹೆಚ್ಚಿನ ಅನುಕೂಲ ನೀಡುತ್ತಿದೆ. (ಪುಟ35). ಹಾಂಗ್‌ಕಾಂಗ್ ಬಗ್ಗೆ ಹೇಳುವುದಾದರೆ, ಪುಂಟೋಂಗ್‌ಹುವಾದ ಉಪಯೋಗದಲ್ಲಿ ಹೆಚ್ಚಳ ಇದ್ದು, ಅದನ್ನು ಅಧಿಕವಾಗಿ ಬೋಧಿಸಲಾಗುವ ಶಾಲಾ ವಿಷಯ ಎಂದೂ ಸಹ ಪರಿಚಯಿಸಲಾಗಿದ್ದು, ಸ್ಥಳೀಯ ಕ್ಯಾಂಟೋನೀಸ್ ಇಂಗ್ಲಿಷ್ ಜೊತೆ ಈಗಲೂ ಶಿಕ್ಷಣ ಮಾಧ್ಯಮವಾಗಿ ಉಳಿದಿದೆ. ಇದಕ್ಕೆ ವಿರುದ್ಧವಾಗಿ, ಮಲೇಷಿಯಾ ಇಂಗ್ಲಿಷ್‌ನ ಅಂತಸ್ತು ಮತ್ತು ಕಾರ್ಯಗಳಿಗೆ ಕಡಿವಾಣ ಹಾಕಿ, ಅದರ ಬದಲು ಬಹಾಸ ಮಲೇಷಿಯಾ ಭಾಷೆಯನ್ನು ದೇಶದ ಏಕೈಕ ಅಧಿಕೃತ ಭಾಷೆ, ಮತ್ತು ಸಾರ್ವಜನಿಕ ಶಾಲೆಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಏಕೈಕ ಶಿಕ್ಷಣ ಮಾಧ್ಯಮ ಎಂದು ಆದೇಶಿದೆ. (ಎಸ್. ಕೌರ್ ಗಿಲ್, ಪುಟ 135–152)” (Ammon, Ulrich. 2009. Book Review. Medium of Instruction Policies. Which Agenda? Whose Agenda? by J.W. Tollefson and A.B.M. Tsui (eds)).

ಹಿಂದೆ ಇಂಗ್ಲಿಷ್ ಸೋಂಕಿತವಾಗಿದ್ದ ರಾಷ್ಟ್ರಗಳು ಅದಕ್ಕೆ ವಿದಾಯ ಹೇಳುತ್ತಿವೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಇದಕ್ಕೆ ಕಾರಣ ಯಾರೂ ಅಜ್ಞಾನದ ಸ್ನೇಹಿತರಾಗಲು ಇಷ್ಟಪಡುವುದಿಲ್ಲ ಎಂದು ತೋರುತ್ತದೆ. (ಇದಕ್ಕೆ ನಾವು ಭಾರತೀಯರು, ಮಾನಸಿಕ ದಾಸ್ಯಕ್ಕೆ ಅತಿ ಹೆಚ್ಚು ಒಗ್ಗಿಕೊಂಡು ಇರುವವರು, ಮತ್ತು ನೀತಿ ರೂಪಿಸುವದರಲ್ಲಿ ಢೋಂಗಿತನ ತೋರುವವರು ಹೊರತಾಗಿದ್ದೇವೆ.)

ಹಾಗಾದರೆ, ಭಾರತದಲ್ಲಿ ಇದು ಏಕೆ ಹೀಗಾಗುತ್ತಿದೆ? ಇದಕ್ಕೆ ನಿಜವಾದ ಕಾರಣ ಭಾರತೀಯ ಮನುವಾದ; ಭಾರತೀಯ ಎಲೈಟ್, ಎಂದರೆ ತಮ್ಮನ್ನು ತಾವು ದೇಶದ ಪ್ರಗತಿಗೆ ಅವಶ್ಯಕ ಎಂದುಕೊಂಡಿರುವ ಢೋಂಗಿ ಜನ, ಎಲ್ಲರನ್ನೂ ಲೂಟಿಮಾಡಿ, ಇಂಗ್ಲಿಷ್ ಭಾಷೆಯ ಉಪಕರಣ (ಆಯುಧದ) ಮೂಲಕ ಭಾರತೀಯರನ್ನು ಎಲ್ಲವುದರಿಂದ ವಂಚಿತರಾಗಿ ಮಾಡುವ ಸಂಚು ನಡೆಸಿದ್ದಾರೆ. ಆದ್ದರಿಂದ, ಈ ಡಿಜಿಟಲ್ ಯುಗದಲ್ಲಿ ಇಂಥ ಅಪಾಯಕಾರಿ ಭಾರತೀಯ ನವ–ಮನುವಾದವನ್ನು ಬೆಂಬಲಿಸಿ, ಆಧಾರ ನೀಡುವ ಸೈದ್ಧಾಂತಿಕ ಅಡಿಪಾಯಗಳನ್ನು ನಾವು ಕಿತ್ತೊಗೆಯಬೇಕು. ಈ ಆಧಾರಗಳೆಂದರೆ ಕೆಲವು ಮಿಥ್ಯೆಗಳು. ಸ್ಟಾಕ್‌ಹೋಮ್ (ಸ್ವೀಡನ್) ವಿಶ್ವವಿದ್ಯಾನಿಲಯ ಒಂದು ವರದಿ ಇವುಗಳ ಮುಖವಾಡವನ್ನು ಚೆನ್ನಾಗಿ ಕಿತ್ತೊಗೆಯಿತು. (Benson, Carol. 2005. The Importance of Mother Tongue-based Schooling for Educational Quality ನೋಡಿ). ಈ ಮಿಥ್ಯೆಗಳಲ್ಲಿ ಕೆಲವು ಮುಂದೆ ವಿವರಿಸಿದೆ. ●



ಮೋದಿ ಅಮೆರಿಕದ ಮುಂದೆ ತೆಪ್ಪಗೆ ತಲೆಬಾಗುತ್ತಿದ್ದಾರೆ

'ಮಹಾನ್ ರಾಷ್ಟ್ರೀಯವಾದಿ' ಎಂದು ಬಿಂಬಿಸಲಾಗಿರುವ ನರೇಂದ್ರ ಮೋದಿ, ಒಂದಾದ ಮೇಲೆ ಒಂದರಂತೆ ಅಮೆರಿಕದ ಆದೇಶಗಳ ಎದುರು ಮಂಡಿಯೂರುತ್ತಿದ್ದಾರೆ.

ಮೋದಿ ಸರಕಾರ ತನ್ನನ್ನು ಒಂದು ಅಡಿಯಾಳು ಮಿತ್ರನಾಗಿ ಕಟ್ಟಿಸಿಕೊಂಡಿರುವುದರಿಂದಾಗಿಯೇ ಅಮೆರಿಕವನ್ನು ಪ್ರತಿರೋಧಿಸಿ ನಿಲ್ಲಲು ಅಸಮರ್ಥವಾಗಿರುವುದು. ಟ್ರಂಪ್ ಆಡಳಿತದ ಭಂಡ ಆಗ್ರಹಗಳಿಗೆ ಮೋದಿ ಸರಕಾರದ ಹಲ್ಲುಗಿಂಜುವ ಇದುವರೆಗಿನ ಧೋರಣೆಯನ್ನು ಗಮನಿಸಿದರೆ ಅದು ಅಮೆರಿಕದ ಕಿರಿಯ ಮಿತ್ರನ ಪಾತ್ರ ವಹಿಸುವುದನ್ನು ಮುಂದುವರಿಸುತ್ತದೆ ಎಂಬುದು ಗೋಚರಿಸುತ್ತದೆ.

ಭಾರತದ ರಾಷ್ಟ್ರೀಯ ಹಿತಗಳನ್ನು ಸಾಮ್ರಾಜ್ಯಶಾಹಿ ಸೂಪರ್ ಪವರ್‌ನ ಹಿತಾಸಕ್ತಿಗಳಿಗೆ ಒತ್ತೆಯಿಡಲಾಗುವುದು



*** ಪ್ರಕಾಶ್ ಕಾರಟ್**

ಮೋದಿ ಸರಕಾರದ ಎರಡನೇ ಅವಧಿಯು ಅಮೆರಿಕದ ಕಿರಿಯ ಪಾಲುದಾರನಾಗಿ ಭಾರತದ ಪಾತ್ರವನ್ನು ಇನ್ನಷ್ಟು ಗಟ್ಟಿಗೊಳಿಸುವಂತದ್ದಾಗುತ್ತದೆ ಎನ್ನುವುದಕ್ಕೆ ಆಗಲೇ ಎಲ್ಲ ಸುಳಿವುಗಳು ಸಿಕ್ಕಿವೆ. ಪರಿಣಾಮವಾಗಿ ಇದು ನವ-ಉದಾರವಾದಿ ಅಜೆಂಡಾದ ಅನುಷ್ಠಾನವನ್ನು ಇನ್ನಷ್ಟು ತ್ವರಿತಗೊಳಿಸುತ್ತದೆ, ಮತ್ತು ಅದರಿಂದಾಗಿ ಜನತೆಯ ಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

2014–2019ರ ಅವಧಿಯಲ್ಲಿ ಮೋದಿ ಸರಕಾರವು ಭಾರತವನ್ನು ಅಮೆರಿಕದೊಂದಿಗೆ ವ್ಯೂಹಾತ್ಮಕವಾಗಿಯೂ ಮತ್ತು ಮಿಲಿಟರಿ ಕ್ಷೇತ್ರದಲ್ಲಿ ಮತ್ತಷ್ಟು ಜೋಡಿಸಿಕೊಳ್ಳಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿತ್ತು. ಮಿಲಿಟರಿ ಸಾಗಾಣಿಕೆ ಬೆಂಬಲ ಮತ್ತು ಸೇನಾ ಸಂಪರ್ಕ ಸಾಧನಗಳನ್ನು ಸಮಗ್ರೀಕರಿಸುವ ಒಪ್ಪಂದಗಳಿಗೆ ಸಹಿ ಹಾಕಲಾಗಿತ್ತು. ಜಪಾನ್, ಆಸ್ಟ್ರೇಲಿಯಾ, ಭಾರತ ಮತ್ತು ಅಮೆರಿಕ ಒಳಗೊಂಡ ಚತುಷ್ಪಕ್ಷೀಯ ಮೈತ್ರಿಕೂಟ ಮಾಡಿಕೊಳ್ಳುವ ಬಗ್ಗೆ ಅಮೆರಿಕ ಮಾಡಿದ್ದ ಪ್ರಸ್ತಾವನೆಗೆ ಭಾರತವೂ ಕೈಜೋಡಿಸಿತ್ತು.

ಈ ವ್ಯೂಹಾತ್ಮಕ ಅಪ್ಪುಗೆಯು ಏಷ್ಯಾ–ಶಾಂತಸಾಗರ ವಲಯದಲ್ಲಿ ಅಮೆರಿಕದ ಭೌಗೋಳಿಕ–ರಾಜಕೀಯ ಹಿತಗಳಿಗೆ ಸಂಪೂರ್ಣವಾಗಿ ಅನುಕೂಲಕರವಾದ ಒಂದು ವಿದೇಶಾಂಗ ನೀತಿಯನ್ನು ಭಾರತವು ಅನುಸರಿಸುವಂತೆ ಮಾಡಿತು.

ಈ ಹಿಂದೆ ರಷ್ಯಾ ಭಾರತಕ್ಕೆ ಶಸ್ತ್ರಾಸ್ತ್ರಗಳ ಮತ್ತು ಸಾಧನಗಳ ಪ್ರಮುಖ ಪೂರೈಕೆದಾರನಾಗಿತ್ತು. ಈಗ ಅಮೆರಿಕದ ಒತ್ತಡಕ್ಕೆ ಮಣಿದು ರಷ್ಯಾವನ್ನು ಬಿಟ್ಟು ಅಮೆರಿಕದಿಂದ ಶಸ್ತ್ರಾಸ್ತ್ರ ಮತ್ತು ಉಪಕರಣಗಳನ್ನು ಖರೀದಿಸುವ ಪ್ರಕ್ರಿಯೆಗೆ ಭಾರತ ವೇಗವನ್ನು ನೀಡಿತು. ಆಂತರಿಕ ನೀತಿಗಳ ಬಗ್ಗೆ ಹೇಳುವುದಾದರೆ, ಮೋದಿ ಸರಕಾರವು ಅಮೆರಿಕದ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ಮತ್ತು ಹಣಕಾಸು ಹಿತಗಳಿಗೆ ನೆರವಾಗುವ ಅನೇಕ ಕ್ರಮಗಳನ್ನು ಕೈಗೊಂಡಿತು.

ಡೊನಾಲ್ಡ್ ಟ್ರಂಪ್ 2018ರ ಜನವರಿಯಲ್ಲಿ ಅಧಿಕಾರ ವಹಿಸಿಕೊಂಡಾಗಿನಿಂದ ಟ್ರಂಪ್‌ರ 'ಅಮೆರಿಕ ಮೊದಲು' ಹಾಗೂ ಸ್ವರಕ್ಷಣಾತ್ಮಕ ನೀತಿಗಳಿಗೆ ಅನುಗುಣವಾಗಿ ಭಾರತದ ಮೇಲೆ ಅನೇಕ ಒತ್ತಡಗಳನ್ನು ಹೇರಲಾಯಿತು.

250 ಬಿಲಿಯ ಡಾಲರ್ ಮೌಲ್ಯದ ವಸ್ತುಗಳ ಮೇಲೆ ಸುಂಕವನ್ನು ಹೆಚ್ಚಿಸುವ ಮೂಲಕ ಹಾಗೂ ಇನ್ನೂ 325 ಬಿಲಿಯ ಡಾಲರ್ ವಸ್ತುಗಳಿಗೆ ಹಾಗೇ ಮಾಡುವುದಾಗಿ ಬೆದರಿಸುವ ಮೂಲಕ ಚೀನಾದ ವಿರುದ್ಧ ಟ್ರಂಪ್ ವಾಣಿಜ್ಯ ಸಮರವನ್ನು ಸಾರಿದರು. ಚೀನಾದ ಮಾರುಕಟ್ಟೆಯಲ್ಲಿ ಹೆಚ್ಚು ಅವಕಾಶಗಳನ್ನು ನೀಡಬೇಕು ಹಾಗೂ ಅಮೆರಿಕದ ತಂತ್ರಜ್ಞಾನ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೆ ರಕ್ಷಣೆಗಳನ್ನು ನೀಡಬೇಕು ಎಂದು ಅವರು ಆಗ್ರಹಿಸಿದರು.

ಟ್ರಂಪ್ ಭಾರತವನ್ನು ಕೂಡ ಬಿಡಲಿಲ್ಲ. ಭಾರತದೊಂದಿಗಿನ ವಾಣಿಜ್ಯ ಕೊರತೆಯನ್ನು ತಿರುಗು–ಮುರುಗು ಮಾಡಬೇಕು ಹಾಗೂ ಭಾರತವು ಸುಂಕಗಳನ್ನು ಇಳಿಸಬೇಕು ಮತ್ತು ಅಮೆರಿಕದ ವಸ್ತುಗಳನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳಬೇಕು ಎಂಬುದು ಅವರ ಬೇಡಿಕೆಯಾಗಿತ್ತು. ಈ ವಿಷಯದಲ್ಲಿ ಮೊದಲ ಹೆಜ್ಜೆಯಾಗಿ ಅವರು ಅಮೆರಿಕ ಆಮದು ಮಾಡಿಕೊಳ್ಳುತ್ತಿದ್ದ ಭಾರತದ ಅಲ್ಯುಮಿನಿಯಮ್ ಮತ್ತು ಉಕ್ಕಿನ ಮೇಲಿನ ಸುಂಕಗಳನ್ನು ಹೆಚ್ಚಿಸಿದರು. ಅದರ ಬೆನ್ನಲ್ಲೇ ಸುಂಕಗಳಿಲ್ಲದೆ ಭಾರತವು ಅನೇಕ ವಸ್ತುಗಳನ್ನು ರಫ್ತು ಮಾಡಲು ಅವಕಾಶ ನೀಡುವ ಪ್ರಾಶಸ್ತ್ಯದ ವ್ಯಾಪಾರ ಎಂದು ಪರಿಗಣಿಸುವುದನ್ನು ಕೊನೆಗೊಳಿಸಲು ಅವರು ನಿರ್ಧರಿಸಿದರು. ಈ ವ್ಯವಸ್ಥೆಯನ್ನು ತೆಗೆದು ಹಾಕಿದ್ದರಿಂದ ಭಾರತದಿಂದ ರಫ್ತಾಗುವ 1900 ವಸ್ತುಗಳಿಗೆ ಈಗ ಕಸ್ಟಮ್ಸ್ ಸುಂಕ ತೆರಬೇಕಾಗಿದೆ.

ಮಾರ್ಚ್ ಆರಂಭದಲ್ಲಿ ಅಮೆರಿಕ ಈ ಪ್ರಕಟಣೆಯನ್ನು ಮಾಡಿತು ಹಾಗೂ 60 ದಿನಗಳ ನಂತರ ಇದು ಅನುಷ್ಠಾನಕ್ಕೆ ಬರಲಿದೆ ಎಂದು ಹೇಳಿತು ಎನ್ನುವುದನ್ನು ಇಲ್ಲಿ ಗಮನಿಸಬೇಕು. ಆದಾಗ್ಯೂ ಈ ಪ್ರತಿಕೂಲ ಕ್ರಮವನ್ನು ನಿಲ್ಲಿಸಲು ಮೋದಿ ಸರಕಾರ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಅಥವಾ ಪ್ರತಿ–ಕ್ರಮಗಳಿಗೂ ಮುಂದಾಗಲಿಲ್ಲ. ಸುಂಕ ಹೇರಿದ್ದನ್ನು ಚೀನಾ ಯಾವ ರೀತಿಯಲ್ಲಿ ನಿರ್ವಹಿಸಿತು ಎನ್ನುವುದಕ್ಕೆ ಪೂರ್ತಿ ವ್ಯತಿರಿಕ್ತವಾದ ನಡೆ ಭಾರತದ್ದಾಗಿದೆ. ಚೀನಾವನ್ನು ಪ್ರವೇಶಿಸುವ ಅಮೆರಿಕದ ವಸ್ತುಗಳ ಮೇಲೆ ಸುಂಕವನ್ನು ಹೇರುವ ಮೂಲಕ ಚೀನಾ ತಿರುಗೇಟು ನೀಡಿತು.

ಮೋದಿ ಸರಕಾರ ತನ್ನನ್ನು ಒಂದು ಅಡಿಯಾಳು ವ್ಯೂಹಾತ್ಮಕ ಮಿತ್ರನಾಗಿ ಕಟ್ಟಿಸಿಕೊಂಡಿರುವುದರಿಂದಾಗಿಯೇ ಅಮೆರಿಕವನ್ನು ಪ್ರತಿರೋಧಿಸಿ ನಿಲ್ಲಲು ಅಸಮರ್ಥವಾಗಿರುವುದು.

'ಮಹಾನ್ ರಾಷ್ಟ್ರೀಯವಾದಿ' ಎಂದು ಬಿಂಬಿಸಲಾಗಿರುವ ನರೇಂದ್ರ ಮೋದಿ, ಒಂದಾದ ಮೇಲೆ ಒಂದರಂತೆ ಅಮೆರಿಕದ ಆದೇಶಗಳಿಗೆ ಮಂಡಿಯೂರುತ್ತಿದ್ದಾರೆ. ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳದಂತೆ ಭಾರತಕ್ಕೆ ಅಮೆರಿಕ ಆದೇಶಿಸಿತು. ಅದನ್ನು ಶಿರಸಾವಹಿಸಿ ಪಾಲಿಸಲಾಯಿತು. ಇದರಿಂದಾಗಿ ಭಾರತಕ್ಕೆ ತುಂಬಾ ನಷ್ಟವಾಗಲಿದೆ. ಯಾಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ಇರಾನ್‌ನಿಂದ ಎಣ್ಣೆಯನ್ನು ತರಿಸಿಕೊಳ್ಳಲಾಗುತ್ತಿತ್ತು. ಅದಾದ ನಂತರ, ವೆನಿಜುವೆಲಾ ವಿರುದ್ಧದ ಆರ್ಥಿಕ ಸಮರದ ಭಾಗವಾಗಿ ಅಮೆರಿಕವು ವೆನಿಜುವೆಲಾದಿಂದ ತೈಲ ಆಮದು ನಿಲ್ಲಿಸುವಂತೆ ಭಾರತಕ್ಕೆ ಒತ್ತಾಯಿಸಿತು. ಮೋದಿ ಸರಕಾರ ಇದನ್ನು ಕೂಡ ತಡ ಮಾಡದೆ ಪಾಲಿಸಿತು.

ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳಬಾರದು ಎಂಬ ಆದೇಶವನ್ನು ಭಾರತಕ್ಕೆ ತುಂಬಾ ನಷ್ಟವಾದರೂ ಶಿರಸಾವಹಿಸಿ ಪಾಲಿಸಲಾಯಿತು. ಅದಾದ ನಂತರ, ವೆನಿಜುವೆಲಾ ವಿರುದ್ಧದ ಅಮೆರಿಕಾದ ಆರ್ಥಿಕ ಸಮರದ ಭಾಗವಾಗಿ ತೈಲ ಆಮದು ನಿಲ್ಲಿಸುವ ಒತ್ತಾಯವನ್ನೂ ತಡ ಮಾಡದೆ ಪಾಲಿಸಲಾಯಿತು. ರಷ್ಯಾದ ಟ್ರೈಯಂಫ್ ಎಸ್–400 ಕ್ಷಿಪಣಿಗಳನ್ನು ಖರೀದಿಸಿದ್ದಕ್ಕೆ ದಿಗ್ಬಂಧನಗಳನ್ನು ಹೇರದಂತೆ ಅಂಗಲಾಚುತ್ತಿದೆ, ಅಮೆರಿಕಾ ಬೆದರಿಸುತ್ತಲೇ ಇದೆ.



ರಷ್ಯಾದ ಟ್ರೈಯಂಫ್ ಎಸ್–400 ಕ್ಷಿಪಣಿಗಳನ್ನು ಖರೀದಿಸಿದ್ದಕ್ಕೆ ದಿಗ್ಬಂಧನಗಳನ್ನು ಹೇರದಂತೆ ಅಮೆರಿಕಕ್ಕೆ ಭಾರತ ಅಂಗಲಾಚುತ್ತಿದೆ. ಆದರೆ ಭಾರತದ ವಿರುದ್ಧ ದಿಗ್ಬಂಧನ ವಿಧಿಸುವುದಾಗಿ ಅಮೆರಿಕ ಬೆದರಿಕೆ ಹಾಕುತ್ತಲೇ ಇದೆ. ಪರಿಹಾರವಾಗಿ ಅಮೆರಿಕದಿಂದ ಹೆಚ್ಚು ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವಂತೆ ಒತ್ತಡ ಹೇರುವುದು ಇದರ ಉದ್ದೇಶವಾಗಿದೆ.

ಲಾಕ್‌ಹೀಡ್ ನಿರ್ಮಿತ ಎಫ್–21 ಯುದ್ಧ ವಿಮಾನಗಳನ್ನು ಖರೀದಿಸುವಂತೆ ಭಾರತದ ಮೇಲೆ ಅಪಾರ ಒತ್ತಡ ಹೇರಲಾಗುತ್ತಿದೆ. 110 ಯುದ್ಧ ವಿಮಾನಗಳ ಖರೀದಿಗೆ (ರಫೇಲ್ ಯುದ್ಧ ವಿಮಾನ ಖರೀದಿಯನ್ನು 36ಕ್ಕೆ ಇಳಿಸಿದ ನಂತರ) ಭಾರತದ ಒಂದು ಟೆಂಡರ್ ಪ್ರಕಟಿಸಿದೆ. ಬಿಲಿಯಗಟ್ಟಲೆ ಡಾಲರ್ ಮೌಲ್ಯದ ಈ ಗುತ್ತಿಗೆಯನ್ನು ಪಡೆಯಲು ಅಮೆರಿಕ ಭಾರತವನ್ನು ಪೀಡಿಸುತ್ತಿದೆ.

ಅಮೆರಿಕದ ವಿದೇಶ ಸಚಿವ ಮೈಕ್ ಪಾಂಪಿಯೊ ಜೂನ್ ಮೂರನೇ ವಾರದಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಮೋದಿ ಅಧಿಕಾರಕ್ಕೆ ಮರಳಿದ ನಂತರದ ಮೊದಲ ಭೇಟಿಯಿದು. ವಾಣಿಜ್ಯ ವಿಚಾರದಲ್ಲಿ ಕಠಿಣ ಮಾತು, ರಷ್ಯಾದ ಕ್ಷಿಪಣಿಗಳನ್ನು ಖರೀದಿಸಿದ್ದಕ್ಕೆ ಪರಿಹಾರವಾಗಿ ಅಮೆರಿಕದ ಹೆಚ್ಚು ಶಸ್ತ್ರಾಸ್ತ್ರಗಳನ್ನು ಖರೀದಿಸುವಂತೆ ಒತ್ತಾಯಿಸುವುದು, ಚೀನಾದ ಬೃಹತ್ ಕಂಪೆನಿಯಾದ ಹುವೈ ಭಾರತದಲ್ಲಿ ನಡೆಯುವ 5ಜಿ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ನಿಷೇಧಿಸುವುದು– ಇವೆಲ್ಲ ಪಾಂಪಿಯೊ ಭೇಟಿ ವೇಳೆ ಇರಲಿರುವ ಕಾರ್ಯಸೂಚಿಯಾಗಿದೆ.

ಮಾಜಿ ವಿದೇಶಾಂಗ ಕಾರ್ಯದರ್ಶಿ ಎಸ್. ಜೈಶಂಕರ್ ಇದೀಗ ಮೋದಿ ಸರಕಾರದ ಹೊಸ ವಿದೇಶ ಸಚಿವರು. ಒಬ್ಬ ವೃತ್ತಿನಿರತ ರಾಜತಾಂತ್ರಿಕನನ್ನು ನೇರವಾಗಿ ಸಚಿವ ಸಂಪುಟಕ್ಕೆ ಬಡ್ತಿ ನೀಡಿದ್ದು ಇದೇ ಮೊದಲ ಸಲವಾಗಿದೆ. ಅಮೆರಿಕ–ಪರ ಚಟುವಟಿಕೆಗಳಿಗೆ ಜೈಶಂಕರ್ ಖ್ಯಾತರು. ವಿದೇಶ ವ್ಯವಹಾರಗಳ ಸಚಿವಾಲಯದಲ್ಲಿನ ಹಾಗೂ ವಿದೇಶಾಂಗ ಕಾರ್ಯದರ್ಶಿಯಾಗಿ ಅವರ ಕಾರ್ಯಗಳ ದಾಖಲೆಗಳು ಹೇಗೆ ಅವರು ಅಮೆರಿಕದೊಂದಿಗೆ ನಿಕಟ ವ್ಯೂಹಾತ್ಮಕ ಮೈತ್ರಿಗೆ ಒತ್ತು ನೀಡಿದ್ದರು ಎನ್ನುವುದನ್ನು ತೋರಿಸುತ್ತವೆ.

ಟ್ರಂಪ್ ಆಡಳಿತದ ಭಂಡ ಆಗ್ರಹಗಳಿಗೆ ಮೋದಿ ಸರಕಾರದ ಹಲ್ಲುಗಿಂಜುವ ಇದುವರೆಗಿನ ಧೋರಣೆಯನ್ನು ಗಮನಿಸಿದರೆ ಅದು ಅಮೆರಿಕದ ಕಿರಿಯ ಮಿತ್ರನ ಪಾತ್ರ ವಹಿಸುವುದನ್ನು ಮುಂದುವರಿಸುತ್ತದೆ ಎಂಬುದು ಗೋಚರಿಸುತ್ತದೆ. ಭಾರತದ ರಾಷ್ಟ್ರೀಯ ಹಿತಗಳನ್ನು ಸಾಮ್ರಾಜ್ಯಶಾಹಿ ಸೂಪರ್ ಪವರ್‌ನ ಹಿತಾಸಕ್ತಿಗಳಿಗೆ ಒತ್ತೆಯಿಡಲಾಗುವುದು.

ಅನು: ವಿಶ್ವ

ಅಸ್ಸಾಂ: ದೋಷಪೂರಿತ ಡಿ–ಕಾರ್ಡ್ ಮತ್ತು ಅಮಾನವೀಯ ಕ್ಯಾಂಪ್‌ಗಳು



ಕಾರ್ಗಿಲ್ ಯುದ್ಧದಲ್ಲಿ ಸನ್ಮಾನಿತ ಮಾಜಿ ಯೋಧ ಮೊಹಮ್ಮದ್ ಸನವುಲ್ಲರನ್ನು ಅಕ್ರಮ ವಲಸಿಗ, ವಿದೇಶೀಯ ಎಂದು ಬಂಧಿಸಿರುವ ಪ್ರಕರಣ ಅಸ್ಸಾಂನ ಪೌರತ್ವ ತನಿಖೆಯ ಪ್ರಕ್ರಿಯೆಯಲ್ಲಿ ಗಂಭೀರ ದೋಷಗಳಿವೆ ಎಂಬುದನ್ನು ಸ್ಪಷ್ಟವಾಗಿ ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಅಸ್ಸಾಂ ರಾಜ್ಯ ಸಮಿತಿ ಹೇಳಿದೆ. ಸೇನೆಯಿಂದ ಗೌರವ ಲೆಫ್ಟಿನೆಂಟ್ ಆಗಿ ನಿವೃತ್ತಿ ಪಡೆದ ಸನವುಲ್ಲ ಅಸ್ಸಾಂ ಪೋಲಿಸ್ ಪಡೆಯ ಗಡಿ ಶಾಖೆಯಲ್ಲೇ ಸಬ್ ಇನ್ಸ್‌ಪೆಕ್ಟರ್ ಆಗಿಯೂ ಕೆಲಸ ಮಾಡಿದವರು ಎಂಬುದು ಗಮನಾರ್ಹ.

ಅಸ್ಸಾಂ ಒಪ್ಪಂದದ ಪ್ರಕಾರ ಆ ರಾಜ್ಯದ ಹಾಲಿ ನಿವಾಸಿಗಳ ಪೌರತ್ವದ ತನಿಖೆ ನಡೆಸಿ ಸಂದೇಹ ಬಂದರೆ ಅವರ ಕೇಸುಗಳನ್ನು 'ವಿದೇಶಿಯರ ನ್ಯಾಯಮಂಡಲಿ' (ಫಾರಿನರ್ಸ್ ಟ್ರಿಬ್ಯುನಲ್–ಎಫ್.ಟಿ.) ಯಲ್ಲಿ ದಾಖಲಿಸುವ, ಸಂದೇಹಾಸ್ಪದ ಮತದಾರ ಪಟ್ಟಿಯಲ್ಲಿ (ಡಿ–ವೋಟರ್) ಸೇರಿಸುವ, ಅವರನ್ನು ಬಂಧನಾ ಕ್ಯಾಂಪ್‌ಗಳಿಗೆ ಕಳಿಸುವ ಪ್ರಕ್ರಿಯೆಯಲ್ಲಿ ಗಂಭೀರ ದೋಷಗಳಿವೆ ಎಂದು ಇದನ್ನು ಸಿಪಿಐ(ಎಂ) ವಿರೋಧಿಸಿಕೊಂಡು ಬಂದಿದೆ.

ಸನವುಲ್ಲ ಪ್ರಕರಣದಲ್ಲಿ ಅಸ್ಸಾಂ ಪೋಲೀಸಿನ ಗಡಿ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಸಲ್ಲಿಸಿದ ತನಿಖಾ ವರದಿಯಲ್ಲಿ ನಮೂದಿಸಿದ ಮೂವರು ಸಾಕ್ಷಿಗಳು ತಮ್ಮನ್ನು ಕೇಳಿಯೇ ಇಲ್ಲ, ತಮ್ಮ ಸಹಿಗಳನ್ನು ಫೋರ್ಜರಿ ಮಾಡಲಾಗಿದೆ ಎಂದಿದ್ದಾರೆ. ಈಗ ವರದಿ ಸಲ್ಲಿಸಿದ ಎಸ್‌ಐ ತಾನು ತನಿಖೆ ಮಾಡಿದ ಸನವುಲ್ಲ ಇವರಲ್ಲ ಎಂದಿರುವುದಾಗಿ ವರದಿಯಾಗಿದೆ.

ಸಿಪಿಐ(ಎಂ) ಅಸ್ಸಾಂ ರಾಜ್ಯ ಸಮಿತಿ ಸನವುಲ್ಲ ಅವರ ಬಂಧನವನ್ನು, ಮತ್ತು ನಂತರ ಅವರನ್ನು ಬಂಧನಾ ಕ್ಯಾಂಪ್‌ಗೆ ಕಳಿಸಿರುವುದನ್ನು ಬಲವಾಗಿ ಖಂಡಿಸಿದೆ. ಸಂದೇಹಾಸ್ಪದ ವಿದೇಶೀಯರೆಂದು ಮಾಡಿರುವ ಪಟ್ಟಿಯನ್ನು ಆಮೂಲಾಗ್ರವಾಗಿ ಪರಾಮರ್ಶಿಸಬೇಕು, ಬಂಧನಾ ಕ್ಯಾಂಪ್‌ಗಳಲ್ಲಿ ಇರುವವರ ಹೆಸರುಗಳನ್ನೂ ಪರಾಮರ್ಶಿಸಬೇಕು, ತಪ್ಪಾಗಿ ಬಂಧಿಸಿಟ್ಟಿರುವವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಡಿ–ವೋಟರ್ ಮತ್ತು ಬಂಧನಾ ಕ್ಯಾಂಪ್‌ಗಳನ್ನು ಕುರಿತಂತೆ ಒಂದು ಮನವಿ ಪತ್ರವನ್ನು ರಾಜ್ಯಸಮಿತಿ ಮುಖ್ಯಮಂತ್ರಿಗಳಿಗೆ ಸಲ್ಲಿಸುವುದಾಗಿ ಹೇಳಿದೆ.





ಸಮರ್ಪಕ ಬರ ನಿರ್ವಹಣೆಗೆ ಒತ್ತಾಯಿಸಿ ಕೂಲಿಕಾರರ ಪ್ರತಿಭಟನೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕರೆಯ ಮೇರೆಗೆ ಜೂನ್ 4 ರಂದು ರಾಜ್ಯದ ಹಲವೆಡೆ ಸಮರ್ಪಕ ಬರ ನಿರ್ವಹಣೆಗೆ ಒತ್ತಾಯಿಸಿ ಕೃಷಿ ಕೂಲಿಕಾರರು ಪ್ರತಿಭಟನೆ ನಡೆಸಿದರು.

ಕೊಪ್ಪಳದಲ್ಲಿ ಸುಂಕಪ್ಪ ಗದಗ ನೇತೃತ್ವದಲ್ಲಿ ಕೂಲಿಕಾರರು ಮೆರವಣಿಗೆ ಹೊರಡಿಸಿ ತಾಲೂಕ ಪಂಚಾಯತ್ ಕಛೇರಿ ಎದುರು ಧರಣಿ ನಡೆಸಿದರು. ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಒದಗಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾದ ಮನವಿಯಲ್ಲಿ ಒತ್ತಾಯಿಸಲಾಗಿದೆ. ವಿದ್ಯುತ್ ಕಣ್ಣು ಮುಚ್ಚಾಲೆಯಿಂದ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದೆ ಎಂದು ಅಧಿಕಾರಿಗಳ ಗಮನಕ್ಕೆ ತರಲಾಯಿತು. ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡಿದವರಿಗೆ ಬಾಕಿ ಇರುವ ವೇತನ ನೀಡದೆ ತಾರತಮ್ಯ ಮಾಡುತ್ತಿರುವುದನ್ನು ಖಂಡಿಸಲಾಯಿತು. ಸುಡುತ್ತಿರುವ ಬಿಸಿಲು, ಗಟ್ಟಿಯಾಗಿರುವ ಮಣ್ಣು ಗಣನೆಗೆ ತೆಗೆದುಕೊಂಡು ಕನಿಷ್ಟ ಕೆಲಸದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಲಾಯಿತು.

ಗಂಗಾವತಿಯಲ್ಲಿ ಸುಮಾರು 500 ರಷ್ಟು ಕೂಲಿಕಾರ ಮಹಿಳೆಯರು ಮತ್ತು ಪುರುಷರು ಉರಿ ಬಿಸಿಲಿನಲ್ಲಿ ಕಾಲ್ನಡಿಗೆಯಲ್ಲಿ ಬಂದು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಯ ಕಛೇರಿ ಎದುರು ಧರಣಿ ಕುಳಿತರು. ಬಾಕಿ ವೇತನ ಪಾವತಿ ಹಾಗೂ ರೈತರ ಟ್ರಾಕ್ಟರುಗಳ ಬಾಕಿ ಬಾಡಿಗೆಯನ್ನ ಕೂಡಲೇ ಸಂದಾಯ ಮಾಡಬೇಕೆಂಬುದು ಅವರ ಪ್ರಮುಖ ಬೇಡಿಕೆಯಾಗಿತ್ತು. ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಸೌಜನ್ಯತೆಯಿಂದ ಸ್ಪಂಧಿಸದೆ ಹೊರಟು ಹೋದರು. ಇದರಿಂದ ಆಕ್ರೋಶಗೊಂಡ ಕೂಲಿಕಾರರು ಅಧಿಕಾರಿಗಳ ಮನೆಯ ಎದುರಿಗೆ ಹೋಗಿ ಧಿಕ್ಕಾರ ಕೂಗಿದರು. ಮತ್ತೆ ಎರಡನೇ ಬಾರಿಗೆ ಧರಣಿ ಸ್ಥಳಕ್ಕೆ ಆಗಮಿಸಿದ ಇ.ಓ. ಸಾವಧಾನದಿಂದ ಮಾತನಾಡಿ ಜೂನ್ 7 ರಂದು ಒಂದು ಜಂಟಿ ಸಭೆ ಕರೆಯುವವಯದಾಗಿ ಪ್ರಕಟಿಸಿದರು. ಸಂಬಂಧಪಟ್ಟ ಪಿ.ಡಿ.ಓ.ಗಳನ್ನು ತಪ್ಪದೆ ಕರೆಯಿಸಬೇಕೆಂದು ಕೂಲಿಕಾರರು ಒತ್ತಾಯಿಸಿದರು. ರಾಜ್ಯ ಪದಾಧಿಕಾರಿಗಳಾದ ಗಂಗಾಧರಯ್ಯ ಸ್ವಾಮಿ, ಬಸವರಾಜ ಮರಕುಂಬಿ, ಹುಸೇನಪ್ಪ, ಮರಿನಾಗಪ್ಪ, ಕರಿಯಪ್ಪ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರೂ ಸಹ ಉಪಸ್ಥಿತರಿದ್ದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.



ಮಂಡ್ಯದಲ್ಲಿ ಎರ್ಪಡಿಸಲಾಗಿದ್ದ ಮೆರವಣಿಗೆ ಮತ್ತು ಪ್ರತಿಭಟನೆಯಲ್ಲಿ ಸುಮಾರು 1000 ಮಂದಿ ಕೂಲಿಕಾರರು ಭಾಗವಹಿಸಿದ್ದರು. ಈಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ, ಮಳೆ ಅಭಾವದಿಂದ ಬೆಳೆ ಹಾನಿ ಅನುಭವಿಸಿದ ರೈತರಿಗೆ ಪರಿಹಾರ ನೀಡಬೇಕು, ಹಾಲಿ ಇರುವ ಬೆಳೆಗಳನ್ನು ರಕ್ಷಿಸಲು ಕಾಲುವೆಗಳಿಗೆ ಕಾವೇರಿ ನೀರು ಬಿಡಬೇಕು, ಜನ ಜಾನುವಾರುಗಳಿಗೆ ಕುಡಿಯಲು ನೀರು, ದನಕರುಗಳಿಗೆ ಮೇವು ಒದಗಿಸಬೇಕು. ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಕೋರುವ ಎಲ್ಲರಿಗೂ ಕೆಲಸ ಒದಗಿಸಬೇಕು, ಬೇಸಿಗೆ ಮುಗಿಯುವ ವರೆಗೂ ಕೆಲಸದ ಪ್ರಮಾಣವನ್ನು ಅರ್ಧಕ್ಕೆ ಇಳಿಸಬೇಕು, ಯಂತ್ರಗಳ ಬಳಕೆ ತಡೆಗಟ್ಟಬೇಕು, ಕಾಯಕ ಬಂಧುಗಳಿಗೆ ಬಾಕಿ ಇರುವ ಪ್ರೋತ್ಸಾಹ ಧನವನ್ನು ಕೂಡಲೇ ಸಂದಾಯ ಮಾಡಬೇಕು, ಕೆರೆ ಕಟ್ಟೆಗಳ ಹೂಳು ತೆಗೆಯಿಸಿ ನೀರು ತುಂಬಿಸಬೇಕು ಮತ್ತು ಮಳೆ ನೀರು ಸಂಗ್ರಹಕ್ಕೆ ಆದ್ಯತೆ ನೀಡಬೇಕು, ಪಡಿತರದಲ್ಲಿ ಕಳಪೆ ಬೇಳೆಕಾಳು ನೀಡುವುದನ್ನು ನಿಲ್ಲಿಸಿ ಗುಣಮಟ್ಟದ ಬೇಳೆಕಾಳು ನೀಡಬೇಕು, ಪಡಿತರದಲ್ಲಿ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು 5 ಕೆ.ಜಿ. ಬೆಲ್ಲವನ್ನು ವಿತರಿಸಿ ಅಲೆಮನೆಗಳನ್ನು ಪುನಶ್ಚೇತನಗೊಳಿಸಬೇಕು. 94ಸಿ ಮತ್ತು 94ಸಿಸಿ ಅರ್ಜಿಗಳನ್ನು ಕೂಡಲೇ ಇತ್ಯಾರ್ಥಪಡಿಸಿ ಹಕ್ಕುಪತ್ರ ನೀಡಬೇಕು, ನಮೂನೆ 57 ರಲ್ಲಿ ಅರ್ಜಿ ಸಲ್ಲಿಸಿದ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ವಿತರಿಸಬೇಕು. ವೃದ್ಧರು, ವಿಧವೆಯರು, ಅಂಗವಿಕಲರು ಮೊದಲಾದವರಿಗೆ ರೂ. 1000 ದರದಲ್ಲಿ ಏಕರೂಪದ ಪಿಂಚಣಿ ಕೊಡಬೇಕು, ಭಾಗ್ಯಜ್ಯೋತಿ ಬಳಕೆದಾರರಿಗೆ 100 ಯೂನಿಟ್ ವಿದ್ಯುತ್ತನ್ನು ಉಚಿತವಾಗಿ ಕೊಡಬೇಕು, ಹಾಲಿನ ದರ ಹೆಚ್ಚಿಸಬೇಕು. ಬಾಕಿ ಹಣ ಪಾವತಿ ಮಾಡಬೇಕು, ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು, ಅಂಗನವಾಡಿಗಳಲ್ಲೇ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ನಡೆಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲಾಯಿತು. ಪಧಾಧಿಕಾರಿಗಳಾದ ಎಂ. ಪುಟ್ಟಮಾದು, ಬಿ. ಹನುಮೇಶ್, ಬಿ.ಎಂ. ಶಿವಮಲ್ಲಯ್ಯ, ಸರೋಜಮ್ಮ, ಅಬ್ದುಲ್, ಹೆಚ್.ಸಿ. ನಾಗರಾಜು, ಎನ್. ಸುರೇಂದ್ರ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಅದೇ ರೀತಿಯಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನಲ್ಲಿ ಮತ್ತು ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಕೂಲಿಕಾರರು ಪ್ರತಿಭಟನೆ ಮಾಡಿ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಶಹಾಪುರದಲ್ಲಿ ಪದಾಧಿಕಾರಿಗಳಾದ ದಾವಲ್‌ಸಾಬ್ ನದಾಫ್ ಮತ್ತು ಸವಿತಾ ಪೂಜಾರಿ ಹಾಗೂ ಸವದತ್ತಿಯಲ್ಲಿ ಎಲ್.ಎಸ್. ನಾಯಕ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಡಿಹೆಚ್‌ಎಸ್ ಘಟಕ ಉದ್ಘಾಟನೆ



ಅನಿಷ್ಠ, ಅವಮಾನಕರ ಜಾತಿ ಪದ್ಧತಿ ಮತ್ತು ಅದರ ತಾರತಮ್ಯದ ಆಚರಣೆಗಳ ವಿರುದ್ಧ ಹೋರಾಡಲು ಬಯಸುವ ಎಲ್ಲರನ್ನು "ದಲಿತ ಹಕ್ಕುಗಳ ಸಮಿತಿ" ಅಡಿಯಲ್ಲಿ ಸಂಘಟಿಸಬೇಕು ಎಂದು ಡಿಹೆಚ್‌ಎಸ್ ರಾಜ್ಯ ಸಹಸಂಚಾಲಕರಲ್ಲಿ ಒಬ್ಬರಾದ ನಿತ್ಯಾನಂದಸ್ವಾಮಿ ಕರೆ ನೀಡಿದರು. ಅವರು ಕಾರಟಗಿ (ಗಂಗಾವತಿ) ತಾಲೂಕಿನ ಚಿಕ್ಕಡಂಕನಕಲ್ ಗ್ರಾಮದಲ್ಲಿ ಡಿಹೆಚ್‌ಎಸ್ ಘಟಕವನ್ನು ಉದ್ಘಾಟಿಸುವ ಭಾಗವಾಗಿ ಡಿಹೆಚ್‌ಎಸ್ ನಾಮಫಲಕವನ್ನು ಅನಾವರಣಗೊಳಿಸಿ ಮಾತನಾಡುತ್ತಿದ್ದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ನಮಗೆ ನೀಡಿದ ಸಂವಿಧಾನ ಮತ್ತು ಅದರ ಅಡಿಯಲ್ಲಿ ರಚನೆಯಾದ ದೇಶದ ಕಾನೂನುಗಳು ದಲಿತರಿಗೆ ಹಲವಾರು ಹಕ್ಕುಗಳನ್ನು ನೀಡಿವೆ. ಶಿಕ್ಷಣ ಮತ್ತು ಉದ್ಯೋಗ ರಂಗದಲ್ಲಿ ನೀಡಿಲಾಗಿರುವ ಮೀಸಲಾತಿ ಎಂಬುದು ಭಿಕ್ಷೆಯಲ್ಲ. ಅದು ನಮ್ಮ ಹಕ್ಕು. ಕಾನೂನು ಬದ್ಧ ಹಕ್ಕುಗಳನ್ನು ಜಾರಿಮಾಡಿಸಲು ನಾವು ಹೋರಾಡಬೇಕಾಗಿದೆ. ಅದಕ್ಕಾಗಿ ಡಿಹೆಚ್‌ಎಸ್ ಹುಟ್ಟಿಕೊಂಡಿದೆ. ಇದರ ಘಟಕಗಳನ್ನು ಗ್ರಾಮ ಗ್ರಾಮಗಳಲ್ಲಿ ಸಂಘಟಿಸಿ ದಲಿತರ ಹಿತರಕ್ಷಣೆಗಾಗಿ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಅವರು ಹೇಳಿದರು.

ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಲಭ್ಯ ಇರುವ ಅನುದಾನವನ್ನು ಪಡೆಯಲು ಡಿಹೆಚ್‌ಎಸ್ ಘಟಕ ಶ್ರಮಿಸಬೇಕು. ಎಂದು ಹೇಳಿದ ಅವರು ವಾಸಕ್ಕೆ ಮನೆ, ಕಿರು ನಿರಾವರಿ ಉಪಕಸುಬುಗಳಿಗೆ ಸಾಲ ಇತ್ಯಾದಿ ಸೌಲಭ್ಯಗಳನ್ನು ಪಡೆಯಬೇಕು ಎಂದು ಅಭಿಪ್ರಾಯಪಟ್ಟರು. ಡಿಹೆಚ್‌ಎಸ್ ಜಿಲ್ಲಾ ಸಂಚಾಲಕರಾದ ಕೆ. ಹುಸೇನಪ್ಪ ಉಪಸ್ಥಿತರಿದ್ದು ಸಭೆಯನ್ನು ಉದೇಶಿಸಿ ಮಾತನಾಡಿದರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ಸದಸ್ಯೆ ಶ್ರೀಮತಿ ಭಾಗಮ್ಮ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ವರದಿ: ಕೆ. ಹುಸೇನಪ್ಪ



ಒಂದು ಸಂಸ್ಥೆಯನ್ನು ಬಲಗೊಳಿಸಲು ಮತ್ತೊಂದು ಸಂಸ್ಥೆಯನ್ನು ಬಲಹೀನಗೊಳಿಸುವುದು ನ್ಯಾಯವೇ?

ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಪ್ರಾರಂಭಿಸಿ

ಎಸ್. ವರಲಕ್ಷ್ಮಿ



ರಾಜ್ಯದ ದುಡಿಯುವ ಜನತೆಯ ಚಳುವಳಿಯಲ್ಲಿ ತೊಡಗಿಸಿಕೊಂಡ ನಾನು, ಇಪ್ಪತ್ತೈದು ವರ್ಷಗಳ ಹಿಂದಿನಿಂದ ಅಂಗನವಾಡಿ ತಾಯಂದಿರನ್ನು ಸಂಘಟಿಸುವಾಗೆಲ್ಲ ಅಂತರ್ಮುಖಿಯಾಗಿಸುವ ಘಟನೆಗಳು ಹತ್ತಾರು. ಇತ್ತೀಚೆಗೆ ನಾನು ಕೋಲಾರ ಜಿಲ್ಲೆಗೆ ಅಂಗನವಾಡಿ ನೌಕರರ ಪ್ರತಿಭಟನೆಗೆ ಹೋಗಿದ್ದೆ. ಅಲ್ಲಿ ನಮ್ಮ ಹಳ್ಳಿಯ ಅಂಗನವಾಡಿ ಟೀಚರ್ ರತ್ನರವರು ಮತ್ತು ಅನೇಕ ಅಂಗನವಾಡಿ ಸ್ನೇಹಿತರು ಬಂದಿದ್ದರು. ನಾನು 28 ವರ್ಷಗಳ ನಂತರವೂ ಇವರನ್ನು ನೆನಪಿನಲ್ಲಿಟ್ಟಿದ್ದು ಯಾಕೆಂದರೆ, ಅಂಗನವಾಡಿಯಲ್ಲಿ ಕೊಡುವ ಆಹಾರ. ನಾವು ದೊಡ್ಡ ಮಕ್ಕಳಾದರೂ ಊಟಕ್ಕಿಲ್ಲದ ಬಡತನ. ಆಗ ನೆರವಿಗೆ ಬಂದದ್ದೂ ಇದೇ ಅಂಗನವಾಡಿಯಲ್ಲಿ ಹೆಚ್ಚಿಗೆ ಉಳಿದ ಆಹಾರ.

ಮಂಗಳೂರಿನ ಸಿಐಟಿಯು ಸಭೆಗೆ ಹೋದಾಗ ಸುನಿಲ್ ಜಿಲ್ಲಾ ಕಾರ್ಯದರ್ಶಿ ಹೇಳುತ್ತಿದ್ದರು ತಾನು ಅಂಗನವಾಡಿಯಲ್ಲಿಯೇ ಬೆಳೆದದ್ದು ಅಂತ. ಹಂಪಿ ವಿಶ್ವ ವಿದ್ಯಾಲಯದಲ್ಲಿ ಪೋಷ್ಟ್ ಡೊಕ್ಟೊರಲ್ ಸಂಶೋಧನಾ ವಿದ್ಯಾರ್ಥಿಯಾಗಿರುವ ಪ್ರೊ. ಅರುಣ ಜೋಳದ ಕೂಡ್ಲಿಗಿಯವರು ಅಂಗನವಾಡಿ ಕೇಂದ್ರದ ಮಗುವೇ ಆಗಿದ್ದರು, ಸ್ವತಃ ಅಂಗನವಾಡಿ ಕಾರ್ಯಕರ್ತೆಯ ಮಗ ಕೂಡ. ಇಡೀ ದೇಶದ ಯುವ ನಾಯಕನಾಗಿ ಗಮನ ಸೆಳೆದ ಕನ್ನಯ್ಯ ಕುಮಾರ್ ಕೂಡಾ ಅಂಗನವಾಡಿ ಕೇಂದ್ರದಲ್ಲಿ ಬೆಳೆದವರು ಮತ್ತು ಓರ್ವ ಸಹಾಯಕಿಯ ಮಗುವೇ ಆಗಿದ್ದಾರೆ. ಹೀಗೆ ಈ ದೇಶದಲ್ಲಿ ಸೈನಿಕರಾಗಿ, ಶಿಕ್ಷಕರಾಗಿ, ಕಾರ್ಮಿಕರಾಗಿ, ರೈತರಾಗಿ, ಸಾಫ್ಟ್ ವೇರ್ ಇಂಜಿನೀಯರ್‌ಗಳಾಗಿ, ಸರ್ಕಾರಿ ನೌಕರರಾಗಿ, ಸಮಾಜದ ಸತ್ಪ್ರಜೆಗಳಾಗಿ ಬಾಳುತ್ತಿರುವ ಅನೇಕರು ಅಂಗನವಾಡಿಗಳ ಕೊಡುಗೆ. ಎಲ್ಲಕ್ಕಿಂತ ಮುಖ್ಯವಾಗಿ ಮಾನವ ಸಂಪನ್ಮೂಲಗಳ ಬೆಳವಣಿಗೆಗೆ ಆಧಾರವಾಗಿರುವ ಅಂಗನವಾಡಿ ಕೇಂದ್ರಗಳು ಒಂದು ಸಾಂಪ್ರದಾಯಿಕ ಸಮಾಜವನ್ನು ನಾಗರಿಕ ಸಮಾಜವನ್ನಾಗಿ ಬದಲಾಯಿಸುವುದರಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ.

1952ರಲ್ಲಿ ಬಂದಂತಹ ಯೋಜನಾ ಆಯೋಗದ ಸಲಹೆಯಂತೆ ಮತ್ತು ಆ ಕಾಲದ ಅನೇಕ ರಾಜನೀಜ್ಞರು ಹಾಗೂ ಶಿಕ್ಷಣ ತಜ್ಞರ ಸಲಹೆಯಂತೆ ಕೆಲವು ಯೋಜನೆಗಳು ಬಂದುವು. ಅಷ್ಟರಲ್ಲಾಗಲೇ 1946 ರಲ್ಲಿ ವಿಶ್ವಸಂಸ್ಥೆಯ ಮಕ್ಕಳ ನಿಧಿ (ಯುನಿಸೆಫ್) ಸ್ಥಾಪನೆಯಾಗಿತ್ತು. 1949 ರಿಂದಲೇ ಭಾರತದಲ್ಲಿ ಅದು ಸೇವೆ ಸಲ್ಲಿಸುತ್ತಿತ್ತು. ಅಂತಾರಾಷ್ಟ್ರೀಯವಾಗಿ ಬಡತನ ಮತ್ತು ಹಸಿವು ಹಾಗೂ ಮಕ್ಕಳ ಮತ್ತು ತಾಯಂದಿರ ಸಮಸ್ಯೆಗಳು ಹಾಗೂ ಹಕ್ಕುಗಳ ಕುರಿತು ಚರ್ಚಿಸಿದ ವಿಶ್ವಸಂಸ್ಥೆಯು ಯೂನಿಸೆಫ್‌ನ್ನು ತನ್ನ ಶಾಶ್ವತ ಅಂಗಸಂಸ್ಥೆಯನ್ನಾಗಿಸಿತು. ಇದರ ಸಹಾಯದೊಂದಿಗೆ 1975ರಲ್ಲಿ ಸಮಗ್ರ ಶಿಶು ಅಭಿವೃದ್ದಿ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆ ಬರುವ ಮುಂಚೆ ಉದಾಹರಣೆಗೆ – ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ 1954ರಲ್ಲಿ ಪ್ರಾರಂಭವಾದ ಕಾರ್ಯಕ್ರಮಗಳು, 1957ರಲ್ಲಿ ಸಂಯೋಜಿತ ಕಲ್ಯಾಣ ವಿಸ್ತರಣಾ ಯೋಜನೆಗಳಾಗಿ ಪರಿವರ್ತನೆಗೊಂಡವು. ಯೋಜನೆಯ ಕಾರ್ಯಾಚರಣೆಯನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಿ ಕೊಡಲಾಗಿತ್ತು. ಈ ರೀತಿಯ ಪ್ರಯೋಗಗಳು ಯಶಸ್ವಿಯಾಗದೇ, 1967ರಲ್ಲಿ ಕುಟುಂಬ ಮತ್ತು ಮಕ್ಕಳ ಯೋಜನೆಗಳಾಗಿ ಬದಲಾಯಿಸಲ್ಪಟ್ಟಿತು. 1963ರಲ್ಲಿ ಒಂದು ಅನ್ವಯಿತ ಪೌಷ್ಟಿಕ ಕಾರ್ಯಕ್ರಮ ಬಂದಿತು. 1970ರಲ್ಲಿ ವಿಶೇಷ ಪೌಷ್ಠಿಕ ಕಾರ್ಯಕ್ರಮ ಮತ್ತು ಬಾಲವಾಡಿ ಪೌಷ್ಠಿಕ ಕಾರ್ಯಕ್ರಮ 1970ರಲ್ಲಿ ಪ್ರಾರಂಭಿಸಲ್ಪಟ್ಟಿತು.

ಇಂತಹ ಅನೇಕ ಪ್ರಯೋಗಗಳು ಮತ್ತು ಅನುಭವಗಳ ನಂತರ "ಇಂತಹ ಅಪ್ರಾಪ್ತ ವ್ಯಾಪ್ತಿ ಮತ್ತು ಅತೃಪ್ತಿಕರ ಧನ ವಿನಿಯೋಗದಿಂದ ಪ್ರಾರಂಭಿಸಿದ ಕಾರ್ಯಕ್ರಮಗಳು ದೇಶದಲ್ಲಿ ಹರಡುತ್ತಿರುವ ಶಿಶು ಮರಣ, ಶಿಶುಗಳಲ್ಲಿ ಅಪೌಷ್ಠಿಕತೆ ಮುಂತಾದ ಸಮಸ್ಯೆಗಳಿಗೆ ತೃಪ್ತಿಕರ ಪರಿಹಾರ ನೀಡಲಾರದು. ಮತ್ತು ಅವುಗಳನ್ನು ಪರಿಹರಿಸಲು ಸಮಗ್ರ ಮುನ್ನೋಟದ ಅಗತ್ಯವಿದೆಯೆಂದೂ" ಸ್ಪಷ್ಟವಾಯಿತು. ಈ ಹಿನ್ನಲೆಯಲ್ಲಿ ರಾಷ್ಟ್ರೀಯ ಶಿಶು ಪಾಲನಾ ನೀತಿಯು 1974ರಲ್ಲಿ ಜಾರಿಗೊಳಿಸಲ್ಪಟ್ಟಿತು.

ಈ ನೀತಿಯು ಮಕ್ಕಳನ್ನು ದೇಶದ ಪರಮೋಚ್ಚ ಮತ್ತು ಅತಿ ಮುಖ್ಯ ಸಂಪತ್ತು ಎಂದು ಪರಿಗಣಿಸಿತು. ಈ ಮಕ್ಕಳಿಗೆ ಜನನಕ್ಕೆ ಮುಂಚೆ ಮತ್ತು ಜನನದ ನಂತರ, ಬೆಳವಣಿಗೆಯುದ್ದಕ್ಕೂ ಸಾಕಷ್ಟು ಸೇವೆಗಳನ್ನು ಒದಗಿಸಿ ಅವರ ತೃಪ್ತಿಕರ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆಗಳನ್ನು ಸಾಧಿಸುವಂತೆ ಮತ್ತು ಸಮಂಜಸ ಕಾಲಾವಧಿಯಲ್ಲಿ ದೇಶದ ಎಲ್ಲಾ ಮಕ್ಕಳನ್ನು ಈ ಯೋಜನೆಯಡಿಯಲ್ಲಿ ಸೇರಿಸುವಂತೆ ಸರ್ಕಾರಕ್ಕೆ ಕರೆ ನೀಡಿತು. ಮಾತ್ರವಲ್ಲ ದೇಶದಲ್ಲಿ ದುಡಿಯುವ ಜನತೆಯ ಚಳುವಳಿಯು ಈ ಮಕ್ಕಳ ಮತ್ತು ತಾಯಂದಿರ ಹಕ್ಕುಗಳ ಬಗ್ಗೆ ಧ್ವನಿ ಎತ್ತಿ ಸರ್ಕಾರಗಳ ಗಮನವನ್ನು ಸೆಳೆದಿತ್ತು.

ಈ ಅವಶ್ಯಕತೆಗಳು, ಭವಿಷ್ಯದ ಮಾನವ ಜನಾಂಗದ ಅಭಿವೃದ್ದಿಗೆ ಅಗತ್ಯವಾದ್ದರಿಂದ ಅವುಗಳಿಗೆ ತುರ್ತು ಗಮನ ನೀಡುವುದು ಅವಶ್ಯವೆಂದೂ ಅಂದಿನ ಸರ್ಕಾರ ಒಪ್ಪಿಕೊಳ್ಳಬೇಕಾಯಿತು. ಇದೆಲ್ಲದರ ಭಾಗವಾಗಿ ಅಕ್ಟೋಬರ್ 2, 1975 ಐಸಿಡಿಎಸ್ ಪ್ರಾರಂಭವಾಯಿತು. ಈ ಯೋಜನೆ ಜಾರಿಗೆ ಬಂದ 30 ವರ್ಷಗಳ ನಂತರ 2005–06ರಲ್ಲಿ ಮೌಲ್ಯಮಾಪನ ನಡೆಸಿತು. ಕಡಿಮೆ ತೂಕದ ಮಕ್ಕಳ ಜನನ ಸಂಖ್ಯೆಯು 1992 ರಲ್ಲಿ 42 ಇದ್ದುದು 2006ರಲ್ಲಿ 29 ಕ್ಕೆ, 0 ಯಿಂದ 3ವರ್ಷ ದೊಳಗಿನ ಮಕ್ಕಳಲ್ಲಿ ತೀವ್ರ ಅಪೌಷ್ಠಿಕತೆಯ ಪ್ರಮಾಣ 7% ರಿಂದ 2006ಕ್ಕೆ 1%, 3 ರಿಂದ 5 ವರ್ಷದೊಳಗಿನ ಮಕ್ಕಳ ಅಪೌಷ್ಠಿಕತೆ 1992 ರಲ್ಲಿ 4% ರಿಂದ 0.8% ಕ್ಕೆ ಇಳಿದಿದೆ. ಇದೇ ಸಮಯದಲ್ಲಿ ಶಿಶು ಮರಣ ಮತ್ತು ಕಡಿಮೆ ತೂಕದ ಶಿಶುಗಳ ಪ್ರಮಾಣ ನಮ್ಮಲ್ಲಿ ಹೆಚ್ಚಾಗಿ ಮುಂದುವರಿದಿದೆ. (ಮೂರನೇ ಒಂದರಷ್ಟು ಅಪೌಷ್ಠಿಕ ಮಕ್ಕಳು ಭಾರತದಲ್ಲಿದ್ದಾರೆ. ಇಂದಿಗೂ ರಾಜ್ಯದಲ್ಲಿ ಶಿಶು ಮರಣ ಪ್ರಮಾಣ 1000ಕ್ಕೆ 28 ಇದೆ, ಹೆರಿಗೆ ಸಮಯದಲ್ಲಿ ತಾಯಂದಿರ ಮರಣ ಪ್ರಮಾಣ 133 ಇದೆ. ಲಿಂಗಾನುಪಾತವ ವಿಚಾರದಲ್ಲಿ, 6 ವರ್ಷದ ಮಕ್ಕಳ ಲಿಂಗಾನುಪಾತ 948 ಇದೆ)



ಮಾನವ ಅಭಿವೃದ್ದಿಯಲ್ಲಿ 188 ರಾಷ್ಟ್ರಗಳಲ್ಲಿ ಭಾರತ 131 ನೇ ಸ್ಥಾನದಲ್ಲಿದೆ. ಇಂದಿಗೂ 79% ಮಕ್ಕಳು, ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. 50% ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆ. ಒಂದು ವರ್ಷಕ್ಕೆ ಹುಟ್ಟುವ 2 1/2 ಕೋಟಿ (ಎರಡೂವರೆ ಕೋಟಿ) ಮಕ್ಕಳಲ್ಲಿ 75 ಲಕ್ಷ ಮಕ್ಕಳು ಪ್ರತಿ ವರ್ಷ ಸಾವಿಗೀಡಾಗುತ್ತಿದ್ದಾರೆ.

ಇಂತಹ ಪರಿಸ್ಥಿತಿಗೆ ಮುಖ್ಯ ಕಾರಣ ನಮ್ಮ ದೇಶದ ಬಡತನ, ನಿರುದ್ಯೋಗ, ಅರೆ ಉದ್ಯೋಗ, ಕೃಷಿ ಬಿಕ್ಕಟ್ಟು, ಬೆಲೆಯೇರಿಕೆ, ಖಾಯಂ ಆದಾಯಕ್ಕೆ ರಕ್ಷಣೆಯಿಲ್ಲದಿರುವುದು. ಇಂತಹ ಪರಿಸ್ಥಿತಿಗಳ ಬದಲಾವಣೆ ಮಾಡುವ ಬದಲು ಮತ್ತಷ್ಟು ಕಾರ್ಪೋರೇಟ್ ಕಂಪನಿಗಳ ಪರವಾಗಿಯೇ ನಮ್ಮ ಪ್ರಭುತ್ವಗಳು ಕಾಳಜಿ ಪ್ರದರ್ಶಿಸುತ್ತಿವೆ. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಗಳಲ್ಲಿಯೂ ಕೂಡಾ ಇಂತಹ ಮೂಲಭೂತ ಸಮಸ್ಯೆಗಳ ಬಗ್ಗೆ ಚರ್ಚೆಗಳನ್ನು ಮಾಡದೇ, ನೈಜತೆಯನ್ನು ಮರೆಮಾಚಿ, ಹುಸಿ ದೇಶ ಭಕ್ತಿಯ ಕುರಿತು ಜನರ ಭಾವನೆಗಳನ್ನು ಕೆರಳಿಸಿ ರಾಜಕೀಯ ಲಾಭ ಪಡೆದದ್ದು, ಅನೈತಿಕ ಮಾರ್ಗಗಳ ಮುಖಾಂತರ ಜನಾಭಿಪ್ರಾಯ ಮೂಡಿಸಿ ಅಧಿಕಾರ ಹಿಡಿದಿರುವುದು ಮತ್ರವಲ್ಲ ಇಂತಹ ಶಕ್ತಿಗಳಿಗೆ ಮಾಧ್ಯಮಗಳು ಪರಿಣಾಮಕಾರಿಯಾಗಿ ಪ್ರಚಾರ ಕೊಟ್ಟು ಅದೇ ನಿಜವಾದ ಪರ್ಯಾಯವೆಲ್ಲೆಂದು ಬಿಂಬಿಸಿರುವುದನ್ನೂ ನೋಡುತ್ತಿದ್ದೇವೆ. ಇಂಥಹ ಸಂದರ್ಭದಲ್ಲಿ ರಾಜಕಾರಣವೇ ಪ್ರಭುತ್ವ ಆಗಿರುವುದರಿಂದ ಜನತೆಗೆ ಆರೋಗ್ಯ, ಶಿಕ್ಷಣ, ಆಹಾರ ಮತ್ತು ಗ್ರಾಮೀಣಾಭಿವೃದ್ದಿಯ ಮುಖಾಂತರ ಜನರ ಹಿತವನ್ನು ಕಾಪಾಡುವುದು ಅವರ ಉದ್ದೇಶವಲ್ಲ. ಬದಲಿಗೆ ಆ ಕಾರ್ಪೋರೇಟ್ ಕಂಪನಿಗಳಿಗೆ ಈ ಮೂಲಭೂತ ಕಾರ್ಯಕ್ರಮಗಳನ್ನು ವಹಿಸಿಕೊಡುವುದೇ ಅವರ ಆದ್ಯತೆಯಾಗಿರುವುದು ಖೇದಕರ. ಇದರ ಭಾಗವಾಗಿಯೇ ಐಸಿಡಿಎಸ್ ಮತ್ತು ಶಿಕ್ಷಣದ ಮೇಲೆ ನಿರಂತರ ಪ್ರಹಾರಗಳು ನಡೆಯುತ್ತಿವೆ ಎಂಬುದನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕಿದೆ.

ಐಸಿಡಿಎಸ್ ನ್ನು ದುರ್ಬಲಗೊಳಿಸಲು ಪ್ರಯತ್ನಗಳು ನಡೆಯುತ್ತಲೇ ಇವೆ. ವಿಶ್ವಬ್ಯಾಂಕಿನ ಅಪಾಯಕಾರಿ ಶಿಫಾರಸ್ಸುಗಳ ಜಾರಿಯಭಾಗವಾಗಿ ಮತ್ತು ದೇಶದ ಸರ್ಕಾರಗಳ ಖಾಸಗಿಕರಣ ನೀತಿಗಳ ಫಲವಾಗಿ, ಐಸಿಡಿಎಸ್‌ಅನ್ನು ಮಿಷನ್ ಮೋಡ್ ಮಾಡಿ ಎನ್‌ಜಿಓಗಳಿಗೆ ಮೇಲ್ವಿಚಾರಣೆಗೆ ಕೊಡುವುದು, ಪೌಷ್ಠಿಕ ಆಹಾರವನ್ನು ವೇದಾಂತ, ಇಸ್ಕಾನ್ ಮುಂತಾದ ಕಾರ್ಪೋರೇಟ್ ಧಾರ್ಮಿಕ ಸಂಸ್ಥೆಗಳಿಗೆ ನೀಡುವುದು, ಸಿದ್ಧ ಪಡಿಸಿದ ಆಹಾರವನ್ನು ಸರಬರಾಜು ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಮಾತ್ರವಲ್ಲದೆ 1952 ರಲ್ಲಿ ಸ್ಥಾಪನೆಯಾದ ಯೋಜನಾ ಆಯೋಗವನ್ನು ಮೋದಿ ಸರ್ಕಾರ ರದ್ದುಪಡಿಸಿ 'ನೀತಿ ಆಯೋಗ'ವನ್ನು ರಚಿಸಿದೆ. ಈ ನೀತಿ ಆಯೋಗ ಅಂಗನವಾಡಿ ಕೇಂದ್ರಗಳಿಗೆ ಕೊಡುವ ಅನುದಾನದಲ್ಲಿ ಈಗಾಗಲೇ 75% ನ್ನು ಕಡಿತ ಮಾಡಿದೆ. ಹಂತ ಹಂತವಾಗಿ ತನ್ನ ಹಣಕಾಸಿನ ಜವಾಬ್ದಾರಿಯಿಂದ ಮುಕ್ತಗೊಳ್ಳಲು ಬಯಸುತ್ತದೆ. ಮಾತ್ರವಲ್ಲದೆ ಅಂಗನವಾಡಿ ಮಕ್ಕಳಿಗೆ ಒಂದು ದಿನಕ್ಕೆ ಸಾಮಾನ್ಯ ಮಕ್ಕಳಿಗೆ 8 ರೂ. ಗರ್ಭಿಣಿ–ಬಾಣಂತಿಯರಿಗೆ 9.50 ರೂ., ತೀವ್ರ ಅಪೌಷ್ಠಿಕತೆಯಿರುವ ಮಕ್ಕಳಿಗೆ 12 ರೂ. ಪೌಷ್ಠಿಕ ವೆಚ್ಚ ನೀಡಲಾಗುತ್ತದೆ. ಇನ್ನು ಈ ಹಣವನ್ನು ನಗದು ರೂಪದಲ್ಲಿ ಕೊಡಬೇಕೆಂದ 'ನೀತಿ ಆಯೋಗ' ಶಿಫಾರಸ್ಸು ಮಾಡಿದೆ.

ಐಸಿಡಿಎಸ್ ನ ಪ್ರಮುಖ ಸೇವೆಗಳನ್ನು ಸಬಲೀಕರಣ ಮಾಡುವ ಬದಲಿಗೆ ಐಸಿಡಿಎಸ್ ಫಲಾನುಭವಿಗಳಿಗೆ NRHM (National Rural Health Mission (NRHM) ಯೋಜನೆಯ ಆಶಾಗಳ ಸೇವೆ, ಸರ್ವ ಶಿಕ್ಷಣ ಅಭಿಯಾನ (SSA) ಮುಂತಾದವನ್ನು ಪ್ರಾರಂಭಿಸಲಾಗುತ್ತಿದೆ. ಈ ರೀತಿಯ ಕಾರ್ಯಕ್ರಮಗಳಲ್ಲಿ ಪುನರಾವರ್ತನೆ ಇದೆ ಮತ್ತು ಪರಸ್ಪರ ಸ್ಪರ್ಧೆಯೂ ಇದೆ. ಆದರೆ ಈ ಯೋಜನೆಗಳಿಗೆ ನೀಡುವ ಹಣ ಮಾತ್ರ ತೀರಾ ಅಲ್ಪ ಪ್ರಮಾಣದ್ದಾಗಿರುತ್ತದೆ.

9ನೇ ಪಂಚವಾರ್ಷಿಕ ಯೋಜನೆ "ಮಕ್ಕಳ ಅಭಿವೃದ್ದಿಗೆ ಹಣ ಹೂಡಿಕೆಯನ್ನು ದೇಶದ ಭವಿಷ್ಯಕ್ಕೆ ಬಂದು ಅಪೇಕ್ಷಣೀಯ ಸಾಮಾಜಿಕ ಹೂಡಿಕೆ" ಎಂದು ಕಾಣುವುದಷ್ಟೇ ಅಲ್ಲ. ಪ್ರತಿಯೊಂದು ಮಗುವು ತನ್ನ ಪೂರ್ಣ ಸಾಮರ್ಥ್ಯವನ್ನು ಸಾಧಿಸುವಂತೆ "ಬದುಕುಳಿಯುವ, ರಕ್ಷಣೆಯ ಮತ್ತು ಅಭಿವೃದ್ದಿಯ" ಹಕ್ಕುಗಳ ಈಡೇರಿಕೆ ಎಂದೂ ಕಾಣಬೇಕು. ಈ ಸಂದರ್ಭದಲ್ಲಿ ಇರುವ ಸವಾಲುಗಳೆಂದರೆ 'ಲಿಂಗಾನುಪಾತ ಪ್ರತಿಕೂಲ ವಾಗಿರುವುದನ್ನು ಸರಿಪಡಿವುದು ಹಾಗೂ ಯಾವುದೇ ಲಿಂಗ ಭೇದ–ಭಾವವಿಲ್ಲದೆ ಅಥವಾ ಬೇರೆ ಸಾಮಾಜಿಕ ಪಕ್ಷಪಾತವಿಲ್ಲದೆ ಪ್ರತಿಯೊಂದು ಮಗುವನ್ನು ತರುವುದು' ಎಂದಿದೆ.

10ನೇ ಯೋಜನಾ ಆಯೋಗ ಅಂಗನವಾಡಿ ಕೇಂದ್ರಗಳನ್ನು ಶಿಶುಪಾಲನಾ ಕೇಂದ್ರಗಳನ್ನಾಗಿ ಪರಿವರ್ತಿಸಬೇಕೆಂಬ ಶಿಫಾರಸ್ಸು ಮಾಡಿದೆ.

2001 ನವೆಂಬರ್ 28 ರಂದು ಮಾನ್ಯ ಕೋರ್ಟು ತನ್ನ ಆದೇಶದಲ್ಲಿ, ಪ್ರತಿಯೊಂದು ಜನ ವಸತಿ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕೆಂದೂ ಹೇಳಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಯಾವ ಶಿಫಾರಸ್ಸು

ಪುಟ 10 ಕ್ಕೆ





ನಾಗನಟಗಿಯಲ್ಲಿ ಮಹಿಳಾ ಕೂಲಿಕಾರರ ಸಮಾವೇಶ

ತೀವ್ರ ಬರಗಾಲ, ಸುಡುತ್ತಿರುವ ಬಿಸಿಲು, ಕುಡಿಯುವ ನೀರಿನ ಅಭಾವ ಎದುರಿಸಿಕೊಂಡು ಮಹಿಳೆಯರು ಪ್ರತಿಯೊಂದು ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಅವರ ಶ್ರಮವನ್ನು, ಸೇವೆಯನ್ನು ಗುರುತಿಸಿ ಗೌರವಿಸುವವರಿಲ್ಲ. ಯಾವುದೇ ಪುರಸ್ಕಾರವಿಲ್ಲದೆ ದುಡಿಯುತ್ತಿರುವ ಈ ಮಹಿಳೆಯರ ಮೇಲೆ ದೌರ್ಜನ್ಯಗಳು ನಡೆಯುತ್ತವೆ. ಆಳುವ ಸರ್ಕಾರಗಳು ನಿರ್ಲಕ್ಷ್ಯ ಧೋರಣೆ ತಾಳುತ್ತಿವೆ ಎಂದು ಸಾಮಾಜಿಕ ಚಿಂತಕಿ, ಹೋರಾಟಗಾರ್ತಿ ಕೆ. ನೀಲಾ ಕಳವಳ ವ್ಯಕ್ತಪಡಿಸಿದರು. ಯಾದಗಿರಿ ಜಿಲ್ಲೆ, ಶಹಾಪುರ ತಾಲೂಕಿನ ನಾಗನಟಗಿ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮಟ್ಟದ ಮಹಿಳಾ ಉಪಸಮಿತಿಯು ಏರ್ಪಡಿಸಿದ್ದ ಮಹಿಳಾ ಕೂಲಿಕಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಆರಂಭದಲ್ಲಿ, ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ 500 ಕ್ಕೂ ಹೆಚ್ಚು ಕೂಲಿಕಾರರು ಕೆಂಪು ಬಾವುಟಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ ಗ್ರಾಮದ ಓಣಿಗಳಲ್ಲಿ ನಡೆಸಿದ ಮೆರವಣಿಗೆ ಗ್ರಾಮಸ್ಥರ ಗಮನ ಸೆಳೆಯಿತು. ಗ್ರಾಮ ಪಂಚಾಯತ್ ಕಾರ್ಯಾಲಯದ ಎದುರಿನ ಬಯಲಿನಲ್ಲಿ ಏರ್ಪಡಿಸಲಾದ ಬಹಿರಂಗ ಸಭೆಯ ಅಧ್ಯಕತೆಯನ್ನು ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ದಾವಲ್‌ಸಾಬ್ ನದಾಫ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೂಲಿಕಾರರ ಸಂಗದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಮಾತನಾಡುತ್ತಾ ಮಹಿಳೆಯರಿಗೆ ಸಮಾಜದಲ್ಲಿ ಶತಶತಮಾನಗಳಿಂದ ಅನ್ಯಾಯವಾಗುತ್ತಾ ಬಂದಿದೆ. ಇದನ್ನು ಪುರುಷರು ಒಪ್ಪಿಕೊಂಡು ಮಹಿಳೆಯರಿಗೆ ಕುಟುಂಬದಲ್ಲಿ, ಸಮಾಜದಲ್ಲಿ, ಕೆಲಸ ಮಾಡುವ ಸ್ಥಳದಲ್ಲಿ ಸಮಾನತೆ, ಸಂರಕ್ಷಣೆ ದೊರೆಯುವಂತೆ ನೋಡಿಕೊಳ್ಳಬೇಕು. ಕೂಲಿಕಾರರ ಮಹಿಳೆಯರು ಎದುರಿಸುತ್ತಿರುವ ಪ್ರತ್ಯೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕೂಲಿಕಾರರ ಸಂಘದಲ್ಲಿ ಮಹಿಳೆಯರ ಪ್ರತ್ಯೇಕ ಉಪಸಮಿತಿ ರಚಿಸಿಕೊಂಡು ಕಾರ್ಯನಿರ್ವಹಿಸಲು ಅವಕಾಶವಿದೆ ಎಂದು ಹೇಳಿದರು.

ಸಾಧಕೀಯರಿಗೆ ಸನ್ಮಾನ :

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕೀಯರಿಗೆ ಸನ್ಮಾನಿಸಲಾಯಿತು. 1000 ಕ್ಕೂ ಹೆಚ್ಚು ಹೆರಿಗೆಗಳನ್ನು ಮಾಡಿದ ನಿಂಗಮ್ಮ ಸೈದಾಪೂರ, ಉದ್ಯೋಗ ಖಾತ್ರಿ ಅಡಿಯಲ್ಲಿ 100 ದಿನಗಳ ಕೆಲಸವನ್ನು ಪೂರ್ಣಗೊಳಿಸಿದ ಸಿದ್ಧಮ್ಮ ಹಳ್ಳಿ, ಸಜ್ಜೆ ತೆನೆ ಕೊಯ್ದು ರಾಶಿ ಮಾಡಿದ ಭೀಮವ್ವ ನಾಯ್ಕೋಡಿ, 200 ಕೆ.ಜಿ. ಹತ್ತಿ ಬಿಡಿಸಿ ಸಾಧನೆಗೈದ ಅಲ್ಲಮ್ಮ ರಾಜಾಪೂರ ಮತ್ತು ಗೋಗಿ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿದ್ದು ನೊಂದ ಮಹಿಳೆಯರ ಹಿತಚಿಂತಕಿ ಎಂದು ಹೆಸರು ಪಡೆದಿರುವ ಹೇಮಾಮತಿ ದೇವರಗೋನಾಲ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ಶಾಲಾ ಮಕ್ಕಳು, ಕಿತ್ತೂರು ರಾಣಿಚನ್ನಮ್ಮ, ಒನಕೆ ಓಬ್ಬವ್ವ, ಮದರ್ ತೆರೇಸಾ, ಅಕ್ಕಮಾದೇವಿ, ಸಾಲು ಮರದ ತಿಮ್ಮಕ್ಕ ಮೊದಲಾದ ಪ್ರಸಿದ್ಧ ಭಾರತೀಯ ಮಹಿಳೆಯರ ವೇಷತೊಟ್ಟು ನೃತ್ಯಗಳನ್ನು ಪ್ರದರ್ಶಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಉಪಾಧ್ಯಕ್ಷರಾಧ ಕರೆಪ್ಪ ಅಚ್ಚೊಳ್ಳಿ, ರಾಜ್ಯ ಮಹಿಳಾ ಕೂಲಿಕಾರರ ಉಪಸಮಿತಿ ಸಂಚಾಲಕಿ ಮಲ್ಲಮ್ಮ ಕೋಡ್ಲಿ, ರಾಣಿ ಚೆನ್ನಮ್ಮ ವಿದ್ಯಾಲಯದ ಪ್ರಾಚಾರ್ಯ ಸುರಯ್ಯ ಬೇಗಂ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಶ್ರೀಮಂತ ಬಿರಾದಾರ್, ಕಮಲಮ್ಮ, ಮಲ್ಲಮ್ಮ, ಮಲ್ಲಯ್ಯ ಪೋಲಂಪಲ್ಲಿ, ಗುಲಾಮ ಸಾಬ್ ನಾಗನಟಗಿ, ಚಂದ್ರು ಕಾಡಂಗೇರಾ, ನಿಂಗಣ್ಣ ತಿಪ್ಪನಳ್ಳಿ ಮೊದಲಾದವರು ಉಪಸ್ಥಿತಿದ್ದರು. ಮಧ್ಯಾಹ್ನದ ಕಲಾಪದಲ್ಲಿ ಕರಡು ವರದಿಯನ್ನು ಮಂಡಿಸಿ ಚರ್ಚಿಸಲಾಯಿತು. ಕೊನೆಯಲ್ಲಿ ಮಹಿಳಾ ಕೂಲಿಕಾರರ ಜಿಲ್ಲಾ ಉಪಸಮಿತಿಯನ್ನು ಆಯ್ಕೆ ಮಾಡಲಾಯಿತು. ಸವಿತಾ ಪೂಜಾರಿ ಅವರು ಸಮಿತಿಯ ಸಂಚಾಲಕರಾಗಿ ಆಯ್ಕೆಯಾದರು. ಕು. ಶಬನಾ ನದಾಫ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ವರದಿ: ಶಬನಾ ನದಾಫ್

ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ. ಮತ್ತು ಯು.ಕೆ.ಜಿ. ಪ್ರಾರಂಭಿಸಿ........ ಪುಟ 9 ರಿಂದ

ಗಳನ್ನು ಪರಿಶೀಲಿಸದೆ ತನ್ನದೇ ಧೋರಣೆಯನ್ನು ಮುಂದುವರೆಸಿವೆ.

ಈಗ ಕರ್ನಾಟಕದಲ್ಲಿ 2019 ಮೆ 17 ರಂದು ಶಿಕ್ಷಣ ಇಲಾಖೆಯಿಂದ ಒಂದು ಸುತ್ತೋಲೆ ಬಂದಿದೆ. ಅದರ ಪ್ರಕಾರ 'ಕರ್ನಾಟಕ ಪಬ್ಲಿಕ್ ಶಾಲೆ'ಗಳನ್ನು ತೆರೆದು, ಪ್ರೀನರ್ಸರಿಗೆ 2 ವರ್ಷ 10 ತಿಂಗಳು, ಎಲ್‌ಕೆಜಿ–ಯುಕೆಜಿ ಗಳನ್ನು ಪ್ರಾರಂಭ ಮಾಡಲಾಗುತ್ತಿದೆ' ಎಂದು ಆದೇಶ ತಡವಾಗಿ ಬಂದಿದ್ದರೂ ಕೂಡಾ ಈ ಹಿಂದಿನಿಂದಲೇ ಇರುವ ಎಸ್.ಡಿ.ಎಮ್.ಸಿ ಸಮಿತಿಗಳ ಮುಖಾಂತರ 'ಮಕ್ಕಳ ಮನೆ' ಪ್ರಾರಂಭಿಸಲಾಗಿತ್ತು. ಈಗ ಜೂನ್ 1 ರಿಂದಲೇ ಎಲ್‌ಕೆಜಿ–ಯುಕೆಜಿ ಪ್ರಾರಂಭಿಸಲು ಸಕಲ ಸಿದ್ದತೆಗಳನ್ನು ನಡೆಸಲಾಗಿದೆ. ಇದಕ್ಕಾಗಿ ಪ್ರತ್ಯೇಕ ಶಿಕ್ಷಕರು, ಆಯಾಗಳು, ಅಹಾರ ಎಲ್ಲವನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

ಈ ಸುತ್ತೋಲೆ ತಂದ ಉದ್ದೇಶವನ್ನು ಪ್ರಶ್ನಿಸಿದಾಗ ಬಂದ ಉತ್ತರ "ಪೋಷಕರ ಒತ್ತಡ" ಎಂಬ ಮೇರೆಗೆ ಮಕ್ಕಳಿಗೆ ಕಲಿಕೆ ಮುಖ್ಯ ಎಂಬ ಅಭಿಪ್ರಾಯಗಳು ಬರುತ್ತದೆ. ಮಾತ್ರವಲ್ಲದೆ ಪ್ರಾಥಮಿಕ ಶಾಲೆಗಳಲ್ಲಿ ಡ್ರಾಪ್ ಔಟ್ ಗಳನ್ನು ತಡೆಗಟ್ಟಲು, ಖಾಸಗಿ ಕಾನ್ವೆಂಟ್‌ಗಳಿಗೆ ಹೋಗುವ ಮಕ್ಕಳನ್ನು ಆಕರ್ಷಿಸಲು ಈ ಪ್ರಯತ್ನ ಎಂಬುದಾಗಿ ವಿವರಿಸುತ್ತಿದ್ದಾರೆ.

ಖಾಸಗೀ ಶಾಲೆಗಳಿಗೆ ಹೋಗುವ ಮಕ್ಕಳನ್ನು ತಡೆಯ ಬೇಕಾದರೆ ಖಾಸಗೀ ಕಾನ್ವೆಂಟ್‌ಗಳಿಗೆ ಅಥವಾ ಶಿಕ್ಷಣದ ಖಾಸಗೀಕರಣಕ್ಕೆ ಉತ್ತೇಜನ ಕೊಡುತ್ತಿರುವುದು ಯಾರು? ಮೂಲದಲ್ಲಿ ಇದನ್ನು ನಿಯಂತ್ರಿಸಬೇಕಲ್ಲವೇ?

ಸರ್ಕಾರಿ ಶಾಲೆಗಳಿಗೆ ದಾಖಲಾತಿ ಹೆಚ್ಚಾಗ ಬೇಕಾದರೆ ಸರ್ಕಾರಿ ಶಾಲೆಗಳು ಸಬಲೀಕರಣ ಆಗಬೇಕು. ಇಂದಿಗೂ ಹಲವಾರು ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲ. ಮಾತ್ರವಲ್ಲದೆ ಎಲ್ಲಾ ವಿಷಯಗಳಿಗೂ ಪಾಠಗಳ ಬೋಧನೆಗೂ ಒಬ್ಬರೇ ಶಿಕ್ಷಕರು. ಈಗಾಗಲೇ ಗುತ್ತಿಗೆ ಪದ್ಧತಿಯಲ್ಲಿ 36 ಸಾವಿರ ಶಿಕ್ಷಕರು 4–5 ತಿಂಗಳಿಂದ ವೇತನವಿಲ್ಲದೆ ದುಡಿಯುತ್ತಿದ್ದಾರೆ. ಅರವತ್ತರ ದಶಕದಲ್ಲೇ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಕೊಠಾರಿ ಆಯೋಗ ತನ್ನ ಶಿಫಾರಸ್ಸುಗಳನ್ನು ನೀಡಿತ್ತು. ದೇಶದ ಒಟ್ಟು ಆದಾಯದಲ್ಲಿ (ಜಿಡಿಪಿ) 6% ಅನುದಾನ ಶಿಕ್ಷಣಕ್ಕೆ ನೀಡಬೇಕು. ಕೇಂದ್ರ ಬಜೆಟ್ಟಿನಲ್ಲಿ 10% ನೀಡಬೇಕೆಂದು ರಾಜ್ಯದ ಪ್ರತಿವರ್ಷದ ಬಜೆಟ್ ನಲ್ಲಿ 30% ಅನುದಾನ ನೀಡಬೇಕೆಂದೂ ಶಿಫಾರಸ್ಸು ಮಾಡಿದ್ದರು. ಸರ್ಕಾರಗಳು ಆ ಶಿಫಾರಸ್ಸನ್ನು ಜಾರಿ ಮಾಡದೆ ಇಂದಿಗೂ 3% ಮಾತ್ರ ಕೇಂದ್ರದಲ್ಲಿ ಅನುದಾನ, ರಾಜ್ಯದಲ್ಲಿ 12% ಅನುದಾನ ಮಾತ್ರವಿದೆ. ಮೂಲಭೂತವಾಗಿ ಶಿಕ್ಷಣದ ಅನುದಾನಗಳನ್ನು ಕಡಿಮೆ ಮಾಡುವುದಷ್ಟೇ ಅಲ್ಲದೆ, ಹಂತ ಹಂತವಾಗಿ ದೊಡ್ಡ ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು ನಡೆಸುವ ಸ್ವಯಂ ಸೇವಾ ಸಂಘಟನೆಗಳಿಗೆ, ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸಲು ಮುಂದಾಗಿರುವುದು ಎದ್ದುಕಾಣುತ್ತಿದೆ.

ಮೂಲಭೂತವಾಗಿ ಶಿಕ್ಷಣದಲ್ಲಿ ಬರುವ ಖಾಸಗಿ ಬಂಡವಾಳ ತಡೆಯುವ ಬದಲಿಗೆ ಸರ್ಕಾರ ನಡೆಸುವ ಮತ್ತೊಂದು ಇಲಾಖೆಯನ್ನು ಬಲಹೀನಗೊಳಿಸಲು ಪ್ರಯತ್ನಿಸುತ್ತಿದೆ.

ಐಸಿಡಿಎಸ್ ಯೋಜನೆ ದೇಶದಲ್ಲಿ ಜಾರಿಗೆ ಬರಲು ಮಹತ್ವದ ಉದ್ದೇಶವಿದೆ. ಯಾವುದೆ ಮಗುವಿಗೆ 40% ದೈಹಿಕ ಬೆಳವಣಿಗೆ, 80% ಮಾನಸಿಕ ಬೆಳವಣಿಗೆ ಆಗುವುದು 6 ವರ್ಷದೊಳಗೆ. ಆ ವಯಸ್ಸಿನ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ, ಅನೌಪಚಾರಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ಸವಲತ್ತುಗಳನ್ನು ಒದಗಿಸಿ ಕೊಡಲು ಒಂದು ಸ್ಥಳವನ್ನು ಗುರ್ತಿಸಿರುವುದು ಅದರ ಹೆಸರೇ ಅಂಗನವಾಡಿ ಕೇಂದ್ರ.

ಈ ಕೇಂದ್ರದಲ್ಲಿ 3 ವರ್ಷದೊಳಗಿನ ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ಬರುವುದಿಲ್ಲ. ಹಾಗಾಗಿ 3 ರಿಂದ 6 ವರ್ಷದ ಮಕ್ಕಳ ಬೌದ್ಧಿಕ ಮತ್ತಿತರ ಚಟುವಟಿಕೆಯ ಕೇಂದ್ರವೇ ಅಂಗನವಾಡಿ ಕೇಂದ್ರ.

ತಾಯಿಯ ಮಡಿಲನ್ನು ಬಿಟ್ಟು ಬರುವ ಮಕ್ಕಳಿಗೆ "ಪ್ರಾರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣ (Early child hood care & Education) ಪ್ರಕಾರ ಅಂಗನವಾಡಿ ಕೇಂದ್ರಗಳನ್ನು ಪುನರೂಪಿಸಿ ಪರಿಣಾಮಕಾರಿ ಸಂವಹನ, ಶಾಲಾ ಪೂರ್ವ ಕಲಿಕೆ, ಮತ್ತು ವೈಜ್ಞಾನಿಕ ಅರಿವು, ಸಾಮಾಜಿಕ ಹೊಂದಾಣಿಕೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವುದು, ಶಾರೀರಿಕ ಬೆಳವಣಿಗೆ, ನಿಯಂತ್ರಣ, ಸಮನ್ವಯತೆ ಹಾಗೂ ಒಳ್ಳೆಯ ಅಭ್ಯಾಸಗಳನ್ನು ಬೆಳೆಸುವುದು ಇದನ್ನು ಮಕ್ಕಳ ಮಾತೃಭಾಷೆ/ ಮನೆ ಭಾಷೆ/ಸ್ಥಳೀಯ ಆಡು ಭಾಷೆಯಲ್ಲಿ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದೆ.

ಆದರೆ ಬದಲಾಗುತ್ತಿರುವ ಸಮಾಜದಲ್ಲಿ ಸ್ಪರ್ಧೆಗಳು ಹೆಚ್ಚುತ್ತದೆ. ಇದಕ್ಕೆ ತಕ್ಕ ಹಾಗೆ ಶಿಕ್ಷಣ ಸಿಗಬೇಕು ಎನ್ನುವುದು ಪೋಷಕರ ಒತ್ತಾಸೆ ಸಹಜವಾಗಿಯೇ ಇರುತ್ತದೆ. ಈ ಒತ್ತಾಸೆಯನ್ನು ಈಡೇರಿಸಬೇಕಾದರೆ ಯಾವುದೇ ಕಾನೂನಿನ ಚೌಕಟ್ಟಿಲ್ಲದೆ ಆದೇಶವನ್ನು ತರಲಾಗಿದೆ.

ಈಗ ಇರುವಂತಹ ಎರಡು ವ್ಯವಸ್ಥೆಗಳಾದ ಐಸಿಡಿಎಸ್ ಮತ್ತು ಶಿಕ್ಷಣ ಇಲಾಖೆ ಪರಸ್ಪರ ಕುಳಿತು ಚರ್ಚಿಸಿ ಸಮನ್ವಯತೆಯನ್ನು ಸಾಧಿಸುವ, ಪರ್ಯಾಯ ಮಾರ್ಗ ಹುಡುಕಬೇಕು. ಇಲ್ಲದಿದ್ದರೆ, ಪೋಷಕರ ಬೇಡಿಕೆ ಮತ್ತು ದಾಖಲಾತಿಯನ್ನು ಹೆಚ್ಚಿಸುವಲ್ಲಿ ಯಾವುದೇ ರೀತಿಯ ಮಹತ್ವದ ತಿರುವು ಬರುವುದಿಲ್ಲ. ಆದ್ದರಿಂದ ಶಿಕ್ಷಣ ಇಲಾಖೆಯಿಂದ ಬಂದಿರುವ ಸುತ್ತೋಲೆಯನ್ನು ಮಾರ್ಪಡಿಸಬೇಕು.

ಎಲ್ಲೆಲ್ಲಿ ಶಾಲಾ ಆವರಣದೊಳಗೆ ಖಾಲಿ ಜಾಗ ಇದೆಯೋ ಅಲ್ಲಿಗೆ ಅಂಗನವಾಡಿ ಕೇಂದ್ರಗಳನ್ನು ಸ್ಥಳಾಂತರ ಮಾಡಬಹುದು. ಅಂಗನವಾಡಿ ಕೇಂದ್ರಕ್ಕೆ ಒಬ್ಬ ಹೆಚ್ಚುವರಿ ಸಹಾಯಕಿಯನ್ನು ನೇಮಿಸಿ ಅವರಿಂದ ಮಾತೃಪೂರ್ಣ ಕೆಲಸ ಮಾಡಿಸಬೇಕು. ಈಗಿರುವ ಅಂಗನವಾಡಿ ನೌಕರರಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವೀಧರರು ಮತ್ತು ಯುವತಿಯರು ಆಗಿರುವುದರಿಂದ ಅವರಿಗೆ ವಿಶೇಷ ತರಬೇತಿಗಳನ್ನು ಕೊಟ್ಟು ಅವರನ್ನು ಎಲ್‌ಕೆಜಿ–ಯುಕೆಜಿ ಭೋಧಿಸಲು ಉಪಯೋಗಿಸಬೇಕು.

ಈ ಮಕ್ಕಳಿಗೆ ಸಮವಸ್ತ್ರ, ಪಠ್ಯ ಪುಸ್ತಕಗಳನ್ನು ಕೊಡಬೇಕು. ಶಿಕ್ಷಣದ ಅಡಿಪಾಯವಾಗಿರುವ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ–ಯುಕೆಜಿ ಕಲಿತ ಮಗು 1ನೇ ತರಗತಿಗೆ ದಾಖಲಾಗುತ್ತದೆ. ಆಗ ಎಲ್‌ಕೆಜಿ–ಯುಕೆಜಿ ಯಿಂದ 12ನೇ ತರಗತಿಯ ತನಕ ಒಂದೇ ಸ್ಥಳದಲ್ಲಿ ಮಗು ಕಲಿಯಲು ಮತ್ತು ಬೆಳೆಯಲು ಸಹಾಯವಾಗುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ಹಿಂದುಳಿದ ವರ್ಗಗಳು ಮತ್ತು ದಲಿತ ಅಲ್ಪ ಸಂಖ್ಯಾತರ ಎಲ್ಲರ ಮಕ್ಕಳಿಗೂ ಈ ಸವಲತ್ತುಗಳು ಸಿಗುತ್ತದೆ.

ಇಂತಹ ಪ್ರಯತ್ನದ ಭಾಗವಾಗಿ "ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ (ಸಿಐಟಿಯು)" ಸತತ ಪ್ರಯತ್ನಗಳ್ಳು ನಡೆಸುತ್ತಿದೆ. ನಮ್ಮ ಈ ಪ್ರಯತ್ನಕ್ಕೆ ಎಲ್ಲರ ಕೈ ಜೋಡಣೆ ಆಗಬೇಕೆಂದು ಈ ಮೂಲಕ ಆಶಿಸುತ್ತೇವೆ. ■

ಕಣ್ಮರೆಯಾದ ಕಾರ್ಮಿಕ ಕಣ್ಮಣಿ.... ಪುಟ 16 ರಿಂದ

ಕಟ್ಟಿ ಕಾರ್ಯಾಚರಣೆ ನಡೆಸುವಲ್ಲಿ ಬಿ.ಮಾಧವ ಪ್ರಮುಖ ಪಾತ್ರ ವಹಿಸಿದ್ದರು. ದ.ಕ.ಜಿಲ್ಲೆಯಲ್ಲಿ ಮೂರನೇ ಅವಧಿಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವಾಗ – ಈಗ ಆರು ವರ್ಷಗಳ ಹಿಂದೆ – ವಿವಿಧ ಬಗೆಯ ಅನಾರೋಗ್ಯದ ಕಾರಣ ಪಕ್ಷದ ಹಾಗೂ ಕಾರ್ಮಿಕ ಸಂಘಟನೆಗಳ ಜವಾಬ್ದಾರಿಗಳಿಂದ ವಿಶ್ರಾಂತಿ ಪಡೆದರು.

ಸಿಪಿಐ(ಎಂ) ಪಕ್ಷದ ಹಾಗೂ ಪ್ರಗತಿಪರ ಸಂಘಟನೆಗಳ ಬೆಳವಣಿಗೆ ಹಾಗೂ ವರ್ಚಸ್ಸಿಗೆ ಬಿ.ಮಾಧವ ಅವರ ಕೊಡುಗೆ ಅಪಾರ. ಸರಳ ಸಜ್ಜನಿಕೆಯ ವ್ಯಕ್ತಿತ್ವ ಅವರದು. ಎಡಚಳುವಳಿ ಒಬ್ಬ ಬದ್ಧ ಹೋರಾಟಗಾರ ನಾಯಕನನ್ನು ಕಳೆದುಕೊಂಡಿತು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ತನ್ನ ಹಿರಿಯ ನಾಯಕನಿಗೆ ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತದೆ. ■

ಧೀರ್ಘ ಕಾಲದ ಅನಾರೋಗ್ಯದಿಂದ ಬಳಲಿದ್ದ ಅವರು, ಇಂದು ನಿಧನರಾಗಿದ್ದಾರೆ. ಬಿ.ಮಾಧವ ಅವರು ಬಹಳ ಧೀರ್ಘಕಾಲ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ, ದಕ್ಷಿಣ ಕನ್ನಡ ಜಿಲ್ಲೆ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದರು. ಒಮ್ಮೆ ಲೋಕಸಭೆಗೆ ಸಿಪಿಎಂ ನ ಅಭ್ಯರ್ಥಿಯಾಗಿಯೂ ಸ್ಪರ್ಧಿಸಿದ್ದರು.

ರಾಜ್ಯದಲ್ಲಿ ಹಾಗು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಚಳುವಳಿಯನ್ನು ಕಟ್ಟಲು ಅಹರ್ನಿಶಿ ದುಡಿದವರು ಬಿ.ಮಾಧವ. ಬೀಡಿ ಕಾರ್ಮಿರ ಫೇಡರೇಷನ್ ನ ರಾಜ್ಯ – ರಾಷ್ಟ್ರ ಮಟ್ಟದ ಸಮಿತಿಯ ಅಧ್ಯಕ್ಷರಾಗಿ, ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯ ಅಧ್ಯಕ್ಷರಾಗಿಯೂ ಕೆಲಕಾಲ ಕೆಲಸ ಮಾಡಿದ್ದರು. ಅವರ ನಿಸ್ವಾರ್ಥ, ದಣಿವರಿದ ಅವರ ಕಾಯಕದಿಂದಾಗಿಯೇ ಕಾಮ್ರೇಡ್ ಸೂರಿ ಅವರ ತರುವಾಯ ಸಿಐಟಿಯು ರಾಜ್ಯ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು.

ಜೀವವಿಮಾ ನಿಗಮದಲ್ಲಿ ನೌಕರರಾಗಿ ಸೇವೆ ಸಲ್ಲಿಸಿದ ಅವರು, ನಿವೃತ್ತಿಯ ನಂತರ ಎಡಚಳುವಳಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದರು. ಬಿ.ಮಾಧವ ಅವರು ಲೇಖಕರಾಗಿ, ಭಾಷಾಂತರರಾಗಿಯೂ ಅವರು ಹೆಸರುವಾಸಿ. ಕೋಮುವಾದ, ಫ್ಯಾಸಿಸಂ ಕುರಿತಾಗಿ ಆಳವಾದ ಅಧ್ಯಯನ ಮಾಡಿ ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ಕಾಮ್ರೇಡ್ ಇಎಂಎಸ್ ಅವರ 'ಭಾರತೀಯ ಕಮ್ಯುನಿಸ್ಟನ ನೆನಪುಗಳು, ಎಕೆಜಿ ಅವರ 'ನನ್ನ ಜೀವನ' ಇತ್ಯಾದಿ ಭಾಷಾಂತರ ಕೃತಿಗಳು ಎಡ ಚಳುವಳಿಯಲ್ಲಿ ಜನಜನಿತವಾಗಿದ್ದವು.

ಕಾರ್ಮಿಕ ವರ್ಗದ ಪರ ತಮ್ಮ ಇಡೀ ಬದುಕನ್ನು ಸವೆಸಿದ ಕಾಮ್ರೇಡ್ ಬಿ.ಮಾಧವ ರವರು ಅನಾರೋಗ್ಯದಿಂದ ಇಂದು ನಮ್ಮನ್ನು ಅಗಲಿಗದ್ದಾರೆ. ಅವರ ಅಗಲಿಕೆ, ಕಾರ್ಮಿಕ ಚಳುವಳಿ ಹಾಗು ಎಡ ಚಳುವಳಿಗೆ ತುಂಬಲಾರದ ನಷ್ಟ. ಅವರಿಗೆ ಜನಶಕ್ತಿ ಬಳಗದಿಂದ ಭಾವಪೂರ್ಣ ಶ್ರದ್ಧಾಂಜಲಿ

ಕ್ರಿಯಾ ಮಾಧ್ಯಮ ‘ಮಾರ್ಕ್ಸ್200-ಕ್ಯಾಪಿಟಲ್150’ ಯೋಜನೆಯ ಕೊನೆಯ ಪ್ರಕಟಣೆಯಾಗಿದ್ದು, ಸದ್ಯದಲ್ಲೇ ಪ್ರಕಟವಾಗಲಿರುವ ‘ಬಂಡವಾಳ’ ಸಂಪುಟ-1 ರ ಪ್ರವೇಶಿಕೆಯಿಂದ ಆಯ್ದ ಭಾಗ.

‘ಬಂಡವಾಳ’ದಲ್ಲೇನಿದೆ?

ವಸಂತರಾಜ ಎನ್.ಕೆ.

ಬಂಡವಾಳ ಸಂಪುಟ-1ರ ಒಟ್ಟು ಕಥನ ಸಂಕೀರ್ಣವಾದದ್ದು. ಆದರೆ ಅದನ್ನು ಪರಸ್ಪರ ಹೆಣೆದುಕೊಂಡ ಆದರೆ ವಿಭಿನ್ನವಾದ ಸರಳವಾದ ಆಸಕ್ತಿಕಾರಕವಾದ ಪ್ರಮುಖ ಮೂರು ಕಥನಗಳ ಸಂಗಮವಾಗಿ ನೋಡಬಹುದು. ಆ ಮೂರು ಕಥನಗಳೆಂದರೆ

ಅ. ಕಾರ್ಮಿಕರ ವರ್ಗಶೋಷಣೆ ಮತ್ತು ವರ್ಗಹೋರಾಟದ ಕಥನ

ಆ. ಬಂಡವಾಳಶಾಹಿ ವ್ಯವಸ್ಥೆಯ ಉಗಮ, ವಿಕಾಸಗಳ ಚರಿತ್ರೆ

ಇ. ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯ ಚಲನೆಯ ನಿಯಮಗಳ ಅನ್ವೇಷಣೆ

ಅ. ಕಾರ್ಮಿಕರ ವರ್ಗಶೋಷಣೆ ಮತ್ತು ವರ್ಗಹೋರಾಟದ ಕಥನ

ಒಂದು ಕಡೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರ ವರ್ಗ ಶೋಷಣೆಯ ನಿರ್ದಿಷ್ಟತೆಯ ತಾತ್ವಿಕ ಅನಾವರಣ ‘ಬಂಡವಾಳ’ದಲ್ಲಿ ನಡೆಯುತ್ತಿರುತ್ತದೆ. ಇದು ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯ ಚಲನೆಯ ನಿಯಮಗಳ ಅನ್ವೇಷಣೆ (ಮೂರನೇ ಕಥನದ ಭಾಗವಾಗಿ ಬರುತ್ತದೆ). ಅದಕ್ಕಾಗಿ – ಸರಕಿನ ಪರಿಕಲ್ಪನೆ; ಸರಕಿನ ಇಬ್ಬಗೆಯ ಮೌಲ್ಯಗಳು – ಉಪಯೋಗ-ಮೌಲ್ಯ ಮತ್ತು ವಿನಿಮಯ-ಮೌಲ್ಯ; ಹಣದ ಪರಿಕಲ್ಪನೆ; ಹಣದ ಕೆಲಸಗಳು – ಮೌಲ್ಯದ ಅಳೆಯುವ, ಚಲಾವಣೆಯ ಮತ್ತು ಪಾವತಿಯ ಸಾಧನವಾಗಿ; ಶ್ರಮ ಒಂದು ಸರಕಾಗಿ ಮತ್ತು ಮಿಗುತಾಯ ಮೌಲ್ಯದ ಸೃಷ್ಟಿಯ ಶಕ್ತಿಯಾಗಿ; ಸರಕಿನ ರೂಪಾಂತರ; ಸರಕು ಮತ್ತು ಹಣದ ಪರಿಚಲನೆ; ಹಣ ಬಂಡವಾಳವಾಗುವ ಬಗೆ; ಮಿಗುತಾಯ ಶ್ರಮ ಮತ್ತು ಮಿಗುತಾಯ ಮೌಲ್ಯ ಕಾರ್ಮಿಕರ ಶೋಷಣೆಯ ಮೂಲ – ಈ ರೀತಿ ಶೋಷಣೆಯ ಮೂಲದ ಅನ್ವೇಷಣೆ ನಡೆಯುತ್ತಿರುತ್ತದೆ. ಆ ಪ್ರಧಾನ ಕಥನದ ಭಾಗವಾಗಿಯೇ ಮತ್ತು ಜತೆ ಜತೆಯಾಗಿಯೇ ಇಂಗ್ಲೆಂಡಿನ ಕಾರ್ಮಿಕರ ವರ್ಗಶೋಷಣೆಯ ಮತ್ತು ಅವರ ವರ್ಗ ಹೋರಾಟದ ಕಥನವೂ ಬರುತ್ತದೆ.

ವರ್ಗ ಶೋಷಣೆಯ ತಾತ್ವಿಕ ಅನ್ವೇಷಣೆಯಲ್ಲಿ ಹಲವು ಪರಿಕಲ್ಪನೆಗಳನ್ನು ವಿವರಿಸುವಾಗ ಕಾರ್ಮಿಕರ ದಿನದ ಕೆಲಸದ ಅವಧಿಯನ್ನು 12 ಗಂಟೆ ಎಂದು ಹೆಚ್ಚಾಗಿ ತೆಗೆದುಕೊಳ್ಳುವುದೇ ಈಗಿನ ಓದುಗನಿಗೆ ಮೊದಲ ಶಾಕ್ ಕೊಡುತ್ತದೆ. 8 ಗಂಟೆಯ ಗರಿಷ್ಠ ದುಡಿಮೆಯ ದಿನಕ್ಕಾಗಿ ಜಗತ್ತಿನಾದ್ಯಂತ ಅನುದಿನವೂ ಹೋರಾಡುತ್ತಿರುವ ಕಮ್ಯುನಿಸ್ಟ್ ಚಳುವಳಿಯ ಆದಿ ಪುರುಷ ಯಾಕೆ 12 ಗಂಟೆ ಉದಾಹರಣೆ ತೆಗೆದುಕೊಳ್ಳುತ್ತಾರೆ ಎಂಬುದು ಯಕ್ಷಪ್ರಶ್ನೆಯಾಗುತ್ತದೆ. ಓದುತ್ತಾ ಹೋದಂತೆ ಮಾರ್ಕ್ಸ್ ಕಾಲದ ಇಂಗ್ಲೆಂಡಿನಲ್ಲಿ 12ರಿಂದ 18 ಗಂಟೆಗಳ ಕೆಲಸದ ದಿನದ ಅವಧಿ ಅತಿ ಸಾಮಾನ್ಯವಾಗಿತ್ತು ಎಂದು ತಿಳಿಯುತ್ತದೆ. ಸಂಪುಟದ ಉದ್ದಕ್ಕೂ ಬರುವ ಇಂಗ್ಲೆಂಡಿನ ವಿವಿಧ ಕಾರ್ಮಿಕ ವರ್ಗಗಳ ದೈನಂದಿನ ಕೆಲಸದ ಮತ್ತು ಜೀವನ ಪರಿಸ್ಥಿತಿಗಳ ವಿವರಣೆ ಎತ್ತಿ ತೋರಿಸುವ ಶೋಷಣೆಯ ಕರಾಳ ಮುಖಗಳು ದಂಗು ಬಡಿಸುವಂತಹದು. ಇಂದು ಭಾರತ ಅಥವಾ ಇತರ ಯಾವುದೇ ಮೂರನೇ ಜಗತ್ತಿನಲ್ಲಿನ ಕಾರ್ಮಿಕರ ಪರಿಸ್ಥಿತಿಯಂತೆಯೇ ಕಾಣುತ್ತದೆ. ಅದರಲ್ಲೂ ಆಗ ಇಂಗ್ಲೆಂಡಿನ ಮಹಿಳಾ ಮತ್ತು ಬಾಲ ಕಾರ್ಮಿಕರ ಕೆಲಸದ ಪರಿಸ್ಥಿತಿಯ ವಿವರಗಳು ಹೃದಯ ಹಿಂಡುವಂತಹದ್ದು. ಈ ವಿವರಗಳನ್ನು ಓದುವಾಗ ಇವು ಈಗ 150 ವರ್ಷಗಳ ನಂತರ ಆದ ಬಂಡವಾಳಶಾಹಿಯ ಬೆಳವಣಿಗೆಯಿಂದಾಗಿ ಅಥವಾ ‘ಪ್ರಗತಿ’ಯಿಂದಾಗಿ ಇದು ‘ಅಪ್ರಸ್ತುತ’ ಎಂದೋ ‘ಹಳೆಯ ಕತೆ’ಯೆಂದೋ ಅನಿಸುವುದೇ ಇಲ್ಲ. ಇಂತಹ ಪರಿಸ್ಥಿತಿಯಿರುವ ದೇಶ-ಸ್ಥಳ ಬದಲಾಗಿದೆ ಎಂದು ಬಿಟ್ಟರೆ ಇಂದಿಗೂ ಕಾರ್ಮಿಕರ ಜೀವನದ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಈಗ ಯುರೋಪು, ಇಂಗ್ಲೆಂಡುಗಳಲ್ಲಿ ಸವಾರಿ ಮಾಡುತ್ತಿರುವ ಆಳುವ ಬಂಡವಳಿಗ ವರ್ಗದ ‘ಮಿತವ್ಯಯ’ದ ನೀತಿಗಳು ಪೂರ್ಣವಾಗಿ ಜಾರಿಗೆ ಬಂದರೆ ಅಲ್ಲೂ ಇಂತಹುದೇ ಪರಿಸ್ಥಿತಿ ಕಾಣುವ ಕಾಲವೂ ಸದ್ಯದಲ್ಲೇ ಬರಬಹುದು.

ಕಾರ್ಮಿಕರ ಅಮಾನವೀಯ ಕೆಲಸದ ಪರಿಸ್ಥಿತಿ, ಶೋಷಣೆಯ ವಿವರಗಳು ಹಾಗೂ ಅವುಗಳ ವಿರುದ್ಧ ಆಕ್ರೋಶವನ್ನು ಪುಸ್ತಕದ ಉದ್ದಕ್ಕೂ ಪ್ರಸ್ತುತವಾದಾಗಲೆಲ್ಲ ಅವಕಾಶವಿದ್ದಾಗಲೆಲ್ಲ ಮಾರ್ಕ್ಸ್ ವ್ಯಕ್ತಪಡಿಸುತ್ತಾರೆ. ಅದೇ ರೀತಿ ಈ ವರ್ಗ ಶೋಷಣೆಯ ವಿರುದ್ಧ ಕಾರ್ಮಿಕರ ಹೋರಾಟದ ಬಗೆಗೂ ಪ್ರಸ್ತಾಪಗಳು ಬರುತ್ತವೆ. ಆದರೆ ‘ಕಾರ್ಮಿಕರ ಕೆಲಸದ ದಿನ’ (ಅಧ್ಯಾಯ 10) ಮತ್ತು ‘ಯಂತ್ರಗಳು ಮತ್ತು ಆಧುನಿಕ ಕೈಗಾರಿಕೆ’ (ಅಧ್ಯಾಯ 15) ಅಧ್ಯಾಯಗಳಲ್ಲಿ ಕಾರ್ಮಿಕರ ವರ್ಗಶೋಷಣೆಯ ಮತ್ತು ವರ್ಗಹೋರಾಟದ ನಿರೂಪಣೆಯೇ ಪ್ರಧಾನವಾಗಿವೆ. ಅದೇ ರೀತಿ ಇಂಗ್ಲೆಂಡಿನ ಕಾರ್ಮಿಕರ ಜೀವನ ಪರಿಸ್ಥಿತಿಯ ಮೇಲೆ ಬಂಡವಾಳದ ಶೇಖರಣೆಯ ಪ್ರಭಾವದ ಮನಮುಟ್ಟುವ ವಿವರಣೆ ಅಧ್ಯಾಯ 25 – ವಿಭಾಗ 5ರಲ್ಲಿ ಬರುತ್ತದೆ.

‘ಕಾರ್ಮಿಕರ ಕೆಲಸದ ದಿನ’


ಕಾರ್ಮಿಕನಿಂದ ಅವನ ಜೀವನಾಶ್ಯಕ ಸಾಧನಗಳಿಗೆ ಬೇಕಾದ ಶ್ರಮಕಾಲಕ್ಕಿಂತ ಹೆಚ್ಚಾಗಿ ಹಿಂಡಿ ತೆಗೆಯಲಾದ ಮಿಗುತಾಯ ಶ್ರಮದಿಂದ ಮಿಗುತಾಯ ಮೌಲ್ಯ ಹುಟ್ಟುತ್ತದೆ. ಅದೇ ಬಂಡವಾಳಶಾಹಿಯ ಲಾಭದ ಮೂಲ. ಕಾರ್ಮಿಕನಿಂದ ಹೆಚ್ಚೆಚ್ಚು ಮಿಗುತಾಯ ಮೌಲ್ಯ ಕಿತ್ತುಕೊಳ್ಳುವುದು ಬಂಡವಾಳಶಾಹಿಯ ಪ್ರಧಾನ ಗುಣಲಕ್ಷಣ, ಪ್ರವೃತ್ತಿಯಾಗಿರುತ್ತದೆ, ಎಂಬ ಸಿದ್ಧಾಂತವನ್ನು ವೈಜ್ಞಾನಿಕವಾಗಿ ಪ್ರತಿಪಾದಿಸಿದ ಮೇಲೆ ‘ಕಾರ್ಮಿಕರ ಕೆಲಸದ ದಿನ’ (ಅಧ್ಯಾಯ 10) ಬರುತ್ತದೆ. ಕಾರ್ಮಿಕರ ಕೆಲಸದ ದಿನವನ್ನು ಸಾಧ್ಯವಾದಷ್ಟು ಹೆಚ್ಚು ಮಾಡುವುದೂ ಬಂಡವಾಳಶಾಹಿಯ ಪ್ರಧಾನ ಗುಣಲಕ್ಷಣ, ಪ್ರವೃತ್ತಿಯಾಗಿರುತ್ತದೆ. ಈ ಪ್ರಯತ್ನದ ಹಲವು ಮಗ್ಗುಲುಗಳ, ಕಾರ್ಮಿಕರ ಮೇಲೆ ಅದರ ದುಷ್ಪರಿಣಾಮಗಳ ಮತ್ತು ಅದರ ವಿರುದ್ಧ ಕಾರ್ಮಿಕರ ಮೊದಲ ಸುತ್ತಿನ ಪ್ರತಿರೋಧದ ನಿರೂಪಣೆ ‘ಕಾರ್ಮಿಕರ ಕೆಲಸದ ದಿನ’ (ಅಧ್ಯಾಯ 10)ದ ಮುಖ್ಯ ವಸ್ತು. “ಬಂಡವಾಳವೆಂದರೆ ಸತ್ತ ದುಡಿಮೆಯ ಕಳೇಬರವೇ ಸರಿ. ಬಂಡವಾಳ ರಕ್ತ-ಪಿಶಾಚಿಯಂತೆ ಜೀವಂತ ದುಡಿಮೆಯ ರಕ್ತವನ್ನು ಹೀರಿ ಬೆಳೆಯುತ್ತದೆ. ದುಡಿಮೆಯನ್ನು ಜಾಸ್ತಿ ಹೀರಿದಷ್ಟು, ಜಾಸ್ತಿ ಕಾಲ ಬಂಡವಾಳ ಜೀವಂತವಾಗಿರುತ್ತದೆ.” (ಅಧ್ಯಾಯ 10 – ವಿಭಾಗ-1) ಎನ್ನುವ ಮೂಲಕ ಮಾರ್ಕ್ಸ್, ಕಾರ್ಮಿಕನ ಕೆಲಸದ ದಿನವನ್ನು ಗರಿಷ್ಠಗೊಳಿಸುವ ಬಂಡವಳಿಗನ ಧಾವಂತ ಹೇಗೆ ವ್ಯವಸ್ಥೆಯ ಭಾಗ ಎಂದು ತೋರಿಸಿಕೊಡುತ್ತಾರೆ.

ಮಿಗುತಾಯ ಶ್ರಮ ಕಿತ್ತುಕೊಳ್ಳುವುದರಲ್ಲಿ ಹಿಂದಿನ ಉತ್ಪಾದನಾ ವ್ಯವಸ್ಥೆಗಳ (ಗುಲಾಮಿ, ಪಾಳೆಯಗಾರಿ ಇತ್ಯಾದಿ) ಮಾಲಕರನ್ನು ಯಾವುದೇ ಮಿತಿಯಿಲ್ಲದ ಕ್ರೌರ್ಯದಲ್ಲಿ ಮೀರಿಸುವ ಬಂಡವಳಿಗರ ಪರಿಯನ್ನು ಅವರು ವಿವರಿಸುತ್ತಾರೆ.


ಕಲ್ಲಿದ್ದಲು ಗಣಿಯಲ್ಲಿ ಬಾಲ ಕಾರ್ಮಿಕರು

‘ರೊಮೇನಿಯಾದ ಡೆನ್ಯೂಬಿಯನ್ ರಾಜಸತ್ತೆಗಳಲ್ಲಿ ಪ್ರಚಲಿತವಿರುವ ಮಿಗುತಾಯ ದುಡಿಮೆಯ ಕಾರ್ವಿ ಪದ್ಧತಿ’ಯು, ‘ಇಂಗ್ಲೆಂಡ್‌ನ ಫ್ಯಾಕ್ಟರಿಗಳ ದುಡಿಮೆ’ಗಿಂತ ‘ಹೆಚ್ಚು ಸ್ವತಂತ್ರವೂ ಬದಲಾವಣೆಗಳಿಗೆ ತೆರೆದುಕೊಂಡಿರುವಂತಹದ್ದೂ ಆಗಿದೆ.’, ಎಂಬ ಚರಿತ್ರೆಯಲ್ಲಿನ ಬಂಡವಾಳಶಾಹಿ-ಪೂರ್ವ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಗಳನ್ನು ಪುರಾವೆ ಸಹಿತ ವಸ್ತುಸ್ಥಿತಿಗಳೊಂದಿಗೆ ಹೋಲಿಸಿ ವಿವರಿಸುತ್ತಾರೆ. ‘ದುಡಿಮೆಯ ಪ್ರಧಾನ ಉದ್ದೇಶ ದುಡಿಮೆಗಾರನಿಂದ ಉಪಯುಕ್ತ ವಸ್ತುಗಳನ್ನು’ ಉತ್ಪಾದಿಸುವ ಬದಲು, ‘ಮಿಗುತಾಯ ದುಡಿಮೆಯೇ ದುಡಿಮೆಯ ಉದ್ದೇಶ’ವಾಗಿರುವುದೇ ಇದಕ್ಕೆ ಕಾರಣವೆಂದೂ ವಾದಿಸುತ್ತಾರೆ. ‘ಇಂಗ್ಲೆಂಡ್‌ನ ಫ್ಯಾಕ್ಟರಿಗಳ ದುಡಿಮೆ’ಯ ಪರಿಸ್ಥಿತಿಯನ್ನು ನಿರೂಪಿಸಲು ಅವರು ಫ್ಯಾಕ್ಟರಿ ಇನ್ಸಪೆಕ್ಟರುಗಳ ತಳಮಟ್ಟದ ಸಂದರ್ಶನ ಸಮೀಕ್ಷೆ ಆಧಾರಿತ ಅರ್ಧವಾರ್ಷಿಕ ಮತ್ತು ಪತ್ರಿಕಾ ವರದಿಗಳನ್ನು ಬಳಸುತ್ತಾರೆ. ಅಧ್ಯಾಯ 10ರ ಉದ್ದಕ್ಕೂ ವಿವಿಧ ಉದ್ಯಮಗಳಲ್ಲಿ ಕಾರ್ಮಿಕರ ದಾರುಣ ವಸ್ತುಸ್ಥಿತಿಯನ್ನು ನಿರೂಪಿಸಲು ಫ್ಯಾಕ್ಟರಿ ಇನ್ಸಪೆಕ್ಟರುಗಳ ಮತ್ತು ಆರೋಗ್ಯ ಕಮಿಶನುಗಳ ವರದಿಗಳೇ ಅವರಿಗೆ ಆಧಾರವಾಗುತ್ತದೆ.

ಕಾರ್ಮಿಕರ ದಾರುಣ ಪರಿಸ್ಥಿತಿಯ ವರದಿಗಳು, ಅದರ ವಿರುದ್ಧ ಕಾರ್ಮಿಕರ ಪ್ರತಿರೋಧ ಇವೆಲ್ಲವನ್ನು ಗಮನಿಸಿ ಇಂಗ್ಲೆಂಡಿನ ಸರಕಾರ ತಂದ 1850ರ ಫ್ಯಾಕ್ಟರಿ ಕಾಯ್ದೆ ಸರಾಸರಿ ದಿನಕ್ಕೆ 10 ಗಂಟೆಗಳ ಮಿತಿ ಹೇರುತ್ತದೆ. ಆ ಕಾನೂನಿನ ಜಾರಿಯ ಮಿತಿಗಳನ್ನೂ, ಈ ಕಾನೂನಿನಿಂದ ರಿಯಾಯಿತಿ ಪಡೆದಿದ್ದ ಹಲವು ಉದ್ಯಮಗಳಲ್ಲಿ ಕಾರ್ಮಿಕರ ಪರಿಸ್ಥಿತಿಯನ್ನು ನಿರೂಪಿಸುವ ಮೂಲಕ ಮಾರ್ಕ್ಸ್ ಬಯಲಿಗೆಳೆಯುತ್ತಾರೆ. ಈ ಉದ್ಯಮಗಳಲ್ಲಿ ಶೋಷಣೆ ಕೆಲಸದ ದೀರ್ಘ ದಿನ, ಅಮಾನವೀಯ ಕೆಲಸದ ಸ್ಥಳ, ಪರಿಸ್ಥಿತಿಗಳ ವಿವರಣೆ ದಂಗು ಬಡಿಸುವಂತಹುದು ಮತ್ತು ಅದರಷ್ಟಕ್ಕೆ ಒಂದು ಅತ್ಯುತ್ತಮ ತನಿಖಾ ವರದಿಯಂತಿದೆ.



ಕೆಲಸ ಮಾಡಲು ನಿರಾಕರಿಸಿದ ಅನಾಥಾಲಯಗಳ ಮಕ್ಕಳನ್ನು ಶಿಕ್ಷಿಸುತ್ತಿರುವುದು

1850ರ ಫ್ಯಾಕ್ಟರಿ ಕಾಯ್ದೆಯಿಂದ ವಿನಾಯಿತಿ ಪಡೆದಿದ್ದ ಲೇಸ್, ಮಡಿಕೆ, ಬೆಂಕಿಪೊಟ್ಟಣ ತಯಾರಿಕೆಯಲ್ಲಿ ಬಾಲ ಕಾರ್ಮಿಕರ ಶೋಷಣೆಯ ಚಿತ್ರಣವನ್ನು ಓದಿ ಕಣ್ಣು ಒದ್ದೆಯಾಗದವರು ಮನುಷ್ಯರೇ ಅಲ್ಲ. ‘9-10 ವರ್ಷ ಪ್ರಾಯದ ಎಳೆಯ ಮಕ್ಕಳನ್ನು, ಬೆಳಗಿನ ಜಾವ 2, 3 ಅಥವಾ 4 ಗಂಟೆಗೆ ಅವರ ಚಿಂದಿ ಬಿದ್ದ ಕೊಳಕು ಹಾಸಿಗೆಗಳಿಂದ ಬಲವಂತವಾಗಿ ಎಬ್ಬಿಸಿ, ರಾತ್ರಿ 10, 11 ಅಥವಾ 12 ಗಂಟೆಯವರೆಗೆ ದುಡಿಯುವಂತೆ ಒತ್ತಾಯ ಹೇರಲಾಗುತ್ತದೆ. ಅವರ ಮುಖಗಳು ಬಿಳಿಚಿಕೊಂಡಿರುತ್ತವೆ; ಅವರ ಒಟ್ಟು ವ್ಯಕ್ತಿತ್ವವೇ ಕಲ್ಲಿನಂತೆ ಜಡ್ಡಾಗುತ್ತದೆ. ಇಂಗ್ಲೆಂಡ್‌ನ ಲೇಸ್ ಉದ್ಯಮ, ಬಿಡುಗಡೆಯೇ ಇಲ್ಲದ ಗುಲಾಮಗಿರಿ...... ಕಾರ್ಮಿಕರ ಒಂದು ದಿನದ ದುಡಿಮೆಯನ್ನು 18 ಗಂಟೆಗಳ ಕಾಲ ಮಿತಿಗೆ ಒಳಪಡಿಸುವ ಕಾನೂನು ಜಾರಿಯಾಗಲಿ ಎಂಬ ಬೇಡಿಕೆಯ ಕುರಿತು ಚರ್ಚೆ ಮಾಡಲು ಒಂದು ಸಾರ್ವಜನಿಕ ಸಭೆ ನಡೆಯುವ ನಗರದ ಬಗ್ಗೆ ನಾವು ಏನು ಹೇಳಲು ಸಾಧ್ಯ!”

ಎಂದು ನಾಟಿಂಗ್‌ಹ್ಯಾಮ್‌ನಲ್ಲಿ ನಡೆದ ಇಂತಹ ಸಭೆಯಲ್ಲಿ,ನ್ಯಾಯಾಧೀಶರೊಬ್ಬರ ವಿಷಾದಭರಿತ ಉದ್ಗಾರವನ್ನು ಮಾರ್ಕ್ಸ್ ಉಲ್ಲೇಖಿಸುತ್ತಾರೆ. ‘ಬೆಂಕಿಕಡ್ಡಿಗಳ ಉದ್ಯಮ ಬೆಂಕಿಕಡ್ಡಿಗೆ ಫಾಸ್ಫರಸ್ ಎಂಬ ರಾಸಾಯನಿಕವನ್ನು ನೇರವಾಗಿ ಹಚ್ಚುವ ವಿಧಾನದ ಆವಿಷ್ಕಾರದೊಂದಿಗೆ 1833ರಲ್ಲಿ ಪ್ರಾರಂಭವಾದ.. ..ಲೂಸಿಫರ್ ಬೆಂಕಿಪೆಟ್ಟಿಗೆಗಳ ತಯಾರಿಕೆಯ ಜೊತೆಗೇ ಬರುವ ದವಡೆ ಅಲ್ಲಾಡಿಸಲು ಆಗದ ಟೆಟೆನಸ್ ಖಾಯಿಲೆ’ ಹರಡಿದೆ. ಈ ಉದ್ಯಮದಲ್ಲಿ ದುಡಿಯುವ ಕಾರ್ಮಿಕರಲ್ಲಿ ‘ಅರ್ಧಕ್ಕಿಂತ ಹೆಚ್ಚಿನವರು 13 ವರ್ಷಕ್ಕಿಂತ ಕೆಳಗಿನ ಬಾಲಕರು ಮತ್ತು 18 ವರ್ಷಕ್ಕಿಂತ ಕಡಿಮೆ ಪ್ರಾಯದ ತರುಣರು. .. 12 ರಿಂದ 15 ಗಂಟೆಗಳು ಅವರ ದಿನನಿತ್ಯದ ದುಡಿಮೆಯ ಕಾಲಾವಧಿಯಾಗಿತ್ತು. ರಾತ್ರಿಪಾಳಿಯ ದುಡಿಮೆಯೂ ಇತ್ತು; ಹೆಚ್ಚಿನ ಸಂದರ್ಭಗಳಲ್ಲಿ ಕಾರ್ಮಿಕರು, ಫಾಸ್ಫರಸ್ ಮುಂತಾದ ರಾಸಾಯನಿಕಗಳ ದುರ್ವಾಸನೆ ಹಬ್ಬಿದ, ತಮ್ಮ ದುಡಿಮೆಯ ಜಾಗದಲ್ಲೇ ಉಣ್ಣ ಬೇಕಾಗಿತ್ತು. ..ಡಾಂಟೆ ತನ್ನ ಕಾವ್ಯದಲ್ಲಿ ವರ್ಣಿಸುವ ನರಕಕ್ಕಿಂತಲೂ ಈ ಕಾರ್ಖಾನೆಗಳು ಹೆಚ್ಚು ಭೀಕರವಾಗಿದ್ದವು!’ ಎಂದು ಮಾರ್ಕ್ಸ್ ಆಕ್ರೋಶದಿಂದ ಬರೆಯುತ್ತಾರೆ.

1850ರ ಫ್ಯಾಕ್ಟರಿ ಕಾಯ್ದೆಯಿಂದ ವಿನಾಯಿತಿ ಪಡೆದಿದ್ದ ಪೇಪರ್ ಹ್ಯಾಂಗಿಂಗ್ (ಹಸ್ತ ಮುದ್ರಣ), ಡ್ರೆಸ್ ತಯಾರಿಕೆ ಮತ್ತಿತರ ಉದ್ಯಮಗಳಲ್ಲಿ ಮಹಿಳಾ ಕಾರ್ಮಿಕರ ಶೋಷಣೆಯ ಹಿಂದಿನ ಕ್ರೌರ್ಯ ಬಗ್ಗೆ ಮಾರ್ಕ್ಸ್ ನೀಡುವ ಚಿತ್ರಣ ನಡುಕ ತರುವಂತಹದು. ಮಹಿಳೆಯರ ಹ್ಯಾಟ್ ತಯಾರಕಿ ಆಗಿ ದುಡಿಯುತ್ತಿದ್ದ ಮೇರಿ ಆ್ಯನ್ ವಾಕ್ಲಿ ಎಂಬ 20 ವರ್ಷ ಪ್ರಾಯದ ತರುಣಿಯ ಅಕಾಲಮರಣದ ಕುರಿತ ವರದಿ ಉಲ್ಲೇಖಿಸುತ್ತಾ ಅವಳ ಉದಾಹರಣೆಯ ಮೂಲಕ, ಆ ಉದ್ಯಮದಲ್ಲಿ ಮಹಿಳಾ ಕಾರ್ಮಿಕರ ಪರಿಸ್ಥಿತಿ ಬಗ್ಗೆ ಅವರು ತಿಳಿಸುತ್ತಾರೆ. ಮೇರಿ ಆ್ಯನ್ ವಾಕ್ಲಿ ದಿನಕ್ಕೆ ಸರಾಸರಿ 161/2 ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕಾಗುತ್ತಿತ್ತು. ಸೀಸನ್‌ನಲ್ಲಿ ಒಮ್ಮೊಮ್ಮೆ ಅವಳು ಎಡೆಬಿಡದೆ 30 ಗಂಟೆ ದುಡಿದದ್ದೂ ಉಂಟು. ಅರಮನೆಗೆ ಬರಲಿದ್ದ ಹೊಸ ಯುವರಾಣಿಯ ಗೌರವಾರ್ಥ ಏರ್ಪಡಿಸಲಾಗಿದ್ದ ಸಂಭ್ರಮ ಕೂಟದಲ್ಲಿ ಪಾಲುಗೊಳ್ಳುವ ಕುಲೀನ ಮಹಿಳೆಯರಿಗೆ ಹೊಸ ಪೋಷಾಕುಗಳು ಸಿದ್ಧವಾಗಬೇಕಿದ್ದ ಸೀಸನ್ ನಲ್ಲಿ ‘ಕಂಪನಿಯ ಒಂದು ಇಕ್ಕಟ್ಟಾದ ಕೋಣೆಯಲ್ಲಿ ಮೇರಿ ಆ್ಯನ್ ವಾಕ್ಲಿ, ಇತರ 60 ತರುಣಿಯರ ಜೊತೆ ಸತತವಾಗಿ 261/2 ಗಂಟೆಗಳ ಕಾಲ ಕೆಲಸ ಮಾಡಿದ್ದಳು. ರಾತ್ರಿ; ಅವರು ಒತ್ತೊತ್ತಾಗಿ, ಗಾಳಿಗೂ ಸುಳಿದಾಡಲು ಜಾಗವಿಲ್ಲದಷ್ಟು ಕಿರಿಯ ಗೂಡುಗಳಲ್ಲಿ ನಿದ್ರಿಸಬೇಕಾಗಿತ್ತು.’ ಇದನ್ನು ಅವಳ ಕೃಶ ಶರೀರ ತಡೆದುಕೊಳ್ಳದೆ ಕುಸಿದಿತ್ತು. ಈ ಉದ್ಯಮದಲ್ಲಿ ಹೆಚ್ಚಿನ ಮಹಿಳೆಯರು ಜೀವಂತ ಶವಗಳಂತೆ ಇದ್ದರು, ಎಂಬುದು ಮಾರ್ಕ್ಸ್ ಕೊಡುವ ಚಿತ್ರಣ.

1850ರ ಫ್ಯಾಕ್ಟರಿ ಕಾಯ್ದೆಯಿಂದ ವಿನಾಯಿತಿ ಪಡೆದಿದ್ದ ಮತ್ತು ವಯಸ್ಕ ಪುರುಷ ಕಾರ್ಮಿಕರು ಪ್ರಧಾನವಾಗಿ ದುಡಿಯುತ್ತಿದ್ದ ಬ್ರೆಡ್ ತಯಾರಿಕೆ, ಕಮ್ಮಾರಿಕೆ, ರೈಲ್ವೇಯಲ್ಲಿ ಕಾರ್ಮಿಕರ ಪರಿಸ್ಥಿತಿಯ

ಪುಟ 14 ಕ್ಕೆ

ರೋಚಕ ಕತೆಗಳ ನಂತರದ ಕಟು ವಾಸ್ತವ–ನಿರುದ್ಯೋಗ ವರದಿ ಪ್ರಕಟ

ಸರಕಾರ ಬೇಷರತ್ ಕ್ಷಮೆಯನ್ನಾದರೂ ಯಾಚಿಸುತ್ತದೆಯೇ?–ಯೆಚುರಿ



ಇದು ಜೂನ್ 4ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾದ ಸಜಿತ್ ಕುಮಾರ್ ಅವರ ವ್ಯಂಗ್ಯಚಿತ್ರ. ರಾತ್ರಿ ಬಾಲಾಕೋಟ್ ದಾಳಿ ಇತ್ಯಾದಿ ರೋಚಕ ಕತೆಗಳನ್ನು ಕೇಳಿ ಮಲಗಿ ಮುಂಜಾನೆ ಎದ್ದಾಗ –ನಿರುದ್ಯೋಗ 45ವರ್ಷಗಳಲ್ಲೇ ಅತಿ ಹೆಚ್ಚು ಎಂದು ದೃಢಪಟ್ಟಿರುವ ಸುದ್ದಿ!

ಹೌದು, ಕೊನೆಗೂ, ಸಾರ್ವತ್ರಿಕ ಚುನಾವಣೆಗಳ ಹಿಂದಿನ ನಾಲ್ಕು ತಿಂಗಳು ಮುಚ್ಚಿಟ್ಟ ನಿರುದ್ಯೋಗ ವರದಿಯನ್ನು ಮೋದಿ 2.0 ಸರಕಾರ ಪ್ರಕಟ ಪಡಿಸಿದೆ. ಇನ್ನೇನೂ ಭಯವಿಲ್ಲವಲ್ಲ ಎಂದಿರಬೇಕು. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ(ಎನ್‌ಎಸ್‌ಎಸ್‌ಒ) 2017–18ರಲ್ಲಿ ಈ ಸರ್ವೆ ನಡೆಸಿ ವರದಿಯನ್ನು ಸರಕಾರಕ್ಕೆ ಸಲ್ಲಿಸಿತ್ತು. ಆದರೆ ಸರಕಾರ ಅದನ್ನು ಬಿಡುಗಡೆ ಮಾಡಲಿಲ್ಲ. ಅದಿನ್ನೂ ಕರಡು ಅಷ್ಟೇ, ಅದನ್ನು ಇನ್ನು ಪರಿಶೀಲಿಸಬೇಕಷ್ಟೇ ಎಂದು ಸಬೂಬು ಕೊಟ್ಟಿತು. ಕೆಲವು ಮಂತ್ರಿಗಳಂತೂ ಆ ವರದಿ ಸರಿಯಿಲ್ಲ ಎಂದರು. ಇದನ್ನು ವಿರೋಧಿಸಿ ರಾಷ್ಟ್ರೀಯ ಸಾಂಖ್ಯಿಕ ಆಯೋಗ(ಎನ್‌ಎಸ್‌ಸಿ)ದ ಇಬ್ಬರು ಹಿರಿಯ ಪರಿಣಿತರು ರಾಜೀನಾಮೆ ಕೊಟ್ಟರು. ಈ ನಡುವೆ ಈ ವರದಿಯ ಪ್ರಕಾರ ನಿರುದ್ಯೋಗ ದರ 6.1% ಕ್ಕೇರಿದೆ, ಇದು ಕಳೆದ 45 ವರ್ಷಗಳಲ್ಲೇ ಅತೀ ಹೆಚ್ಚು ಎಂಬ ಮುಖ್ಯಾಂಶ ಜನವರಿ ತಿಂಗಳಲ್ಲೇ ಮಾಧ್ಯಮಗಳಲ್ಲಿ ಪ್ರಕಟವಾಯಿತು. ಇದು ನೋಟುರದ್ಧತಿ ಉದ್ಯೋಗಾವಕಾಶಗಳ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಬಿಂಬಿಸುವ ವರದಿಯೂ ಆಗಿದ್ದರಿಂದ ಮೋದಿ 1.0 ಸರಕಾರ ಈ ಬಗ್ಗೆ ಚುನಾವಣಾ ಪ್ರಚಾರದ ವೇಳೆಯಲ್ಲಿ ಚರ್ಚೆಯಾಗದಂತೆ ಕಾರ್ಪೊರೇಟ್‌ಗಳ ಮಾಧ್ಯಮಗಳ ಸಕ್ರಿಯ ನೆರವಿನಿಂದ ಸರ್ವಪ್ರಯತ್ನ ನಡೆಸಿತು, ಜನಗಳ ಗಮನವನ್ನು ಬದುಕಿನ ಈ ಗಹನವಾದ ಪ್ರಶ್ನೆಯಿಂದ ಬೇರೆಡೆಗೆ ತಿರುಗಿಸುವಲ್ಲಿ ಯಶಸ್ವಿಯಾಗಿರುವುದು ಈಗ ತುಸುವಷ್ಟೇ ಹಳೆಯದಾಗಿರುವ ಸುದ್ದಿ.

ಈಗ ಈ ಹಿಂದೆ ಕರಡು, ಸರಿಯಿಲ್ಲ ಎಂದಿದ್ದ ವರದಿಯನ್ನೇ ಯಾವುದೇ ಬದಲಾವಣೆಯಿಲ್ಲದೆ ಪ್ರಕಟಿಸಲಾಗಿದೆ. ಆದರೆ ಇದನ್ನು ಹಿಂದಿನ ನಿರುದ್ಯೋಗ ವರದಿಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ, ಏಕೆಂದರೆ ಈ ಸರ್ವೆಯಲ್ಲಿ ಹಿಂದಿನ ಸರ್ವೆಗಳಿಗಿಂತ ಭಿನ್ನವಾದ ಮಾದರಿಗಳನ್ನು ಅನುಸರಿಸಲಾಗಿದೆ ಎಂದು ಹಣಕಾಸು ಮಂತ್ರಾಲಯ ಒತ್ತಿ–ಒತ್ತಿ ಹೇಳಿದೆ. ಇದರ ಆಧಾರದಲ್ಲಿ "ನಿರುದ್ಯೋಗ ಕಳೆದ 45 ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಮಟ್ಟ ತಲುಪಿದೆ ಎಂಬುದಕ್ಕಿಂತ ಹೆಚ್ಚು ಸತ್ಯದೂರವಾದ ಮಾತು ಬೇರೆ ಇರಲಿಕ್ಕಿಲ್ಲ" ಎಂದು ಹಣಕಾಸು ಮಂತ್ರಾಲಯದ ಹೇಳಿಕೆ ತಿಳಿಸಿದೆ.

ಆದರೆ ಇದು ಖಂಡಿತಾ ನಿಜವಲ್ಲ ಎಂದು ಪರಿಣಿತರು ಹೇಳುತ್ತಿದ್ದಾರೆ. ಐದು ವರ್ಷಕ್ಕೊಮ್ಮೆ ನಡೆಸುತ್ತಿದ್ದ ಸ್ಯಾಂಪಲ್ ಸರ್ವೆಯನ್ನು ವಾರ್ಷಿಕವಾಗಿ ಮಾಡಬೇಕು ಎಂದು ನಿರ್ಧರಿಸಿದಾಗ ರಾಷ್ಟ್ರೀಯ ಸಾಂಖ್ಯಿಕ ಆಯೋಗ ಇದು ಹಿಂದಿನ ಎಲ್ಲ ಪಂಚವಾರ್ಷಿಕ ಸರ್ವೆಗಳೊಂದಿಗೆ ಹೋಲಿಸಲಾಗುವಂತಿರಬೇಕು ಎಂಬ ಮೂಲ ಸೂತ್ರವನ್ನು ಅಂಗೀಕರಿಸಿತ್ತು ಎಂದು ದೇಶದ ನಿವೃತ್ತ ಮುಖ್ಯ ಸಂಖ್ಯಾಶಾಸ್ತ್ರಜ್ಞ ಪ್ರೊಣಬ್ ಸೆನ್ ಹೇಳಿದ್ದಾರೆ(ದಿ ವೈರ್, ಜೂನ್ 6). ನಿಜ, ಸರ್ವೆಯ ಮಾದರಿಯನ್ನು ಬದಲಿಸಲಾಗಿತ್ತು, ಆದರೆ ಅದು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಅಂದಾಜುಗಳನ್ನು ಹೋಲಿಸಲು ಯಾವ ರೀತಿಯಲ್ಲೂ ಅಡ್ಡಿಯಾಗುವಂತದ್ದಲ್ಲ. ಆದ್ದರಿಂದ ರಾಷ್ಟ್ರೀಯ ನಿರುದ್ಯೋಗ ದರ 6.1%, ಇದು ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚು ಎಂದು ಹೇಳಿರುವುದು ಖಂಡಿತಾ ಸರಿಯಾಗಿದೆ.

"ವರದಿಯನ್ನು ಬಚ್ಚಿಡಲಾಯಿತು, ನಂತರ ಮಂತ್ರಿಗಳು ಅದರಲ್ಲಿನ ಮಾಹಿತಿ ತಪ್ಪಾಗಿದೆ ಎಂದರು. ಅದು ಜನಗಳನ್ನು ಮೋಸ ಮಾಡಲು ಎಂಬುದು ಸ್ಪಷ್ಟವಾಗಿತ್ತು. ಇದರಿಂದಾಗಿ ಸತ್ಯವನ್ನು ಪ್ರಕಟಪಡಿಸಬೇಕು ಎಂದು ಬಯಸಿದವರು ರಾಜೀನಾಮೆ ನೀಡುವಂತಾಯಿತು. ನಿರುದ್ಯೋಗ 45 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ಮಟ್ಟದಲ್ಲಿದೆ. ಈಗ (ಸರಕಾರದಿಂದ) ಇದಕ್ಕೆ ಜವಾಬುದಾರಿಕೆಯನ್ನಂತೂ ನಿರೀಕ್ಷಿಸುವಂತಿಲ್ಲ. ಆದರೆ ಈ ಸರಕಾರ ಒಂದು ಬೇಷರತ್ ಕ್ಷಮೆಯನ್ನಾದರೂ ಯಾಚಿಸುತ್ತದೆಯೇ?" ಎಂದು ಈ ಕುರಿತು ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕೇಳಿದ್ದಾರೆ.

ಕ್ಷಮೆ ಕೇಳುವ ಬದಲು ಹಣಕಾಸು ಮಂತ್ರಾಲಯ, ಮೇಲೆ ಹೇಳಿದಂತೆ, ಇದನ್ನು ಹಿಂದಿನ ನಿರುದ್ಯೋಗ ಮಾಹಿತಿಗಳೊಂದಿಗೆ ಹೋಲಿಸುವುದು ತಪ್ಪಾಗುತ್ತದೆ ಎಂದು ಇನ್ನೂ ದಾರಿ ತಪ್ಪಿಸಲು ಪ್ರಯತ್ನಿಸಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಪ್ರಧಾನಿಗಳು ಈ ಬಾರಿಯ ತಮ್ಮ ಭಾರೀ ವಿಜಯದ ನಂತರ ತಾನು ದುರ್ಭಾವನೆಯಿಂದ ಏನನ್ನೂ ಮಾಡುವುದಿಲ್ಲ ಎಂದು ಒಂದು ವಾರದ ಹಿಂದೆಯಷ್ಟೇ ಪ್ರತಿಜ್ಞೆ ಮಾಡಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಅದೇನೇ ಇರಲಿ, ವಾಸ್ತವವಾಗಿ, ನಿರುದ್ಯೋಗ ದರ ಇದಕ್ಕಿಂತ ಕಡಿಮೆಯಂತೂ ಇಲ್ಲ ಎಂಬುದನ್ನು ಇದೇ ಮಾದರಿಯ ಸರ್ವೆಯ ಆಧಾರದಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಸಿಎಂಐಇ ಸರ್ವೆ ಸ್ಪಷ್ಟವಾಗಿ ತೋರಿಸಿದೆ.

ಅದು ನೀಡಿರುವ ಮಾಹಿತಿ ಹೀಗಿದೆ:

ವರ್ಷ	2017	2018	2019
ನಿರುದ್ಯೋಗಿಗಳು ಸಂಖ್ಯೆ(ಕೋಟಿಗಳಲ್ಲಿ)	3.36	3.44	4.17
% ವಾರು	**7.66**	**7.91**	**9.3**
ಪದವೀಧರ ನಿರುದ್ಯೋಗಿಗಳು ಸಂಖ್ಯೆ(ಲಕ್ಷಗಳಲ್ಲಿ)	83.7	93.8	111.3
% ವಾರು	**14**	**15**	**17**

ಇದರ ಪ್ರಕಾರ

* 2017ರಲ್ಲಿ ನಿರುದ್ಯೋಗ ದರ 7.66% ಇತ್ತು. ಎಪ್ರಿಲ್ 2019ರಲ್ಲಿ ಇದು 9.3%ಕ್ಕೇರಿದೆ.
* ಪದವೀಧರರಲ್ಲಿ ನಿರುದ್ಯೋಗದ ಪ್ರಮಾಣ 14%ದಿಂದ 17%ಕ್ಕೇರಿದೆ.
* ಎಪ್ರಿಲ್ 2019ರಲ್ಲಿ ಉದ್ಯೋಗ ಬಯಸುತ್ತಿರುವವರ, ಆದರೆ ಸಿಕ್ಕಿರದವರ ಸಂಖ್ಯೆ 4.17 ಕೋಟಿ, ಇವರಲ್ಲಿ 1.11 ಕೋಟಿ ಪದವೀಧರರು.
* ಜನವರಿ–ಎಪ್ರಿಲ್ 2017ಕ್ಕೆ ಹೋಲಿಸಿದರೆ, ಜನವರಿ–ಎಪ್ರಿಲ್ 2019ರಲ್ಲಿ ನಿರುದ್ಯೋಗ 24%ದಷ್ಟು ಹೆಚ್ಚಿದೆ.
* ಮಹಿಳೆಯರಲ್ಲಿ ನಿರುದ್ಯೋಗದ ಪ್ರಮಾಣ (%) ಪುರುಷರಿಗಿಂತ ಬಹಳ ಹೆಚ್ಚು.

ವರ್ಷ	2017	2018	2019
ಮಹಿಳೆಯರು	**23.83%**	**22.87%**	**25.73%**
ಪುರುಷರು	4.77%	5.53&	6.8%

ಎರಡನೇ ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ದಿನವೇ ಕಾರ್ಮಿಕ ಮಂತ್ರಾಲಯ ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರವೂ ನಗರದ ಯುವಜನರಲ್ಲಿ ನಿರುದ್ಯೋಗ ಪ್ರಮಾಣ 7.8%, ಗ್ರಾಮೀಣ ಯುವಜನರಲ್ಲಿ 5.3%, ಇದೂ ಕಳೆದ ನಾಲ್ಕು ದಶಕಗಳಲ್ಲೇ ಅತಿ ಹೆಚ್ಚಿನ ಪ್ರಮಾಣ.

ಆ ದಿನವೇ ಪ್ರಕಟವಾದ ಇನ್ನೊಂದು ಸಂಗತಿಯೆಂದರೆ, ಜಿಡಿಪಿ ಬೆಳವಣಿಗೆ ದರ ಜನವರಿ ಮಾರ್ಚ್ 2019ರಲ್ಲಿ 5.8%ಕ್ಕೆ ಇಳಿದಿದೆ, ಇದು ಕಳೆದ ಐದು ವರ್ಷಗಳಲ್ಲೇ ಅತಿ ಕಡಿಮೆ ಎಂದು ಹೇಳಲಾಗಿದೆ.

ಇದರಿಂದ ಎಚ್ಚೆತ್ತಿರುವ ಸರಕಾರ ಈಗ ಬೆಳವಣಿಗೆ ಮತ್ತು ಹೂಡಿಕೆ ಕುರಿತಂತೆ ಐವರು ಮಂತ್ರಿಗಳಿರುವ ಒಂದು ಸಂಪುಟ ಸಮಿತಿಯನ್ನೂ, ನಿರುದ್ಯೋಗ ಕುರಿತಂತೆ, ಇನ್ನೂ ದೊಡ್ಡದಾದ, 10 ಮಂತ್ರಿಗಳಿರುವ ಸಂಪುಟ ಸಮಿತಿಯನ್ನು ರಚಿಸಿದೆಯಂತೆ.



'ನಯಾಭಾರತ್' ಸಂಪುಟ: ಕೋಟ್ಯಾಧೀಶ್ವರರ ಪ್ರಮಾಣ 90% ಕ್ರಿಮಿನಲ್ ಕೇಸ್‌ಗಳಿರುವವರ ಪ್ರಮಾಣ 31%

ನರೇಂದ್ರ ಮೋದಿಯವರ ನೇತೃತ್ವದ ಎರಡನೇ ಸರಕಾರದ ಸಚಿವ ಸಂಪುಟ ರಚನೆಗೊಂಡಿದೆ. ಇದರಲ್ಲಿ 58 ಮಂತ್ರಿಗಳಿದ್ದಾರೆ. ಅಸೋಸಿಯೇಷನ್ ಫಾರ್ ಡೆಮಾಕ್ರಸಿ(ಎಡಿಆರ್) ಈ ಮಂತ್ರಿಗಳೇ ನಾಮಪತ್ರ ಸಲ್ಲಿಸುವಾಗ ಕೊಟ್ಟಿರುವ ಮಾಹಿತಿಗಳ ಆಧಾರದಲ್ಲಿ ಹಲವು ಆಸಕ್ತಿದಾಯಕ ಮಾಹಿತಿಗಳನ್ನು ಕಲೆ ಹಾಕಿದೆ. ಇದರ ಪ್ರಕಾರ

- 90% ಮಂತ್ರಿಗಳು ಕೋಟ್ಯಾಧೀಶ್ವರರು. ಸರಾಸರಿ ಆದಾಯ 14.4 ಕೋಟಿ ರೂ. ಅಕಾಲಿ ದಳದ ಹರ್‌ಸಿಮ್ರತ್ ಕೌಲ್ ಬಾದಲ್ ಅತಿ ಶ್ರೀಮಂತ ಮಂತ್ರಿ–ಇವರ ಆದಾಯ 217 ಕೋಟಿ ರೂ. ನಂತರದ ಸ್ಥಾನಗಳು ಪೀಯೂಷ್ ಗೋಯಲ್ (95 ಕೋಟಿ), ರಾವ್ ಇಂದರ್ಜಿತ್ ಸಿಂಗ್ (42 ಕೋಟಿ) ಮತ್ತು ಅಮಿತ್ ಷಾ (40 ಕೋಟಿ)
- 22 ಮಂತ್ರಿಗಳ ಮೇಲೆ ಈಗಲೂ ಕ್ರಿಮಿನಲ್ ಕೇಸ್‌ಗಳಿವೆ. 16 ಮಂತ್ರಿಗಳ ಮೇಲಂತೂ ಗಂಭೀರ ಕೇಸುಗಳಿವೆ. ಮಹಾರಾಷ್ಟ್ರದ ಒಬ್ಬ ಸದಸ್ಯರ ಮೇಲೆ ಕೊಲೆ ಪ್ರಯತ್ನದ ಕೇಸು ಕೂಡ ಇದೆ.
- **ಆರು ಮಂತ್ರಿಗಳ ಮೇಲೆ ಐಪಿಸಿ ಸೆಕ್ಷನ್ 153 ಎ ಮತ್ತು 295 ಎ ಅಡಿಯಲ್ಲಿ, ಅಂದರೆ ಕೋಮು ಸೌಹಾರ್ದವನ್ನು ಕೆಡಿಸಿದ್ದಾರೆಂಬ ಕೇಸುಗಳಿವೆ. ಇವರಲ್ಲಿ ಹೊಸ ಗೃಹಮಂತ್ರಿಗಳೂ ಸೇರಿದ್ದಾರೆ!**
- ಮೂವರು ಮಂತ್ರಿಗಳ ಮೇಲೆ ಚುನಾವಣಾ ಉಲ್ಲಂಘನೆಗಳ ಕೇಸುಗಳಿವೆ.
- ಸಾರ್ವಜನಿಕ ಸೇವಕರು ಅಂದರೆ ಸರಕಾರೀ ಕರ್ತವ್ಯ ನಿರ್ವಹಿಸುವವರ ಕೆಲಸಕ್ಕೆ ತಡೆಯೊಡ್ಡಿದ್ದಾರೆ, ಬೆದರಿಸಿದ್ದಾರೆ ಎಂಬ ಕೇಸುಗಳು ಗೃಹಮಂತ್ರಿಗಳೂ ಸೇರಿದಂತೆ ಹಲವು ಮಂತ್ರಿಗಳ ಮೇಲಿವೆ. ಕೆಲವರ ಮೇಲೆ ಗಲಭೆ ಎಬ್ಬಿಸಿರುವ, ಗಾಯಗೊಳಿಸಿರುವ ಕೇಸುಗಳೂ ಇವೆ.

ನಯಾಭಾರತ್ ನಿರ್ಮಿಸುವ ಚುನಾವಣೆಯಲ್ಲಿ ಹರಿದ ಹಣ 60,000 ಕೋಟಿ ರೂ.

2019ರ ಸಾರ್ವತ್ರಿಕ ಚುನಾವಣೆ ಇದುವರೆಗಿನ ಅತ್ಯಂತ ವೆಚ್ಚದಾಯಕ ಚುನಾವಣೆ ಎಂದು ಜೂನ್ 2ರಂದು ಬಿಡುಗಡೆ ಮಾಡಿರುವ ಒಂದು ವರದಿ ಹೇಳುತ್ತದೆ. ಒಂದು ಪ್ರಮುಖ ಸಂಶೋಧನಾ ಸಂಸ್ಥೆಯಾದ 'ಸೆಂಟರ್ ಫಾರ್ ಮೀಡಿಯ ಸ್ಟಡೀಸ್(ಸಿಎಂಎಸ್– ಮಾಧ್ಯಮ ಅಧ್ಯಯನ ಕೇಂದ್ರ) ತಯಾರಿಸಿರುವ ವರದಿಯ ಪ್ರಕಾರ ಈ ಚುನಾವಣೆಗಳಲ್ಲಿ ಸುಮಾರು 60,000 ಕೋಟಿ ರೂ. ವೆಚ್ಚ ಮಾಡಲಾಗಿದೆ. ಕಳೆದ ಚುನಾವಣೆಯಲ್ಲಿ ಈ ಸಂಸ್ಥೆ ಲೆಕ್ಕ ಹಾಕಿದಂತೆ, ಆಗಿದ್ದ ವೆಚ್ಚ ಸುಮಾರು 30,000 ಕೋಟಿ ರೂ. ಅಂದರೆ ಈಗ ದುಪ್ಪಟ್ಟಾಗಿದೆ. 1999ರಲ್ಲಿ 10,000 ಕೋಟಿ ಇದ್ದದ್ದು, 2004 ರಲ್ಲಿ 14,000ಕ್ಕೆ, 2009ರಲ್ಲಿ 20,000ಕ್ಕೆ ಏರಿತ್ತು. 2014ರಲ್ಲಿ ಅಚ್ಛೇ ದಿನ್ ನಿರ್ಮಿಸ ಬೇಕೆಂದಿದ್ದ ಚುನಾವಣೆಯಲ್ಲಿ ಒಂದೂವರೆ ಪಟ್ಟಾಯಿತು.

ದೇಶದಲ್ಲಿ ಭ್ರಷ್ಟಾಚಾರದ ಪ್ರಮಾಣವನ್ನು ಅಂದಾಜು ಮಾಡಲು ಈ ಸಂಸ್ಥೆ ವಿಕಾಸಗೊಳಿಸಿದ ವಿಧಾನವನ್ನು ಈ ಅಂದಾಜಿಗೂ ಬಳಸಲಾಗಿದೆ ಎಂದು ಅದು ಹೇಳಿದೆ. ಇದರಲ್ಲಿ, ನಿರೀಕ್ಷಿಸಿದಂತೆ, ಆಳುವ ಪಕ್ಷದ್ದೇ ಸಿಂಹಪಾಲು, ಅಂದರೆ 45%. ಎರಡು ದಶಕಗಳ ಹಿಂದೆ, 1998ರಲ್ಲಿ ಅದು ಮಾಡಿದ್ದ ಖರ್ಚಿನ ಪ್ರಮಾಣ 20%. ಈ ಬಾರಿ ಕಾಂಗ್ರೆಸಿನ ಪಾಲು 15ರಿಂದ 20ಶೇ.ಕ್ಕೆ ಇಳಿದಿದೆ. ಹತ್ತು ವರ್ಷಗಳ ಹಿಂದೆ 2009ರಲ್ಲಿ ಅದು 40% ದಷ್ಟು ಖರ್ಚು ಮಾಡಿತ್ತು, ಅಧಿಕಾರ ಪಡೆದಿತ್ತು.

ಈ ಸಂದರ್ಭದಲ್ಲಿ ಚುನಾವಣಾ ಸುಧಾರಣೆಯಲ್ಲಿ ಚುನಾವಣಾ ವೆಚ್ಚ ಕುರಿತಂತೆ ನಡೆದ ದುಂಡುಮೇಜಿನ ಚರ್ಚೆಯಲ್ಲಿ ಭಾಗವಹಿಸುತ್ತ ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿ ಯವರು ಮಾತನಾಡುತ್ತ **ಈ ಚುನಾವಣೆಗಳಲ್ಲಿ ಹಣ ಬಲ ಹೊಸ ಆಯಾಮಗಳನ್ನು ಪಡೆದಿದೆ ಎಂದು ಹೇಳಿದರು, ಮೊದಲ ಮೋದಿ ಸರಕಾರ ತಂದ ಚುನಾವಣಾ ಬಾಂಡು ಪದ್ಧತಿ ಒಂದು 'ಪಕ್ಕಾ ಅನಾಹುತ'** ಎಂದು ವರ್ಣಿಸಿದರು.



ರಮೇಶ್ ಪೋಖ್ರಿಯಲ್ 'ನಿಶಾಂಕ್' ದೇಶದ ಹೊಸ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿ, ಸರಳ ಭಾಷೆಯಲ್ಲಿ ದೇಶದ ಭವಿಷ್ಯವನ್ನು ನಿರ್ಮಿಸುವ ಶಿಕ್ಷಣದ ಮಂತ್ರಿ. ಉತ್ತರಾಖಂಡ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ಎಂಬುದೇನೂ ಇವರ ಹಿರಿಮೆಯಲ್ಲ. ಅದಕ್ಕಿಂತಲೂ ಹೆಚ್ಚಾಗಿ "ಜ್ಯೋತಿಷ್ಯಶಾಸ್ತ್ರ ಸಮಸ್ತ ಜಗತ್ತಿನ ನಂಬರ್ ಒನ್ ವಿಜ್ಞಾನ. ಬೇರೆಲ್ಲಾ ವಿಜ್ಞಾನ ಧಾರೆಗಳು ಇದರ ಎದುರು ಕುಬ್ಜ" ಎಂಬ ನುಡಿಮುತ್ತಿಗೆ ಖ್ಯಾತರಾದವರು ಇವರು. ಕಣಾದ ಮುನಿ ಲಕ್ಷಾಂತರ ವರ್ಷಗಳ ಹಿಂದೆಯೇ ಪರಮಾಣು ಪರೀಕ್ಷಣೆ ನಡೆಸಿದವರು ಎಂಬುದು ಅವರ ಮತ್ತೊಂದು ಉದ್ಗಾರ. ಹಿಂದಿನ ಒಬ್ಬ 'ಅಚ್ಛೇ ದಿನ್' ಮಂತ್ರಿಯಂತೆ ಇವರ ಡಿಗ್ರಿಗಳ ಬಗ್ಗೆಯೂ ಪ್ರಶ್ನೆಗಳಿವೆಯಂತೆ. ಇವರು ಶ್ರೀಲಂಕಾದ ಅಂತರ್ರಾಷ್ಟ್ರೀಯ ವಿಶ್ವವಿದ್ಯಾಲಯದಿಂದ ಎರಡು ಗೌರವ ಡಾಕ್ಟರೇಟುಗಳನ್ನು ಪಡೆದವರು. ಈ ವಿಶ್ವವಿದ್ಯಾಲಯ ಶ್ರೀಲಂಕಾದ ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾನ್ಯತೆ ಪಡೆದಿಲ್ಲ ಎನ್ನಲಾಗಿದೆ.

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಬಲಪಂಥದತ್ತ ಜಾಗತಿಕ ಪಲ್ಲಟದ ಈ ಸಮಯ..



ಜಾಗತಿಕ ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ ಮತ್ತು ಅದರ ಪರಿಣಾಮವಾಗಿ ನಿರುದ್ಯೋಗವು ಉಲ್ಬಣಗೊಂಡ ಪರಿಸ್ಥಿತಿಯಲ್ಲಿ ಜಗತ್ತಿನಾದ್ಯಂತ ಬಲ ಪಂಥದತ್ತ ಪಲ್ಲಟ ಕಾಣುತ್ತಿದೆ. ಬಲಪಂಥದ ಬೆಳವಣಿಗೆಗೆ ಅದು ಆರ್ಥಿಕ ಬಿಕ್ಕಟ್ಟು ಮತ್ತು ನಿರುದ್ಯೋಗವನ್ನು ಗಮನಕ್ಕೆ ತಗೊಂಡಿರುವುದು ಮತ್ತು ಅಧಿಕಾರಸ್ಥರ ಪರವಾದ ರಾಜಕೀಯ ಪಕ್ಷಗಳು ಗಮನಕ್ಕೆ ತಗೊಂಡಿರದಿರುವುದೇ ಕಾರಣ ಎನ್ನಬಹುದು. ಭಾರತದಲ್ಲಿಯೂ ಸಹ "ಅಭಿವೃದ್ಧಿ" ಅಜೆಂಡಾದ ಮೂಲಕವೇ 2014ರಲ್ಲಿ ಮೋದಿ ಅಧಿಕಾರ ಹಿಡಿದದ್ದು. ನವ ಉದಾರವಾದವನ್ನು ಪ್ರತಿನಿಧಿಸುವ ಕಾಂಗ್ರೆಸ್‌ನಂತಹ ಒಂದು ಪಕ್ಷದಿಂದ ಬಿಜೆಪಿಯಂತಹ ಒಂದು ಬಲ ಪಂಥೀಯ ಪಕ್ಷದತ್ತ ಪಲ್ಲಟವು ಸಾಧ್ಯವಾಗಿರುವುದು ನವ-ಉದಾರವಾದದ ಬಿಕ್ಕಟ್ಟಿನಿಂದಾಗಿಯೇ ಎಂಬ ಸಂಗತಿಯಂತೂ ಸ್ಪಷ್ಟ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಮೋದಿಯವರ ಪುನರಾಯ್ಕೆಯು, ಜಗತ್ತು ಬಲ ಪಂಥಾಭಿಮುಖವಾಗಿ ಸರಿಯುತ್ತಿರುವ ವಿದ್ಯಮಾನದ ಒಂದು ಭಾಗವಾಗಿದೆ ಎಂಬ ಆಯಾಮವನ್ನು ನಾವು ಗಮನಿಸುವುದೇ ಇಲ್ಲ. ಹಾಗಾಗಿ, ಮೋದಿಯವರ ಪುನರಾಯ್ಕೆಯ ಬಗ್ಗೆ ನಾವು ಚರ್ಚಿಸುವಾಗ, ಇಡೀ ಜಗತ್ತೇ ಬಲಕ್ಕೆ ವಾಲುತ್ತಿದೆ ಎಂಬ ಅಂಶದ ಪ್ರಸ್ತಾಪ ನಮ್ಮ ಚರ್ಚೆಯಲ್ಲಿ ಬಹುತೇಕ ಇರುವುದಿಲ್ಲ. ಇಸ್ರೇಲ್‌ನಲ್ಲಿ ನೆತನ್ಯಾಹು ಪುನರಾಯ್ಕೆಗೊಂಡಿದ್ದಾರೆ. ಟರ್ಕಿಯಲ್ಲಿ ಎರ್ಡೋಗಾನ್ ಪ್ರಚಂಡ ಬಹುಮತದಿಂದ ಪುನರಾಯ್ಕೆಯಾಗಿದ್ದಾರೆ. ಚುನಾವಣೆಗೆ ಮುನ್ನ ಈ ಪಕ್ಷವು ಪುನರಾಯ್ಕೆ ಆಗುವುದೇ ಇಲ್ಲ ಎನ್ನುವ ಭವಿಷ್ಯ ನುಡಿಯನ್ನು ಸುಳ್ಳಾಗಿಸಿ, ಆಸ್ಟ್ರೇಲಿಯಾದಲ್ಲಿ ಕನ್ಸರ್ವೇಟಿವ್ ಪಕ್ಷವು ಅಧಿಕಾರಕ್ಕೆ ಮರಳಿದೆ. ಎಡ ಪಂಥವು ಹಲವು ಹತ್ತು ದೇಶಗಳಲ್ಲಿ ಮರು ಹುಟ್ಟು ಪಡೆಯುವಂತಹ ಸ್ಫೂರ್ತಿ ತುಂಬುವ ಭರವಸೆ ಇತರರಲ್ಲಿ ಮೂಡಲು ಕಾರಣವಾಗಿದ್ದ ಎಡ ಪಕ್ಷಗಳು ಇತ್ತೀಚಿನವರೆಗೆ ಅಧಿಕಾರದಲ್ಲಿದ್ದ ಲ್ಯಾಟಿನ್ ಅಮೇರಿಕಾದಲ್ಲಿ, ಒಂದರ ನಂತರ ಮತ್ತೊಂದು ದೇಶದಲ್ಲಿ ಬಲ ಪಂಥೀಯ ಸರ್ಕಾರಗಳು ಅಧಿಕಾರಕ್ಕೆ ಬಂದಿವೆ. ಇಂತಹ ಬದಲಾವಣೆಗಳ ಪೈಕಿ, ಅತ್ಯಂತ ಮಹತ್ವದ್ದು ಮತ್ತು ಅದೇ ಸಮಯದಲ್ಲಿ ಕುಖ್ಯಾತ ಎನ್ನಬಹುದಾದ ಬದಲಾವಣೆ ಬ್ರೆಜಿಲ್‌ನಲ್ಲಿ ಆಗಿದೆ. ಅಲ್ಲಿ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಜೇರ್ ಬೊಲ್ಸೊನಾರೊ ಕೆಲ ವರ್ಷಗಳ ಹಿಂದೆ ಬ್ರೆಜಿಲ್‌ನಲ್ಲಿ ಅಧಿಕಾರದಲ್ಲಿದ್ದ ಮಿಲಿಟರಿ ಆಡಳಿತವನ್ನು ಹಾಡಿ ಹೊಗಳಿರುವುದೇ ಅಲ್ಲದೆ, ಮಿಲಿಟರಿಯು ಇನ್ನೂ ಹೆಚ್ಚು ಮಂದಿಯನ್ನು ಕೊಂದು ಹಾಕಿದ್ದರೆ ಒಳ್ಳೆಯದಿತ್ತು ಎಂದು ಹೇಳಿರುವುದು ದಾಖಲಾಗಿದೆ. ಈ ಎಲ್ಲವಕ್ಕೂ ಕಳಶವಿಟ್ಟಂತೆ, ಕಳೆದ ಭಾನುವಾರ ಯೂರೋಪಿಯನ್ ಒಕ್ಕೂಟದ 28 ಸದಸ್ಯ ದೇಶಗಳಲ್ಲಿ ಯೂರೊ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳ ಫಲಿತಾಂಶವು ಯೂರೋಪಿನಲ್ಲಿ ಗಮನಾರ್ಹ ಸಂಖ್ಯೆಯ ಜನತೆಯ ಒಲವು ಬಲ ಪಂಥದತ್ತ ಸರಿಯುತ್ತಿರುವ ಅಂಶವನ್ನು ಸಾರುತ್ತದೆ.

ಫ್ರಾನ್ಸ್‌ನಲ್ಲಿ ಮುಂಬರುವ ಮಹಾ ಚುನಾವಣೆಯಲ್ಲಿ ಮರೀನ್ ಲೇ ಪೆನ್ ಅವರ ಉಗ್ರ ಬಲಪಂಥೀಯ ಪಕ್ಷವು, ಹಾಲಿ ಅಧ್ಯಕ್ಷ ಎಮ್ಯಾನ್ಯುಅಲ್ ಮೆಕ್ರಾನ್ ಅವರ ನಡು ಪಂಥೀಯ ಪಕ್ಷಗಳ ಮೈತ್ರಿಕೂಟವನ್ನು ಹಿಂದಿಕ್ಕಿ, ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಬಹುದೆಂದು ಈಗ ತೋರುತ್ತದೆ. ಇಟಲಿಯ ಉಪ ಪ್ರಧಾನ ಮಂತ್ರಿ ಮಾತ್ತಿಯೊ ಸಲ್ವಿನಿ ಅವರ ಉಗ್ರ ಬಲಪಂಥೀಯ ಪಕ್ಷವು ಇಟಲಿಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮುವುದಷ್ಟೇ ಅಲ್ಲದೆ, ಯೂರೊ ಪಾರ್ಲಿಮೆಂಟಿನಲ್ಲಿ ಜರ್ಮನಿಯು ಛಾನ್ಸೆಲರ್ ಅಂಜೆಲಾ ಮರ್ಕೆಲ್ ಅವರ ಪಕ್ಷವನ್ನು ಹಿಂದಿಕ್ಕಿ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ಮರ್ಕೆಲ್ ಅವರ ಪಕ್ಷವು ಐದು ವರ್ಷಗಳ ಹಿಂದಿನ ಚುನಾವಣೆಯಲ್ಲಿ ಗಳಿಸಿದ್ದಕ್ಕಿಂತ 9% ಕಡಿಮೆ ಮತಗಳಿಸಿದೆ. ಅಷ್ಟೇ ಅಲ್ಲ, ಜರ್ಮನಿಯ ಆಲ್ಟರ್‌ನೇಟೀವ್ ಫಾರ್ ಜರ್ಮನಿ ಎಂಬ ಉಗ್ರ ಬಲಪಂಥೀಯ ಪಕ್ಷವು 10.5% ಮತ ಹೆಚ್ಚಿಸಿಕೊಂಡಿದೆ. ಹಂಗೇರಿಯಲ್ಲಿ, ಅಧ್ಯಕ್ಷ ವಿಕ್ಟರ್ ಒರ್ಬಾನ್ ಅವರ ಬಲಪಂಥೀಯ ಪಕ್ಷವು ಮತ್ತೊಮ್ಮೆ ಪುನರಾಯ್ಕೆಗೊಳ್ಳುವ ಹಾದಿಯಲ್ಲಿದೆ.

ಮೋದಿಯವರ ಗೆಲುವು ದೇಶದಲ್ಲಿ ಜರುಗಿದ ಅನೇಕ ಬೆಳವಣಿಗೆಗಳಿಗೆ ಸಲ್ಲುತ್ತದೆ ಎಂಬುದು ಸ್ಪಷ್ಟವಿದ್ದರೂ ಸಹ, ಇಡೀ ವಿಶ್ವವೇ ಬಲ ಪಂಥಾಭಿಮುಖವಾಗಿ ದಾಪುಗಾಲು ಹಾಕುತ್ತಿರುವ ಈ ಸನ್ನಿವೇಶವನ್ನು ಮರೆಯಬಾರದು. ಬಲ ಪಂಥದ ಕಡೆಗೆ ಕೊಂಡೊಯ್ಯುವ ಉದ್ದೇಶಪೂರ್ವಕ ಪ್ರಯತ್ನಗಳು ಚಾಲನೆಯಲ್ಲಿರುವ ಈ ಸಂದರ್ಭದಲ್ಲಿ, ಇದು ಹೀಗೆಯೇ ಆಗುತ್ತಿರುವುದು ಏಕೆ? ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗುತ್ತದೆ. ಉದಾರ ಮನೋಭಾವದ ಬೂರ್ಜ್ವಾ ವಿಶ್ಲೇಷಕರು, ಈ ಎಲ್ಲ ದೇಶಗಳ ಪಕ್ಷಗಳು ಮತ್ತು ಚಳವಳಿಗಳ ನಡುವೆ ಗೋಚರಿಸುವ ಒಂದು ಸಮಾನ ಅಂಶವನ್ನು ಕಾಣುವುದರ ಬದಲಾಗಿ, ಈ ವಾಸ್ತವದ ಚಿತ್ರವನ್ನು ತುಂಡರಿಸಿ ವಿಶ್ಲೇಷಿಸುವ ಪ್ರವೃತ್ತಿ ಬೆಳಸಿಕೊಂಡಿದ್ದಾರೆ: ಅವರು ಯೂರೋಪ್ ದೇಶದ ರಾಜಕೀಯ ಪಕ್ಷಗಳನ್ನು ಯೂರೋಪಿಯನ್ ಒಕ್ಕೂಟ ಪರ ಮತ್ತು ಯೂರೋಪಿಯನ್ ಒಕ್ಕೂಟ ವಿರೋಧಿ, ಅಥವಾ, ವಲಸೆ-ಪರ ಅಥವಾ ವಲಸೆ-ವಿರೋಧಿ ಎಂದೇ ವಿಭಜಿಸುತ್ತಾರೆ. ಅದೇ ರೀತಿಯಲ್ಲಿ, ಬೂರ್ಜ್ವಾ ವಿಶ್ಲೇಷಕರು ಮೋದಿಯವರ ಗೆಲುವನ್ನು ಹಿಂದುತ್ವದೊಂದಿಗೆ ತಳುಕು ಹಾಕಿಕೊಂಡಿರುವ ಒಂದು ವಿದ್ಯಮಾನವಾಗಿ ನೋಡುತ್ತಾರೆಯೇ ಹೊರತು, ಯೂರೋಪಿನಲ್ಲಿ ಆಗುತ್ತಿರುವ ವಿದ್ಯಮಾನಕ್ಕೂ ಮತ್ತು ಭಾರತದ ಈ ವಿದ್ಯಮಾನಕ್ಕೂ ಒಂದಕ್ಕೊಂದು ಸಂಬಂಧವೇ ಇಲ್ಲ ಎಂಬಂತೆಯೇ ನೋಡುತ್ತಾರೆ. ಡೊನಾಲ್ಡ್ ಟ್ರಂಪ್ ಅವರ ಬಲಗೊಳ್ಳುತ್ತಿರುವ ಪುನರಾಯ್ಕೆಯನ್ನೂ ಸಹ ಈ ಬೆಳವಣಿಗೆಗಳಿಂದ ಪ್ರತ್ಯೇಕಿಸಿಯೇ ಕಾಣುತ್ತಾರೆ. ಆದರೆ, ಈ ರೀತಿ ಪ್ರತ್ಯೇಕಿಸಿ ನೋಡುವುದು ಮಾರ್ಕ್ಸ್‌ವಾದಿ ವಿಶ್ಲೇಷಣೆಗೆ ಸಲ್ಲುವಂತದ್ದಲ್ಲ. ಮಾರ್ಕ್ಸ್‌ವಾದಿ ವಿಶ್ಲೇಷಣೆ ಘಟನೆಗಳನ್ನು ಸಮಗ್ರವಾಗಿ ನೋಡುತ್ತದೆ, ಅನಾವರಣಗೊಳ್ಳುತ್ತಿರುವ ಘಟನಾವಳಿಗಳ ನಡುವೆ ಇರುವ ಸಮಾನ ರೂಪ, ಕ್ರಮ ಅಥವಾ ಏರ್ಪಾಡು ಮತ್ತು ಅದರ ವರ್ಗ ವಿನ್ಯಾಸವನ್ನು ಗುರುತಿಸುತ್ತದೆ. ಅಂತಾದರೆ, ಜಗತ್ತಿನಾದ್ಯಂತ ಬಲ ಪಂಥದತ್ತ ಸರಿಯುತ್ತಿರುವುದರ ಬಗ್ಗೆ ಮಾರ್ಕ್ಸ್‌ವಾದಿಗಳು ಏನು ಹೇಳಬಹುದು?

ಇದು ಸ್ಪಷ್ಟವಾಗಿ 2008ರಲ್ಲಿ ಆರಂಭವಾಗಿ ಇನ್ನೂ ಜಾಗತಿಕ ಅರ್ಥವ್ಯವಸ್ಥೆಯನ್ನು ಬಿಗಿದುಕೊಂಡಿರುವ ಆರ್ಥಿಕ ಬಿಕ್ಕಟ್ಟನ್ನು ವ್ಯಕ್ತಪಡಿಸುತ್ತದೆ. ಈ ಬಿಕ್ಕಟ್ಟಿನಿಂದ ಸ್ವಲ್ಪ ಚೇತರಿಕೆಯ ಲಕ್ಷಣಗಳು ಆಗೊಮ್ಮೆ ಈಗೊಮ್ಮೆ ಪ್ರಕಟಗೊಂಡಿವೆ. ಆದರೆ, ಚೇತರಿಕೆಯ ಲಕ್ಷಣಗಳು ಕಾಣಿಸಿಕೊಂಡ ಸ್ವಲ್ಪವೇ ಸಮಯದಲ್ಲಿ ಜಾಗತಿಕ ಅರ್ಥವ್ಯವಸ್ಥೆಯು ಮತ್ತೊಮ್ಮೆ ಬಿಕ್ಕಟ್ಟಿನಲ್ಲಿ ಮುಳುಗುತ್ತಿತ್ತು. ಒಂದು ಪುಟಿಯುವ ರಬ್ಬರ್ ಚೆಂಡಿನ ಉಪಮಾನವು ಜಾಗತಿಕ ಅರ್ಥವ್ಯವಸ್ಥೆಯ ಈ ಪರಿಸ್ಥಿತಿಗೆ ಸೊಗಸಾಗಿ ಹೋಲುತ್ತದೆ: ಚೆಂಡು ನೆಲದಿಂದ ಪುಟಿದ ಕೂಡಲೇ ಚೇತರಿಕೆಯ ಉತ್ಸಾಹ ಏರುತ್ತಿತ್ತು; ಪುಟಿದ ಚೆಂಡು ಮತ್ತೆ ನೆಲಕ್ಕೆ ಬಿದ್ದ ಕೂಡಲೇ ಆ ಉತ್ಸಾಹ ಇಳಿಯುತ್ತಿತ್ತು.

ಇಂತಹ ವಾದದ ಬಗ್ಗೆ ತಕರಾರು ಎತ್ತಬಹುದು. ಈ ತಕರಾರಿನ ಸಮರ್ಥನೆಯಾಗಿ ಅಮೇರಿಕಾದಲ್ಲಿ ನಿರುದ್ಯೋಗದ ದರವು ಹಿಂದಿನ ದಶಕಗಳಿಗಿಂತಲೂ ಕೆಳ ಮಟ್ಟಕ್ಕೆ ಈಗ ಇಳಿದಿದೆ ಎಂದು ಹೇಳಬಹುದು. ಆದರೆ, ಉದ್ಯೋಗದಲ್ಲಿ ಭಾಗವಹಿಸುವಿಕೆಯ ದರವು 2008ರಲ್ಲಿ ಇದ್ದದ್ದಕ್ಕಿಂತಲೂ ಕೆಳಗಿದೆ. ಉದ್ಯೋಗ ಭಾಗವಹಿಸುವಿಕೆಯ ದರವು ಈಗಲೂ 2008ರಲ್ಲಿ ಇದ್ದಷ್ಟೇ ಇದೆ ಎಂದು ಊಹಿಸಿಕೊಂಡರೆ, ಅಮೇರಿಕಾದ ಇಂದಿನ ನಿರುದ್ಯೋಗದ ದರ 8% ಆಗುತ್ತದೆ, ಅಧಿಕೃತ ಅಂಕಿಗಳು ಹೇಳುವ ಹಾಗೆ 4% ಅಲ್ಲ.

ಜಾಗತಿಕ ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ ಮತ್ತು ಅದರ ಪರಿಣಾಮವಾಗಿ ನಿರುದ್ಯೋಗವು ಉಲ್ಬಣಗೊಂಡ ಪರಿಸ್ಥಿತಿಯಲ್ಲಿ ಜಗತ್ತಿನಾದ್ಯಂತ ಬಲ ಪಂಥದತ್ತ ಪಲ್ಲಟ ಕಾಣುತ್ತಿದೆ. ಅರ್ಥವ್ಯವಸ್ಥೆಯ ಬಿಕ್ಕಟ್ಟು ಮತ್ತು ನಿರುದ್ಯೋಗದ ಪ್ರಶ್ನೆ ಬಂದಾಗ, ಉದಾರವಾದೀ ಬೂರ್ಜ್ವಾ ಪಕ್ಷಗಳು ಸಾಮಾನ್ಯವಾಗಿ ನಿರಾಕರಣೆಯ ಧೋರಣೆ ತಳೆಯುತ್ತವೆ. ನಿರುದ್ಯೋಗ ಉಂಟಾಗುವುದಕ್ಕೆ ವ್ಯವಸ್ಥೆ ಕಾರಣವಲ್ಲ; ವಲಸಿಗರೇ ಕಾರಣ; ಆದುದರಿಂದ ವಲಸೆಯನ್ನು ತಡೆಯಬೇಕು ಎಂದು ಪ್ರತಿಪಾದಿಸುವ ಬಲ ಪಂಥವು, ಕೊನೆಯ ಪಕ್ಷ, ನಿರುದ್ಯೋಗವು ಉಂಟುಮಾಡುವ ಯಾತನೆಯನ್ನು ಗುರುತಿಸುತ್ತದೆ. ಯೂರೋಪಿಯನ್ ಒಕ್ಕೂಟ ವ್ಯವಸ್ಥೆಯಲ್ಲಿ, ಅದರ ದುಡಿಮೆಗಾರರು ಒಕ್ಕೂಟದ 28 ಸದಸ್ಯ ದೇಶಗಳಲ್ಲಿ ಯಾವುದೇ ದೇಶಕ್ಕೆ ವಲಸೆ ಹೋಗುವ ಅವಕಾಶವು ಮುಕ್ತವಾಗಿರುವುದರಿಂದ, ಕೆಲವು ಬಲ ಪಂಥೀಯ ಪಕ್ಷಗಳು ಯೂರೋಪಿಯನ್ ಒಕ್ಕೂಟದ ವಿರೋಧಿಗಳೂ ಆಗಿದ್ದಾರೆ. ಆಡಳಿತದಲ್ಲಿರುವ ಮತ್ತು ಅವರಿಗೆ ವಿರೋಧವಿರುವ ಉದಾರವಾದೀ ಬೂರ್ಜ್ವಾ ಪಕ್ಷಗಳು ಬಿಕ್ಕಟ್ಟು ಇದೆಯೆನ್ನುವುದನ್ನೇ ಒಪ್ಪಿಕೊಳ್ಳದ ಪರಿಸ್ಥಿತಿಯಲ್ಲಿ ಮತ್ತು ಎಡ ಪಂಥವು ಈ ಬಿಕ್ಕಟ್ಟಿನಿಂದ ಹೊರಬರುವ ಒಂದು ಪರ್ಯಾಯ ಅಜೆಂಡಾವನ್ನು ಜನತೆಯ ಮುಂದಿಡುವಲ್ಲಿ ನಿಧಾನವಾಗಿರುವ ಪರಿಸ್ಥಿತಿಯಲ್ಲಿ, ಇಂತಹ ಪರಿಸ್ಥಿತಿ ನಿರ್ಮಾಣವಾಗುವುದನ್ನೇ ಕಾಯುತ್ತಿದ್ದ ಬಲ ಪಂಥವು ಕಿಂದರಿಜೋಗಿಯಂತೆ ರಂಗ ಪ್ರವೇಶಿಸಿ ನಿರುದ್ಯೋಗ ಪರಿಹರಿಸುವ ಕಿಂದರಿ ಬಾರಿಸಿತು. ಒಂದು ವಲಸೆ-ವಿರೋಧಿ ಅಜೆಂಡಾವನ್ನು ಜನತೆಯ ಮುಂದಿಡುವ ಮೂಲಕ ಬಲ ಪಂಥವು ತನ್ನ ಚಟುವಟಿಕೆಗಳಿಗೆ ಚಾಲನೆ ಕೊಟ್ಟಿದೆ. ಹೀಗೆ ಜಗತ್ತಿನ ಉದ್ದಗಲದಲ್ಲೂ ಅದರ ಬೆಳವಣಿಗೆಗೆ ಅದು ಬಿಕ್ಕಟ್ಟು ಮತ್ತು ನಿರುದ್ಯೋಗವನ್ನು ಗಮನಕ್ಕೆ ತಗೊಂಡಿರುವುದು ಮತ್ತು ಅಧಿಕಾರಸ್ಥರ ಪರವಾದ ರಾಜಕೀಯ ಪಕ್ಷಗಳು ಗಮನಕ್ಕೆ ತಗೊಂಡಿರದಿರುವುದೇ ಕಾರಣ ಎನ್ನಬಹುದು.

ಹಾಗಾದರೆ, ಭಾರತದಲ್ಲಿನ ಕತೆ ಈ ವಿವರಣೆಯ ಚೌಕಟ್ಟಿಗೆ ಹೊಂದಿಕೊಳ್ಳುತ್ತದೆಯೇ? ಭಾರತದಲ್ಲಿಯೂ ಸಹ "ಅಭಿವೃದ್ಧಿ" ಅಜೆಂಡಾದ ಮೂಲಕವೇ 2014ರಲ್ಲಿ ಮೋದಿ ಅಧಿಕಾರ ಹಿಡಿದದ್ದು. ಅದಕ್ಕೂ ಮುನ್ನವೇ ಯುಪಿಎ-2 (2009-14) ಅವಧಿಯಲ್ಲಿ ಆರ್ಥಿಕ ಬೆಳವಣಿಗೆ ದರ ಇಳಿಮುಖವಾಗಿತ್ತು. ಹಾಗಾಗಿ, ಪ್ರತಿಯೊಬ್ಬರ ಅದೃಷ್ಟ ಖುಲಾಯಿಸುವ ನವ ಉದಾರವಾದದ ಭರವಸೆ ಮಬ್ಬಾಗಲಾರಂಭಿಸಿತ್ತು. ಜನತೆಗೆ ಕೊಟ್ಟಿದ್ದ "ಅಭಿವೃದ್ಧಿ" ಅಥವಾ "ವಿಕಾಸ" ಭರವಸೆಯನ್ನು ಈಡೇರಿಸಲು ಮೋದಿ ಸರ್ಕಾರವು ಅಧಿಕಾರದ ಅವಧಿಯಲ್ಲಿ(2014-19) ಅಕ್ಷರಷಃ ಏನನ್ನೂ ಮಾಡಲಿಲ್ಲ. ಆ ಕಾರಣದಿಂದಾಗಿಯೇ ಈಗ ತಾನೇ ಮುಗಿದ ಚುನಾವಣೆಯಲ್ಲಿ "ಅಭಿವೃದ್ಧಿ" ಅಥವಾ "ವಿಕಾಸ"ದ ಬಗ್ಗೆ ಮೋದಿಯವರು ಒಂದೇ ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ. ಆದರೆ, "ಭಯೋತ್ಪಾದನೆ ವಿರುದ್ಧ ಹೋರಾಡುವೆ", "ರಾಷ್ಟ್ರವನ್ನು ರಕ್ಷಿಸುವೆ", "ಪಾಕಿಸ್ತಾನಕ್ಕೆ ಪಾಠ ಕಲಿಸುವೆ" ಮತ್ತು "ಹಿಂದುತ್ವ ಪ್ರತಿಷ್ಠಾಪನೆ"ಯಂತಹ ಮಾತುಗಳ ಮೂಲಕ ಇಡೀ ಚರ್ಚೆಯ ದಿಕ್ಕನ್ನೇ ಮೋದಿ ಬದಲಿಸಿದರು. ಈ ತಂತ್ರಗಾರಿಕೆಯ ಮಾತುಗಳ ಮೂಲಕ, ಅಧಿಕಾರದ ಅವಧಿಯಲ್ಲಿ "ಅಭಿವೃದ್ಧಿ" ಸಾಧಿಸಲು ತಮ್ಮ ಸರ್ಕಾರ ಮಾಡಿದ್ದೇನು ಎಂಬುದರ ಕುರಿತು ಎದುರಾಗುವ ಇರುಸು ಮುರುಸಿನ ಪ್ರಶ್ನೆಗಳನ್ನು ನಿರಾಯಾಸವಾಗಿ ತಪ್ಪಿಸಿಕೊಂಡರು. ಅದರಿಂದ ಅವರಿಗೆ ಭರ್ಜರಿ ಅನುಕೂಲವೇ ಆಯ್ತು.

ನವ ಉದಾರವಾದವನ್ನು ಪ್ರತಿನಿಧಿಸುವ ಕಾಂಗ್ರೆಸ್‌ನಂತಹ ಒಂದು ಪಕ್ಷದಿಂದ ಬಿಜೆಪಿಯಂತಹ ಒಂದು ಬಲ ಪಂಥೀಯ ಪಕ್ಷದತ್ತ ಪಲ್ಲಟವು ಸಾಧ್ಯವಾಗಿರುವುದು ನವ ಉದಾರವಾದದ ಬಿಕ್ಕಟ್ಟಿನಿಂದಾಗಿಯೇ ಎಂಬ ಸಂಗತಿಯಂತೂ ಉಳಿದೇ ಉಳಿಯುತ್ತದೆ. ನವ ಉದಾರವಾದವು "ಅಭಿವೃದ್ಧಿ" ತರುತ್ತದೆ ಎಂಬುದಾಗಿ ಸೋಗುಹಾಕುವುದು ಕಾಂಗ್ರೆಸ್ ಪಕ್ಷಕ್ಕೆ ಇನ್ನೆಷ್ಟೂ ಸಾಧ್ಯವಿರಲಿಲ್ಲ. ಬಿಜೆಪಿಯಂತೂ "ಅಭಿವೃದ್ಧಿ"ಯ ಬಗ್ಗೆ ಮಾತಾಡಲೇ ಇಲ್ಲ. ಆದರೆ, ಕಥನ-ಪ್ರವಚನದ ದಿಕ್ಕನ್ನೇ ಬದಲಿಸಿತು. ಅದು ಕಾರ್ಪೊರೇಟ್-ಹಣಕಾಸು ಕುಳಗಳಿಗೆ ಹಿಡಿಸಿತು ಕೂಡ (ಅದೆಷ್ಟು ಅಂದರೆ, ಬಿಜೆಪಿ ಗೆಲ್ಲುತ್ತದೆಂದು ಎಕ್ಸಿಟ್ ಪೋಲ್‌ಗಳು ಭವಿಷ್ಯ ನುಡಿದ ಕೂಡಲೇ ಷೇರು ಪೇಟೆ ಸೂಚ್ಯಂಕ ಸರ್ರನೆ ಏರಿತು).

ಬದಲಾದ ಇಂತಹ ಸಂವಾದ-ಕಥನಗಳ ಪ್ರಭಾವ

ಪುಟ 14 ಕ್ಕೆ

.... ನಾವೀಗ ಒಂದು ಚಾರಿತ್ರಿಕ ಪರ್ವಕಾಲವನ್ನು ನೋಡುತ್ತಿದ್ದೇವೆ. ಈ ಸನ್ನಿವೇಶದಲ್ಲಿ, ಬಲಪಂಥವು ಒಂದು ಹುಸಿ ಅಥವಾ ವಿಭಜನಕಾರೀ ಅಜೆಂಡಾದ ಸುತ್ತ ಜನರನ್ನು ಅಲ್ಪ ಕಾಲದಲ್ಲೇ ಅಣಿನೆರೆಸುವಲ್ಲಿ ಎಷ್ಟೇ ಯಶಸ್ವಿಯಾಗಿದ್ದರೂ ಸಹ, ನಿರುದ್ಯೋಗ ಮತ್ತು ಹತಾಶೆಯ ಪರಿಸ್ಥಿತಿಗೆ ಒಳಗಾಗಿರುವ ಆ ಜನರನ್ನು ಆ ಪರಿಸ್ಥಿತಿಯಿಂದ ಹೊರತರುವ ಮಾರ್ಗ ತೋರಲು ಬಲಪಂಥವು ಮೂಲಭೂತವಾಗಿ ಅಸಮರ್ಥವಾಗಿದೆ.



ಒಂದು ರಾಷ್ಟ್ರದ ಚರಿತ್ರೆಯಲ್ಲಿ, ಅಸ್ತಿತ್ವದಲ್ಲಿರುವ ವ್ಯವಸ್ಥೆಯು ಸ್ಥಿರವಾಗಿ ಮತ್ತು ದೀರ್ಘವಾಗಿ ಬಾಳುವ ಸಾಮರ್ಥ್ಯವುಳ್ಳದ್ದೆಂದು ತೋರುವ ಕ್ಷಣಗಳಿರುತ್ತವೆ. ಆದರೆ, ಇವೆಲ್ಲವೂ ಕ್ಷಿಪ್ರವಾಗಿ ಬದಲಾಗುತ್ತವೆ, ಹಿಂದಿನಂತೆಯೆ ಸಾಗುವುದು ಇನ್ನು ಸಾಧ್ಯವಿಲ್ಲವೆಂಬ ಪರಿಸ್ಥಿತಿಯಲ್ಲಿ ಹೊಸ ಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅಂತಹ ಒಂದು ಕ್ಷಣ ಬಂಡವಾಳಶಾಹಿಗೆ ಈಗ ಬಂದಿದೆ, ಭಾರತದಲ್ಲಿ ಮಾತ್ರವಲ್ಲ ವಿಶ್ವದ ಎಲ್ಲೆಡೆಯಲ್ಲೂ. ಭಾರತದಲ್ಲಿ ಮತ್ತು ಬೇರೆ ಹಲವು ದೇಶಗಳಲ್ಲಿ ಬಲಪಂಥವು ಎಷ್ಟೇ ಚುನಾವಣಾ ಯಶಸ್ಸು ಗಳಿಸಿದರೂ, ಅದು ಈ ಮೂಲಭೂತ ಅಂಶವನ್ನು ಮಾರ್ಪಡಿಸಲಾರದು.

ಬಂಡವಾಳದಲ್ಲೇನಿದೆ? ....

ಪುಟ 11 ರಿಂದ

ಕುರಿತು ಮಾರ್ಕ್ಸ್ ನಮ್ಮ ಗಮನ ಸೆಳೆಯುತ್ತಾರೆ. 'ಮಾರ್ಲಿಬೋನ್‌ನಲ್ಲಿ ಕಮ್ಮಾರ ವೃತ್ತಿಯವರ ಸಾವಿನ ಪ್ರಮಾಣ ಒಂದು ವರ್ಷದಲ್ಲಿ ಪ್ರತಿ ಒಂದು ಸಾವಿರ ಸಾವುಗಳ ಪೈಕಿ 31 ಸಾವು! ಇದು ಇಡೀ ದೇಶದಲ್ಲಿ ಒಂದು ವರ್ಷದ ಅವಧಿಯಲ್ಲಿ ಸಂಭವಿಸುವ ಒಟ್ಟು ಸಾವುಗಳಿಗಿಂತ ಹನ್ನೊಂದರಷ್ಟು ಜಾಸ್ತಿ... ..ಕಮ್ಮಾರನೊಬ್ಬ ದಿನಕ್ಕೆ ಕಾದ ಕಬ್ಬಿಣಕ್ಕೆ ಹೊಡೆಯುವ ಪೆಟ್ಟುಗಳಿಗೆ ಒಂದು ಮಿತಿ ಇದೆ. ಅವನು ಹಾಕುವ ಹೆಜ್ಜೆಗಳಿಗೆ, ಅವನ ಉಸಿರಾಟಕ್ಕೆ, ಅವನು ಮಾಡುವ ಕೆಲಸಕ್ಕೆ – ಎಲ್ಲದಕ್ಕೂ ಮಿತಿ ಇದೆ. ಆ ಮಿತಿಯೊಳಗೆ ಅವನು ದುಡಿದು 50 ವರ್ಷ ಬದುಕಬಹುದು ಎಂದು ಭಾವಿಸಿದರೆ, ಆ ದುಡಿಮೆಯ ಫಲವನ್ನು ಅಂದರೆ ಉತ್ಪಾದನೆಯನ್ನು 50 ವರ್ಷದ ಅವಧಿಗಿಂತ ಬಹಳ ಮೊದಲೇ ಅವನಿಂದ, ಅವನ ದೇಹದಿಂದ, ದೋಚಲಾಗುತ್ತದೆ.. ..50 ವರ್ಷ ಬಾಳಿ ಬದುಕಬೇಕಾದವನು 37ರ ಹರೆಯದಲ್ಲೇ ತೀರಿಕೊಳ್ಳುತ್ತಾನೆ.' ಎಂದು ಕಮ್ಮಾರಿಕೆಯಲ್ಲಿ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ಅವರು ಹೇಳುತ್ತಾರೆ.

ಲೋಹ ತಯಾರಿಕೆಯಲ್ಲಿ (ಬ್ಲಾಸ್ಟ್ ಫರ್ನೇಸ್, ರೋಲಿಂಗ ಮಿಲ್, ಫೋರ್ಜ್ ಇತ್ಯಾದಿ) ಮತ್ತಿತರ ಉದ್ಯಮಗಳಲ್ಲಿ ಯಂತ್ರ ಬಳಕೆ ಅಥವಾ ಉತ್ಪಾದನಾ ಪ್ರಕ್ರಿಯೆ ಸತತವಿದ್ದಾಗ, '24 ಗಂಟೆ ಸತತ ದುಡಿಮೆಯನ್ನು ಕಾರ್ಮಿಕರಿಂದ ಹಿಂಡಿ ತೆಗೆಯುವ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಪೈಶಾಚಿಕ ರಕ್ತದಾಹದ ಸಹಜ ಪ್ರವೃತ್ತಿ'ಯೇ ರಾತ್ರಿ ಪಾಳಿ ಅಥವಾ ಸರದಿ ವ್ಯವಸ್ಥೆಗೆ ಎಡೆಮಾಡಿಕೊಟ್ಟಿದೆ. ಈಗಾಗಲೇ ದಾರುಣ ಪರಿಸ್ಥಿತಿಯಲ್ಲಿದ್ದ ಬಾಲ, ಮಹಿಳಾ ಮತ್ತು ವಯಸ್ಕ ಪುರುಷ ಕಾರ್ಮಿಕರ ಮೇಲೆ ಅದು ಬೀರಿದ ದುಷ್ಪರಿಣಾಮವನ್ನೂ ಮಾರ್ಕ್ಸ್ ದಾಖಲಿಸುತ್ತಾರೆ. 'ರಾತ್ರಿ ಪಾಳಿಯ ದುಡಿಮೆಯಿಂದ ಕಾರ್ಮಿಕರ ಆರೋಗ್ಯದ ಮೇಲೆ ಮಾತ್ರವಲ್ಲ ದುಷ್ಪರಿಣಾಮಗಳು' ಆಗಿದ್ದು. 'ದುಡಿಮೆ ದಿನದ 12 ಗಂಟೆಗಳ ಕಾಲಮಿತಿಯನ್ನು ಮೀರಿ ದುಡಿಯುವಂತೆ ಕಾರ್ಮಿಕರನ್ನು ಒತ್ತಾಯಿಸಲು ಮಾಲಕನಿಗೆ ಅವಕಾಶ ಕಲ್ಪಿಸುತ್ತದೆ.' ಎಂದು ಅವರು ವಾದಿಸುತ್ತಾರೆ. 'ಬಾಲ ಕಾರ್ಮಿಕರ ರಾತ್ರಿ ಪಾಳಿಯ ದುಡಿಮೆಯನ್ನು ಕಾನೂನು ರೀತ್ಯ ನಿಷೇಧಿಸಿದರೆ' ತಮ್ಮ ಕಂಪನಿ ಬಾಗಿಲು ಮುಚ್ಚಬೇಕಾದ ಪರಿಸ್ಥಿತಿ ಬರಬಹುದು ಎಂದು ಮಾಲಕನೊಬ್ಬ ಫ್ಯಾಕ್ಟರಿ ಇನಸ್ಪೆಕ್ಟರ್ ನನ್ನು ಎಚ್ಚರಿಸಿದ್ದನ್ನು ಅವರು ಉಲ್ಲೇಖಿಸುತ್ತಾ, ರಾತ್ರಿ ಪಾಳಿಯ ದುಷ್ಪರಿಣಾಮದ ಗಂಭೀರತೆಯನ್ನು ಮನದಟ್ಟು ಮಾಡುತ್ತಾರೆ. ●

ಲೋಕಸಭಾ ಚುನಾವಣೆಗಳ ಪ್ರಾಥಮಿಕ ಪರಾಮರ್ಶೆ...

ಪುಟ 2 ರಿಂದ

ಮೀಸಲು ಎಸ್.ಟಿ. ಕ್ಷೇತ್ರವನ್ನು ಬಿಜೆಪಿ ಗೆದ್ದಿದೆ, ಕಾಂಗ್ರೆಸ್ ಎರಡನೇ ಸ್ಥಾನ ಪಡೆದಿದೆ.

ಈ ಎರಡೂ ರಾಜ್ಯಗಳಲ್ಲಿ ಪಕ್ಷದ ಸಮಿತಿಗಳು ನಮ್ಮ ಪಾರಂಪರಿಕ ಬೆಂಬಲ ನೆಲೆ ಕುಗ್ಗುತ್ತಿರುವ ಬಗ್ಗೆ ಪ್ರಾಮಾಣಿಕ ಮೌಲ್ಯಮಾಪನ ನಡೆಸುತ್ತಿವೆ ಮತ್ತು ಈ ವಿಭಾಗಗಳನ್ನು ಮತ್ತೆ ನಮ್ಮ ತೆಕ್ಕೆಗೆ ತರಲು ತುರ್ತು ಕ್ರಮಗಳನ್ನು ರೂಪಿಸಲಾಗುವುದು.

ಈ ಬಲಿಷ್ಟ ನೆಲೆಗಳ ಹೊರಗೆ, ಸಿಪಿಐ(ಎಂ) ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಚುನಾವಣಾ ಮೈತ್ರಿಕೂಟದ ಭಾಗವಾಗಿ ಸ್ಪರ್ಧಿಸಿದ್ದ ಎರಡೂ ಸ್ಥಾನಗಳನ್ನು ಗೆದ್ದುಕೊಂಡಿದೆ. ಬೇರೆಲ್ಲ ರಾಜ್ಯಗಳಲ್ಲಿ ಸಿಪಿಐ(ಎಂ) ಸ್ವತಂತ್ರವಾಗಿ ಸ್ಪರ್ಧಿಸಿತ್ತು. ಈ ಸ್ಥಾನಗಳಲ್ಲಿ, ಮಹಾರಾಷ್ಟ್ರದ ದಿಂಡೋರಿ ಕ್ಷೇತ್ರದಲ್ಲಿ ಅತಿ ಹೆಚ್ಚು ಅಂದರೆ 1,09,570 ಮತಗಳನ್ನು ಪಡೆದಿದೆ.

ಒಡಿಶಾ ವಿಧಾನಸಭೆಯ ಚುನಾವಣೆಗಳಲ್ಲಿ ಸಿಪಿಐ(ಎಂ) ತನ್ನ ಬೊನೈ ಕ್ಷೇತ್ರವನ್ನು, ಕಳೆದ ಬಾರಿಗಿಂತ 20,000 ಹೆಚ್ಚು ಮತಗಳನ್ನು (34.67%) ಗಳಿಸಿ ಉಳಿಸಿಕೊಂಡಿದೆ.

ಪಕ್ಷದ ಸ್ವತಂತ್ರ ಶಕ್ತಿ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳು ದುರ್ಬಲಗೊಳ್ಳುತ್ತಲೇ ಇವೆ ಎಂದು ಕೇಂದ್ರ ಸಮಿತಿ ಗಮನಿಸಿತು. ಇಂತಹ ಒಂದು ಪ್ರವೃತ್ತಿ ಆಳಗೊಳ್ಳಲು ಕಾರಣವಾಗಿರುವ ವಿವಿಧ ಅಂಶಗಳನ್ನು ಕೇಂದ್ರ ಸಮಿತಿ ಚರ್ಚಿಸಿತು. ಮತ್ತು ಈ ಅವನತಿಯನ್ನು ತಡೆಯಲು ಹಾಗೂ ತಿರುಗುಮುರುಗುಗೊಳಿಸಲು ಪಕ್ಷವು ಕೈಗೊಳ್ಳುವ ತಕ್ಷಣದ ಸಂಘಟನಾತ್ಮಕ ಮತ್ತು ರಾಜಕೀಯ ಕ್ರಮಗಳನ್ನು ರೂಪಿಸಿತು.

ಚುನಾವಣೆಗಳ ನಂತರದ ಸವಾಲುಗಳು:

ಈ ನಿರ್ಣಾಯಕ ಬಿಜೆಪಿ ವಿಜಯವು ಖಂಡಿತವಾಗಿಯೂ ಒಡ್ಡಲಿರುವ ಸವಾಲುಗಳನ್ನು ಎದುರಿಸಲು ದೇಶ ಮತ್ತು ಜನತೆ ಸಿದ್ಧರಾಗಬೇಕಾಗಿದೆ ಎಂಬ ತೀರ್ಮಾನಕ್ಕೆ ಕೇಂದ್ರ ಸಮಿತಿ ಬಂದಿದೆ. ಕೇಂದ್ರ ಸಮಿತಿ ಇಂತಹ ನಾಲ್ಕು ಸವಾಲುಗಳನ್ನು ಗಮನಿಸಿದೆ.

1. ಬಿಜೆಪಿ ಈ ನಿರ್ಣಾಯಕ ವಿಜಯವನ್ನು ಅಭೂತಪೂರ್ವ ಹಣಬಲ ಮತ್ತು ಅಂತರ್‌ರಾಷ್ಟ್ರೀಯ ಹಾಗೂ ದೇಶೀ ಕಾರ್ಪೊರೇಟ್‌ಗಳ ಸಂಪೂರ್ಣ ಬೆಂಬಲದಿಂದ ಗೆದ್ದಿದೆ. ದೊಡ್ಡ ವ್ಯವಹಾರಸ್ಥರು ಮತ್ತು ಶ್ರೀಮಂತರಿಗೆ ಅನುಕೂಲಕರವಾದ ಜನ–ವಿರೋಧಿ ಆರ್ಥಿಕ ಸುಧಾರಣೆಗಳ ದಿಕ್ಪಥವನ್ನು ಅದು ಇನ್ನಷ್ಟು ತೀವ್ರಗೊಳಿಸಲು ಬಹುಪಾಲು ಜನತೆಯ ಮೇಲೆ ಮತ್ತಷ್ಟು ಹೆಚ್ಚಿನ ಸಂಕಟಗಳನ್ನು ಖಂಡಿತವಾಗಿಯೂ ಹೇರುತ್ತದೆ. ಇಂತಹ ಆರ್ಥಿಕ ಹೊಡೆತಗಳ ವಿರುದ್ಧ ಹೋರಾಟಗಳಲ್ಲಿ ಗರಿಷ್ಟ ಜನವಿಭಾಗಗಳನ್ನು ಅಣಿನೆರೆಸುವಲ್ಲಿ ಪಕ್ಷವು ನೇತೃತ್ವ ನೀಡುತ್ತದೆ.
2. ಹಿಂದುತ್ವ ಕೋಮುವಾದಿ ಧ್ರುವೀಕರಣದ ಕ್ರೋಡೀಕರಣದಿಂದಾಗಿ ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಹೆಚ್ಚೆಚ್ಚು ಹಲ್ಲೆಗಳು ನಡೆಯಲಿವೆ, ಇದರಿಂದಾಗಿ, ಈ ಜನವಿಭಾಗಗಳ ಭದ್ರತೆ ಮತ್ತು ಜೀವನಾಧಾರ ಕುರಿತ ಆತಂಕಗಳು ಇನ್ನಷ್ಟು ಹದಗೆಡಲಿವೆ. ನಮ್ಮ ಸಂವಿಧಾನದಲ್ಲಿ ಪ್ರತಿಷ್ಟಾಪಿಸಿರುವ ಜಾತ್ಯತೀತತೆಯನ್ನು ರಕ್ಷಿಸುವ ಮತ್ತು ಬಲಪಡಿಸುವ ಕೆಲಸವನ್ನು ಪಕ್ಷವು ಈ ಹೋರಾಟಗಳಲ್ಲಿ ಸಾಕಷ್ಟು ವಿಶಾಲ ಪ್ರಮಾಣದಲ್ಲಿ ಜನವಿಭಾಗಗಳನ್ನು ಸೆಳೆದುಕೊಂಡು ಕೈಗೆತ್ತಿಕೊಳ್ಳುತ್ತದೆ.
3. ಕಳೆದ ಐದು ವರ್ಷಗಳಲ್ಲಿ ಎಲ್ಲ ಸಂವಿಧಾನಿಕ ಅಧಿಕಾರ ಪಡೆದಿರುವ ಸಂಸ್ಥೆಗಳಲ್ಲಿ ನಡೆದಿರುವ ಆರೆಸ್ಸೆಸ್‌ನ ನುಸುಳಿಕೆ ಇನ್ನಷ್ಟು ತೀವ್ರಗೊಳ್ಳುವುದು ಖಂಡಿತ. ಇದು, ಸಂವಿಧಾನಿಕ ಗಣತಂತ್ರವನ್ನು ಆರೆಸ್ಸೆಸ್‌ನ ಸೈದ್ಧಾಂತಿಕ ಯೋಜನೆಯಾದ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸಲು ಅನುವು ಮಾಡಿಕೊಳ್ಳುವುದಕ್ಕಾಗಿ, ಇಂತಹ ಸಂವಿಧಾನಿಕ ಪ್ರಾಧಿಕಾರಗಳನ್ನು ಶಿಥಿಲಗೊಳಿಸುವ ದಿಕ್ಕಿನಲ್ಲಿ ಸಾಗಲಿದೆ. ಎಲ್ಲ ಸಂವಿಧಾನಿಕ ಪ್ರಾಧಿಕಾರಗಳನ್ನು ರಕ್ಷಿಸುವ ಮತ್ತು ಬಲಪಡಿಸುವ ಕೆಲಸವನ್ನು ಸಿಪಿಐ(ಎಂ) ಈ ಹೋರಾಟಗಳಲ್ಲಿ ಜತೆಗೂಡಲು ಸಿದ್ಧವಿರುವ ಇತರ ಎಲ್ಲ ಶಕ್ತಿಗಳೊಂದಿಗೆ ಪ್ರತಿಪಾದಿಸುತ್ತದೆ.
4. ಬಿಜೆಪಿಯ ವಿಜಯವು ಭಾರತದಲ್ಲಿ ಒಂದು "ಭದ್ರತಾ' ಪ್ರಭುತ್ವವನ್ನು ಸ್ಥಾಪಿಸುವ ಅಗತ್ಯವಿದೆಯೆಂಬುದರತ್ತ ಗಮನ ಕೇಂದ್ರೀಕರಿಸಿತ್ತು. ಇದರಿಂದಾಗಿ ವ್ಯಕ್ತಿಗಳ ಹಕ್ಕುಗಳನ್ನು, ನಿರ್ದಿಷ್ಟವಾಗಿ ಭಿನ್ನಾಭಿಪ್ರಾಯದ ಹಕ್ಕನ್ನು ತೀವ್ರವಾಗಿ ಮೊಟಕುಗೊಳಿಸಲಾಗುತ್ತದೆ. ಈಗಾಗಲೇ ಅನಿಷ್ಟಕಾರಿ ಸಂಕೇತಗಳು ಕಾಣುತ್ತಿವೆ. ಒಂದಿಲ್ಲೊಂದು ನೆಪದಲ್ಲಿ ದಲಿತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಖಾಸಗಿ ಪಡೆಗಳ ಹಲ್ಲೆಗಳು ತೀವ್ರಗೊಳ್ಳಲಿವೆ. ದುಡಿಯುವ ಜನಗಳ ಮತ್ತು ಧಾರ್ಮಿಕ, ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳು ದಾಳಿಗೆ ಒಳಗಾಗಲಿವೆ, ಅವರ ಬೇಟೆ ನಡೆಯಲಿದೆ. ಈ ಸವಾಲುಗಳನ್ನು ನೇರವಾಗಿ ಎದುರಿಸಲು, ಪ್ರಜಾಪ್ರಭುತ್ವ ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ನೆಚ್ಚಿಕೊಂಡಿರುವ ಸಾಧ್ಯವಾದಷ್ಟು ವಿಶಾಲವಾದ ಜನವಿಭಾಗಗಳನ್ನು ಅಣಿನೆರೆಸುವಲ್ಲಿ ಸಿಪಿಐ(ಎಂ) ನೇತೃತ್ವ ವಹಿಸುತ್ತದೆ.

ಕಾರ್ಯಭಾರಗಳು:

ಪಕ್ಷಕ್ಕೆ ಈ ಹಿನ್ನಡೆಯಿಂದಾಗಿ ಉಂಟಾಗಿರುವ ಗಂಭೀರ ಸನ್ನಿವೇಶವನ್ನು ಎದುರಿಸಲು ಕೇಂದ್ರ ಸಮಿತಿ ಹಲವಾರು ಕ್ರಮಗಳನ್ನು ಮತ್ತು ಕಾರ್ಯಭಾರಗಳನ್ನು ಅಂಗೀಕರಿಸಿದೆ.

ಜನಗಳೊಂದಿಗೆ ಸಂಪರ್ಕವನ್ನು ಆಳಗೊಳಿಸಲು ಮತ್ತು ವಿವಿಧ ರಂಗಗಳ ಚಟುವಟಿಕೆಗಳನ್ನು ಬಲಪಡಿಸಲು ನಿರ್ದಿಷ್ಟ ಕ್ರಮಗಳನ್ನು ನಿರ್ಧರಿಸಲಾಗಿದೆ.

ಜೀವನಾಧಾರದ ಪ್ರಶ್ನೆಗಳನ್ನು ಕುರಿತ ಹೋರಾಟಗಳನ್ನು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಸಾಮಾಜಿಕ ದಮನದ ವಿರುದ್ಧ ಹೋರಾಟಗಳೊಂದಿಗೆ ಸಮಗ್ರೀಕರಿಸಲು ನಿರ್ದಿಷ್ಟ ಗಮನವನ್ನು ಕೊಡಲಾಗುವುದು.

ಪಕ್ಷವು 2015ರಲ್ಲಿ ಕೊಲ್ಕತಾ ಪ್ಲೀನಂನಲ್ಲಿ ಅಂಗೀಕರಿಸಿದ ಪಕ್ಷದ ಸಂಘಟನೆ ಮತ್ತು ಅದರ ಕಾರ್ಯವೈಖರಿ ಕುರಿತ ಮಹತ್ವದ ನಿರ್ಣಯಗಳ ಜಾರಿಯ ಒಂದು ಪರಾಮರ್ಶೆಯನ್ನು ನಡೆಸುತ್ತದೆ. ಆಗಸ್ಟ್ ಕೊನೆಯ ವೇಳೆಗೆ ರಾಜ್ಯಗಳು ಈ ಪರಾಮರ್ಶೆಯನ್ನು ಪೂರ್ಣಗೊಳಿಸಲಿದ್ದು, ಇದರ ಆಧಾರದಲ್ಲಿ ಪಕ್ಷವನ್ನು ಬಲಿಷ್ಟಗೊಳಿಸುವ ಮತ್ತು ನಮ್ಮ ಕಾರ್ಯಕರ್ತರಲ್ಲಿ ಹುರುಪು ತುಂಬುವ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ ಚುನಾವಣೆಗಳ ಅನುಭವವು ವ್ಯಾಪಕವಾದ ಚುನಾವಣಾ ಸುಧಾರಣೆಗಳ ಅಗತ್ಯವನ್ನು, ಚುನಾವಣಾ ಆಯೋಗವನ್ನು ಸುಧಾರಿಸಬೇಕಾದ ತುರ್ತನ್ನು ತೋರಿದೆ. ಚುನಾವಣಾ ಆಯುಕ್ತರುಗಳನ್ನು ತತ್ಕಾಲೀನ ಸರಕಾರ ನೇಮಿಸುವ ಬದಲು ಭಾರತದ ರಾಷ್ಟ್ರಪತಿಗಳ ನೇತೃತ್ವದ ಒಂದು ವ್ಯವಸ್ಥೆಯ ಮೂಲಕ ನೇಮಿಸುವಂತೆ ಮಾಡಲು, ಇದನ್ನು ಒಪ್ಪುವ ಎಲ್ಲ ರಾಜಕಿಯ ಅಭಿಪ್ರಾಯದವರನ್ನು ಸಿಪಿಐ(ಎಂ) ಅಣಿನೆರೆಸುತ್ತದೆ.

ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ಗಳ ತಟಸ್ಥತೆಯ ಕುರಿತಂತೆ ಇರುವ ವಿವಿಧ ದೂರುಗಳು ಮತ್ತು ಈ ಯಂತ್ರಗಳಲ್ಲಿ ಕೈಯಾಡಿಸುವ ಸಾಧ್ಯತೆಯ ಬಗ್ಗೆ ಎದ್ದಿರುವ ಸಂದೇಹಗಳನ್ನು ಕುರಿತ ವರದಿಗಳ ಒಂದು ಅಧ್ಯಯನವನ್ನು ಸಿಪಿಐ(ಎಂ) ನಡೆಸುತ್ತದೆ ಮತ್ತು ಇತರ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮಗಳನ್ನು ನಿರ್ಧರಿಸುತ್ತದೆ.

ಜಾತ್ಯತೀತ ಚಿಂತಕ ಡಾ. ರಾಮ್ ಪುನಿಯಾನಿಯವರಿಗೆ ಚುನಾವಣೆಗಳ ನಂತರ ಬೆದರಿಕೆಯ ಕರೆಗಳನ್ನು ಮಾಡಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ.

ಒಬ್ಬ ಯುವ ಪರಿಶಿಷ್ಟ ಬುಡಕಟ್ಟಿನ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿನಿ ಡಾ. ಪಾಯಲ್ ತಡ್ವಿಯ ಆತ್ಮಹತ್ಯೆಯ ಬಗ್ಗೆ ಕೇಂದ್ರ ಸಮಿತಿ ತನ್ನ ದುಃಖವನ್ನು ವ್ಯಕ್ತಪಡಿಸಿದೆ. ಜಾತಿ ಕಿರುಕುಳಗಳು ಆಕೆಯನ್ನು ಆತ್ಮಹತ್ಯೆಯತ್ತ ತಳ್ಳಿದವು. ಮಹಾರಾಷ್ಟ್ರ ರಾಜ್ಯ ಸರಕಾರ ಅಪರಾಧಿಗಳ ವಿರುದ್ಧ ಮತ್ತು ಇಂತಹ ದ್ವೇಷ ಪ್ರಚಾರಗಳನ್ನು ಹುಟ್ಟಿಹಾಕುವವರ ವಿರುದ್ಧ ದೃಢವಾದ ಕ್ರಮವನ್ನು ಕೈಗೊಳ್ಳಬೇಕು. ●

ಬಲಪಂಥದತ್ತ ಜಾಗತಿಕ ಪಲ್ಲಟದ ಈ ಸಮಯ..

ಪುಟ 13 ರಿಂದ

ತಾತ್ಕಾಲಿಕ. ನವ ಉದಾರವಾದವು ಸಿಕ್ಕಿಹಾಕಿಕೊಂಡಿರುವ ಬಿಕ್ಕಟ್ಟಿನಿಂದ ಹೊರಬರುವುದು ಹೇಗೆ ಎಂಬುದರ ಬಗ್ಗೆ ಯಾವ ಸುಳಿವೂ ಕಾಂಗ್ರೆಸ್‌ಗೂ ಇಲ್ಲ, ಬಿಜೆಪಿಗೂ ಇಲ್ಲ. ಆದ್ದರಿಂದ, ಕೋಟ್ಯಂತರ ನಿರುದ್ಯೋಗಿಗಳಿಗೆ ಅವರು ಉದ್ಯೋಗ ಒದಗಿಸಲಾರರು. ಹಾಗೆ ಹೇಳುವುದಾದರೆ, ಕಾಂಗ್ರೆಸ್ ಪಕ್ಷದ ಕೆಲವರಿಗೆ ನವ ಉದಾರವಾದದ ಹಾದಿಯಲ್ಲಿ ಮುಂದೆ ಹೋಗುವುದು ಅದೆಷ್ಟು ಕಷ್ಟ ಎಂಬುದರ ಅರಿವಿತ್ತು. ಹಾಗಾಗಿಯೇ, ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಐದು ಕೋಟಿ ಕಡು ಬಡ ಕುಟುಂಬಗಳಿಗೆ ವಾರ್ಷಿಕ 72,000 ರೂ ಹಣ ವರ್ಗಾಯಿಸುವ 'ನ್ಯಾಯ' ಯೋಜನೆಯ ಘೋಷಣೆ ಕೊಟ್ಟಿತ್ತು. ಮಾಮೂಲು ಪರಿಸ್ಥಿತಿಯಲ್ಲಿ ಸಾಕಷ್ಟು ಉತ್ಸಾಹ ತುಂಬುವ ಸಾಧ್ಯತೆ ಹೊಂದಿದ್ದ ಮತ್ತು ಪಕ್ಷದ ಪಾಲಿಗೆ ಅಧಿಕಾರ ತಂದುಕೊಡುವಂತಹ ಒಂದು ಯೋಜನೆಯೇ ಠುಸ್ ಪಟಾಕಿಯಂತಾಯಿತು. ಏಕೆಂದರೆ, ಅದಕ್ಕೆ ಬೇಕಾಗುವ ಹಣ ಯಾವ ಮೂಲದಿಂದ ಬರುತ್ತದೆ ಎಂಬುದನ್ನು ಕಾಂಗ್ರೆಸ್ ಪಕ್ಷವು ಹೇಳದೇ ಇದ್ದುದರಿಂದ ಅದು ಜನರ ವಿಶ್ವಾಸ ಗಳಿಸಲಿಲ್ಲ. ಇದೊಂದು ಚುನಾವಣಾ ಭರವಸೆ, ಚುನಾವಣೆಯ ಮರು ದಿನವೇ ಅದನ್ನು ಮುರಿಯಲಾಗುತ್ತದೆ ಎಂದೇ ಜನ ಸಹಜವಾಗಿ ಭಾವಿಸಿದರು.

ಅರ್ಥವ್ಯವಸ್ಥೆಯನ್ನು ಮುನ್ನೆಡೆಸುವುದು ಹೇಗೆ ಎಂಬುದರ ಬಗ್ಗೆ ಮಧ್ಯಮಾರ್ಗಿ, ಉದಾರವಾದೀ ಬೂರ್ಜ್ವಾ ಪಕ್ಷವಾದ ಕಾಂಗ್ರೆಸ್‌ಗೆ ಒಂದು ಸ್ಪಷ್ಟ ಕಲ್ಪನೆಯೇ ಇಲ್ಲ. ಆ ಪಕ್ಷಕ್ಕೆ ಸರಿಸಮನಾಗಿ ಬಿಜೆಪಿಗೂ ಅದರ ಬಗ್ಗೆ ಯಾವುದೇ ಸುಳಿವೂ ಇಲ್ಲ. ಬಿಜೆಪಿಯ ಅತಿರೇಕದ "ರಾಷ್ಟ್ರವಾದ"ವು ಬಹಳ ಬೇಗನೇ ತೆಳುವಾಗುತ್ತದೆ. ಹಸಿವು ಮತ್ತು ನಿರುದ್ಯೋಗದಿಂದ ನರಳುತ್ತಿರುವ ಜನತೆಯನ್ನು ಗಾಳಕ್ಕೆ ಸಿಕ್ಕಿಸಿದ ಹುಳ ತಿನ್ನುವ ಮೀನುಗಳೆಂದು ಭಾವಿಸಿ, ಅವರಿಗೆ ದಿನನಿತ್ಯವೂ ಪಾಕೀಸ್ತಾನ–ವಿರೋಧೀ ಮತ್ತು ಮುಸ್ಲಿಂ–ವಿರೋಧೀ ಮಾತುಗಳನ್ನೇ ಉಣಬಡಿಸುವ ಆಟ ಬಹಳ ಕಾಲ ನಡೆಯುವುದಿಲ್ಲ. ಅಲ್ಲದೆ, ಆರ್ಥಿಕ ಪರಿಸ್ಥಿತಿ ನಿಂತಲ್ಲೇ ನಿಶ್ಚಲವಾಗಿ ಉಳಿಯುವುದಿಲ್ಲ. ಮೋದಿ ಸರ್ಕಾರವು ಆರ್ಥಿಕ ವಲಯದತ್ತ ತಲೆ ಹಾಕಿ ಮಲಗದೇ ಇದ್ದರೂ ಸಹ, ಅರ್ಥವ್ಯವಸ್ಥೆಯು ಮೋದಿಯವರನ್ನು ಅವರಷ್ಟಕ್ಕೆ ಅವರು ಇರಲು ಬಿಡುವುದಿಲ್ಲ, ಬೆನ್ನು ಹತ್ತಿದ ಬೇತಾಳನಂತೆ ಕಾಡುತ್ತದೆ. ಕಾಲಕ್ರಮೇಣ, ಆರ್ಥಿಕ ಚಟುವಟಿಕೆಗಳ ಹಿಂಜರಿತ ಮತ್ತು ವಿದೇಶ ವ್ಯಾಪಾರದ ಬಾಕಿ ಚುಕ್ತಾ ಮಾಡುವುದೇ ಒಂದು ಸಮಸ್ಯೆಯಾದಾಗ, ಆರ್ಥಿಕ ಬಿಕ್ಕಟ್ಟು ಉಲ್ಬಣಗೊಳ್ಳುತ್ತದೆ. ಆಗ, ಉತ್ತರ ಕೊಡಲು ಮೋದಿ ಸರ್ಕಾರದ ಬಳಿ ಹೇಳಿಕೊಳ್ಳುವ ಸಮರ್ಥನೆಗಳಿರುವುದಿಲ್ಲ. ಮತ್ತು, ಬಿಕ್ಕಟ್ಟಿನಿಂದ ಅರ್ಥವ್ಯವಸ್ಥೆಯನ್ನು ಪಾರುಮಾಡುವುದು ಆ ವೇಳೆಗಾಗಲೇ ಇನ್ನೂ ಹೆಚ್ಚು ಕಷ್ಟಕರವಾಗುತ್ತದೆ.


ಜನತೆಯ ದಿನನಿತ್ಯದ ಬದುಕಿನ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ನವ ಉದಾರವಾದದ ಎರಡೂ ಪಡೆಗಳು (ಕಾಂಗ್ರೆಸ್ ಮತ್ತು ಬಿಜೆಪಿ) ಅಸಮರ್ಥವಾಗಿವೆ. ಈ ಪರಿಸ್ಥಿತಿಯಲ್ಲಿ, ಅರ್ಥವ್ಯವಸ್ಥೆಯನ್ನು ಬಿಕ್ಕಟ್ಟಿನಿಂದ ಹೊರ ಬರುವ ಮಾರ್ಗದರ್ಶನವನ್ನು ಎಡ ಪಂಥ ಮಾತ್ರ ಒದಗಿಸಬಲ್ಲದು. ಎಡ ಪಂಥದ ಈ ಮಾರ್ಗವು ನಮ್ಮನ್ನು ಬಂಡವಾಳಶಾಹಿಯಿಂದ ಆಚೆಗೆ ಕೊಂಡೊಯ್ಯಬಲ್ಲದು. ನವ ಉದಾರ ಬಂಡವಾಳಶಾಹಿ ದಿಗಂತದಿಂದ ಆಚೆಗಿನ ಕಣ್ಣೋಟ ಹೊಂದಿರುವುದು ಎಡ ಪಂಥ ಮಾತ್ರ. ಆದ್ದರಿಂದ, ಎಡ ಪರ್ಯಾಯ ಭಾರತಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೇ ಸಲ್ಲುತ್ತದೆ.

ಸಂಕ್ಷಿಪ್ತವಾಗಿ, ನಾವೀಗ ಒಂದು ಚಾರಿತ್ರಿಕ ಪರ್ವಕಾಲವನ್ನು ನೋಡುತ್ತಿದ್ದೇವೆ. ಈ ಸನ್ನಿವೇಶದಲ್ಲಿ, ಬಲಪಂಥವು ಒಂದು ಹುಸಿ ಅಥವಾ ವಿಭಜನಕಾರೀ ಅಜೆಂಡಾದ ಸುತ್ತ ಜನರನ್ನು ಅಲ್ಪ ಕಾಲದಲ್ಲೇ ಅಣಿನೆರೆಸುವಲ್ಲಿ ಎಷ್ಟೇ ಯಶಸ್ವಿಯಾಗಿದ್ದರೂ ಸಹ, ನಿರುದ್ಯೋಗ ಮತ್ತು ಹತಾಶೆಯ ಪರಿಸ್ಥಿತಿಗೆ ಒಳಗಾಗಿರುವ ಆ ಜನರನ್ನು ಆ ಪರಿಸ್ಥಿತಿಯಿಂದ ಹೊರತರುವ ಮಾರ್ಗ ತೋರಲು ಬಲ ಪಂಥವು ಮೂಲಭೂತವಾಗಿ ಅಸಮರ್ಥವಾಗಿದೆ.

ಒಂದು ರಾಷ್ಟ್ರದ ಚರಿತ್ರೆಯಲ್ಲಿ, ಅಸ್ತಿತ್ವದಲ್ಲಿರುವ ವ್ಯವಸ್ಥೆಯು ಸ್ಥಿರವಾಗಿ ಮತ್ತು ದೀರ್ಘವಾಗಿ ಬಾಳುವ ಸಾಮರ್ಥ್ಯವುಳ್ಳದ್ದೆಂದು ತೋರುವ ಕ್ಷಣಗಳಿರುತ್ತವೆ. ಆದರೆ, ಇವೆಲ್ಲವೂ ಕ್ಷಿಪ್ರವಾಗಿ ಬದಲಾಗುತ್ತವೆ, ಹಿಂದಿನಂತೆಯೆ ಸಾಗುವುದು ಇನ್ನು ಸಾಧ್ಯವಿಲ್ಲವೆಂಬ ಪರಿಸ್ಥಿತಿಯಲ್ಲಿ ಹೊಸ ಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅಂತಹ ಒಂದು ಕ್ಷಣ ಬಂಡವಾಳಶಾಹಿಗೆ ಈಗ ಬಂದಿದೆ, ಭಾರತದಲ್ಲಿ ಮಾತ್ರವಲ್ಲ ವಿಶ್ವದ ಎಲ್ಲೆಡೆಯಲ್ಲೂ. ಭಾರತದಲ್ಲಿ ಮತ್ತು ಬೇರೆ ಹಲವು ದೇಶಗಳಲ್ಲಿ ಬಲಪಂಥವು ಎಷ್ಟೇ ಚುನಾವಣಾ ಯಶಸ್ಸು ಗಳಿಸಿದರೂ, ಅದು ಈ ಮೂಲಭೂತ ಅಂಶವನ್ನು ಮಾರ್ಪಡಿಸಲಾರದು. ●

ಯುರೋ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ, ಮುಖ್ಯಧಾರೆಯ (ಕ್ರಿಶ್ಚಿಯನ್ ಡೆಮೊಕ್ರಾಟ್, ಸೋಶಿಯಲ್ ಡೆಮೊಕ್ರಾಟ್) ಪಕ್ಷಗಳ ಹಿನ್ನಡೆ ಮುಂದುವರೆದಿದೆ. ಆದರೆ ಅವರ ಹಿನ್ನಡೆ ಉಗ್ರ ಬಲಪಂಥೀಯರಿಗೆ ಭಾರೀ ಮುನ್ನಡೆಯಾಗಿ ಪರಿವರ್ತಿತವಾಗಬಹುದು ಎಂಬ ಆತಂಕ ನಿಜವಾಗಿಲ್ಲ, ಎಂಬುದು ಸಮಾಧಾನಕರ. ಅದರ ಬದಲಿಗೆ ಪರಿಸರವಾದಿಗಳು ಮತ್ತು ಲಿಬರಲ್ ಕೂಟಕ್ಕೆ ಮುನ್ನಡೆ ದೊರೆತಿದೆ, ಎಡ ಕೂಟ ತನ್ನ ಬಲವನ್ನು ಸ್ವಲ್ಪ ಮಾತ್ರ ಕಳೆದುಕೊಂಡಿದೆ. ದೇಶವಾರಾಗಿ ನೋಡುವುದಾದರೆ ಮುಖ್ಯಧಾರೆಯ ಪಕ್ಷಗಳು ಸ್ಪೈನ್, ಪೋರ್ಚುಗಲ್ ಮತ್ತು ಗ್ರೀಸ್ ಬಿಟ್ಟರೆ ಇನ್ನೆಲ್ಲಾ ದೇಶಗಳಲ್ಲಿ ಭಾರೀ ಹಿನ್ನಡೆ ಕಂಡಿವೆ. ಇದರಿಂದ ಪ್ರಯೋಜನೆ ಪಡೆದು ಉಗ್ರ ಬಲಪಂಥೀಯ ಪಕ್ಷಗಳು ಮುನ್ನಡೆ ಸಾಧಿಸಬಹುದೆಂದು ಆತಂಕ ಇಟಲಿ ಬಿಟ್ಟರೆ ಬೇರೆಲ್ಲೂ ನಿಜವಾಗಿಲ್ಲ. ಆದರೂ ಹೆಚ್ಚಿನ ದೇಶಗಳಲ್ಲಿ ಅವು ತಮ್ಮ ಮತಗಳಿಕೆ ಉಳಿಸಿಕೊಂಡಿವೆ ಅಥವಾ ಸ್ವಲ್ಪ ಹೆಚ್ಚಿಸಿಕೊಂಡಿವೆ. ಎಡ ಪಕ್ಷ ಬೆಲ್ಜಿಯಂ ನಲ್ಲಿ ಭಾರೀ ಮುನ್ನಡೆ ಸಾಧಿಸಿವೆ. ಇತರ ಎಲ್ಲಾ ದೇಶಗಳಲ್ಲಿ ತಮ್ಮ ಮತಗಳಿಕೆ/ಸೀಟುಗಳನ್ನು ಸ್ವಲ್ಪ ಹೆಚ್ಚು-ಕಡಿಮೆ ಉಳಿಸಿಕೊಂಡಿವೆ. ಗ್ರೀನ್ ಪಕ್ಷಗಳು ಎಲ್ಲಾ ದೇಶಗಳಲ್ಲಿ ಉತ್ತಮ ಮುನ್ನಡೆ ಸಾಧಿಸಿವೆ.

ಯುರೋ ಚುನಾವಣೆ : 'ಮುಖ್ಯಧಾರೆ'ಯ ಪಕ್ಷಗಳಿಗೆ ಹಿನ್ನಡೆ





ವಸಂತರಾಜ ಎನ್.ಕೆ.

ಮೇ 26 ರಂದು ಮುಗಿದ ಯುರೋ ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಯುರೋಪಿನ 'ಮುಖ್ಯಧಾರೆ'ಯ ಪಕ್ಷಗಳ ಹಿನ್ನಡೆ ಮುಂದುವರೆಯುತ್ತಿರುವುದನ್ನು ನೋಡಬಹುದು. 'ಮುಖ್ಯಧಾರೆ'ಯಲ್ಲಿ ಬಲ-ನಡು ಪಂಥೀಯ ಎನ್ನಬಹುದಾದ ಜರ್ಮನಿ, ಹಾಲೆಂಡ್, ಇಟಲಿಯಲ್ಲಿನ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷಗಳಂತಹ ಪಕ್ಷಗಳ ಅಧಿಕೃತ ಕೂಟವಾದ ಇ.ಪಿ.ಪಿ. (ಯುರೋಪಿಯನ್ ಪೀಪಲ್ಸ್ ಪಾರ್ಟಿ) ಸೇರಿದೆ. ಇ.ಪಿ.ಪಿ. 751 ಸದಸ್ಯರಿರುವ ಪಾರ್ಲಿಮೆಂಟಿನಲ್ಲಿ 180 ಸೀಟುಗಳನ್ನು ಮತ್ತು ಶೇ. 23.8 ಮತಗಳನ್ನು ಗಳಿಸಿದೆ. ಸೋಶಿಯಲ್ ಡೆಮೊಕ್ರಾಟ್ಸ್ ಎಂದು ಕರೆಯಲಾಗುವ ಪಕ್ಷಗಳ ಮತ್ತು ಇತರ ಪ್ರಜಾಸತ್ತಾತ್ಮಕ ಪಕ್ಷಗಳ ಕೂಟವಾದ 'ಎಸ್. ಅಂಡ್ ಡಿ' 146 ಸೀಟುಗಳನ್ನು ಮತ್ತು ಶೇ. 20.3 ಮತಗಳನ್ನು ಗಳಿಸಿದೆ. 'ಮುಖ್ಯಧಾರೆ'ಯ ಈ ಎರಡು ಕೂಟಗಳು ಸೇರಿ 2014 ಯುರೋ ಚುನಾವಣೆಗೆ ಹೋಲಿಸಿದರೆ ಶೇ. 20ರಷ್ಟು ಸೀಟುಗಳನ್ನು ಮತ್ತು ಶೇ. 10ರಷ್ಟು ಮತಗಳನ್ನು ಕಳೆದುಕೊಂಡಿವೆ. ಇನ್ನೊಂದು ಸಾಂಪ್ರದಾಯಿಕ ಬಲಪಂಥೀಯ ಕೂಟ ಇ.ಸಿ.ಆರ್. ಸಹ ಸೀಟು (76ರಿಂದ 59) ಮತ್ತು ಮತಗಳಿಕೆ ಕಳೆದುಕೊಂಡಿದೆ. ಎಡ ಮತ್ತು ಎಡ-ಗ್ರೀನ್ ಪಕ್ಷಗಳ ಎಡಕೂಟ 0.9 ಮತಗಳಿಕೆಯಲ್ಲಿ ಕಳೆದುಕೊಂಡಿದೆ. ಸೀಟು 52ರಿಂದ 39ಕ್ಕೆ ಇಳಿದಿದೆ.

ಈ ಚುನಾವಣೆಗಳಲ್ಲಿ ನಿಜವಾಗಿ ಮುನ್ನಡೆ ಸಾಧಿಸಿದ್ದು ಗ್ರೀನ್ (ಪರಿಸರವಾದಿ) ಪಕ್ಷಗಳ ಕೂಟ. ಅದು ಶೇ. 2 ಹೆಚ್ಚು ಮತ ಗಳಿಸಿ, ಸೀಟುಗಳಿಕೆಯನ್ನು 52ರಿಂದ 69ಕ್ಕೆ ಹೆಚ್ಚಿಸಿಕೊಂಡಿದೆ. ಲಿಬರಲ್ ಎಂದು ಹೇಳಿಕೊಳ್ಳುವ (ಫ್ರೆಂಚ್ ಅಧ್ಯಕ್ಷ ಮ್ಯಾಕ್ರಾನ್ ಅವರ ಪಕ್ಷ ಕೂಟದಲ್ಲಿ ಸೇರಿದೆ) 'ಅಲ್ಡರ್' ಎಂಬ ಕೂಟ ಶೇ. 7 ರಿಂದ 14ಕ್ಕೆ ಮತಗಳಿಕೆ ಏರಿಸಿಕೊಂಡು, ಸೀಟುಗಳಿಕೆಯನ್ನೂ 68ರಿಂದ 105ಕ್ಕೆ ಏರಿಸಿಕೊಂಡಿದೆ. ಉಗ್ರ ಬಲಪಂಥೀಯ ರಾಷ್ಟ್ರೀಯವಾದಿ ಕೂಟ ಇ.ಎನ್.ಎಫ್ 37 ಸೀಟುಗಳನ್ನು ಗೆದ್ದಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಯುರೋಪಿನಲ್ಲಿ ಮುಖ್ಯಧಾರೆಯ ಪಕ್ಷಗಳ ಹಿನ್ನಡೆ ಮುಂದುವರೆದಿದೆ. ಆದರೆ ಅವರ ಹಿನ್ನಡೆ ಉಗ್ರ ಬಲಪಂಥೀಯರಿಗೆ ಭಾರೀ ಮುನ್ನಡೆಯಾಗಿ ಪರಿವರ್ತಿತವಾಗಬಹುದು ಎಂಬ ಆತಂಕ ನಿಜವಾಗಿಲ್ಲ, ಎಂಬುದು ಸಮಾಧಾನಕರ. ಅದರ ಬದಲಿಗೆ ಪರಿಸರವಾದಿಗಳು ಮತ್ತು ಲಿಬರಲ್ ಕೂಟಕ್ಕೆ ಮುನ್ನಡೆ ದೊರೆತಿದೆ, ಎಡ ಕೂಟ ತನ್ನ ಬಲವನ್ನು ಸ್ವಲ್ಪ ಮಾತ್ರ ಕಳೆದುಕೊಂಡಿದೆ. ಆದರೆ ಯುರೋಪಿನ ರಾಜಕಾರಣ ಹಿಡಿಯುತ್ತಿರುವ ಹಾದಿ ಇನ್ನಷ್ಟು ಸ್ಪಷ್ಟವಾಗಬೇಕಾದರೆ ದೇಶವಾರಾಗಿ ಫಲಿತಾಂಶಗಳ ವಿಶ್ಲೇಷಣೆ ನೋಡಬೇಕು. ಇಲ್ಲಿ ಮುಂದೆ ಅಂತಹ ಪ್ರಯತ್ನ ಮಾಡಲಾಗಿದೆ.

ಜರ್ಮನಿ

2014 ಯುರೋ ಚುನಾವಣೆಗಳಿಗೆ ಹೋಲಿಸಿದರೆ, ಜರ್ಮನಿಯ 'ಮುಖ್ಯಧಾರೆ'ಯ ಪಕ್ಷ ಸಿಡಿಯು (ಬಲಪಂಥೀಯ ಪಕ್ಷ) ಶೇ.7 ಮತಗಳನ್ನು, ಎಸ್.ಪಿ.ಡಿ (ಸೋಶಿಯಲ್ ಡೆಮೊಕ್ರಾಟ್) ಶೇ. 12 ಮತಗಳನ್ನು ಕಳೆದುಕೊಂಡಿದೆ. ಎಡ ಪಕ್ಷ ಶೇ. 2 ಮತ ಕಳೆದುಕೊಂಡಿದೆ. ಗ್ರೀನ್ ಪಾರ್ಟಿ ಶೇ. 10 (ಒಟ್ಟು ಯುರೋಪಿನಲ್ಲಿ ಗ್ರೀನ್ ಕೂಟದ ಹೆಚ್ಚಳಕ್ಕೆ ಇದೇ ಮುಖ್ಯ ಕಾರಣ) ಮತ ಹೆಚ್ಚಿಸಿಕೊಂಡಿದೆ. ಇತ್ತೀಚಿನ ಎಲ್ಲಾ ಚುನಾವಣೆಗಳಲ್ಲಿ ಬಲಗೊಳ್ಳುತ್ತಾ ಬಂದಿರುವ ಉಗ್ರ ಬಲಪಂಥೀಯ ರಾಷ್ಟ್ರೀಯವಾದಿ ಪಕ್ಷ ಎ.ಎಫ್.ಡಿ. ಭಾರೀ ಪ್ರಮಾಣದಲ್ಲಿ ಮತ ಹೆಚ್ಚಿಸಿಕೊಳ್ಳುತ್ತದೆ ಎಂಬ ಆತಂಕ ಇಲ್ಲೂ ನಿಜವಾಗಿಲ್ಲ.

ಫ್ರಾನ್ಸ್

ಲೆ ಪೆನ್ ಅವರ ಉಗ್ರ ಬಲಪಂಥೀಯ ಪಕ್ಷ 2014ರಂತೆ ಮೊದಲ ಸ್ಥಾನ ಪಡೆದಿದ್ದರೂ ಶೇ.1 ಮತ ಕಳೆದುಕೊಂಡಿದೆ. ಮುಖ್ಯಧಾರೆಯ ಪಕ್ಷ ಸೋಶಲಿಸ್ಟ್ (ಸೋಶಿಯಲ್ ಡೆಮೊಕ್ರಾಟ್) ಶೇ. 7 ರಷ್ಟು ಮತಗಳನ್ನು ಕಳೆದುಕೊಂಡಿದೆ. ಕಳೆದ ಬಾರಿ ಎಡ ಅಧ್ಯಕ್ಷೀಯ ಅಭ್ಯರ್ಥಿಯಾಗಿದ್ದ ಮೆಲೆಂಕೋನ್ ಅವರ ಮತ್ತು ಕಮ್ಯುನಿಸ್ಟ್ ಪಕ್ಷಗಳು ಜಂಟಿಯಾಗಿ ಸ್ಪರ್ಧಿಸಿ 2014ರಲ್ಲಿ ಶೇ. 6.3 ಮತ ಗಳಿಸಿದ್ದವು. ಈ ಬಾರಿ ಪ್ರತ್ಯೇಕವಾಗಿ ಸ್ಪರ್ಧಿಸಿದ್ದರೂ ಒಟ್ಟು ಎಡರಂಗ ಶೇ. 9 ಕ್ಕೆ ಮತಗಳಿಕೆ ಹೆಚ್ಚಿಸಿಕೊಂಡಿದೆ. ಇನ್ನೊಂದು ಮುಖ್ಯಧಾರೆಯ (ಅಧ್ಯಕ್ಷ ಮ್ಯಾಕ್ರೋನ್ ಅವರ) ನವ-ಉದಾರವಾದಿ ಪಕ್ಷ ಗಳಿಸಿದ ಶೇ. 22 ಪಾರ್ಲಿಮೆಂಟ್ ಮತ್ತು ಅಧ್ಯಕ್ಷೀಯ ಚುನಾವಣೆಗಳಲ್ಲಿ ಗಳಿಸಿದ ಮತಗಳಿಗಿಂತ ಬಹಳ ಕಡಿಮೆ.

ಗ್ರೀಸ್

ಗ್ರೀಸ್ ನಲ್ಲಿ ಮಾತ್ರ ಮುಖ್ಯಧಾರೆಯ ಸಾಂಪ್ರದಾಯಿಕ ಎನ್.ಡಿ. ಶೇ. 11ರಷ್ಟು ಮತಗಳಿಕೆಯನ್ನು ಹೆಚ್ಚಿಸಿಕೊಂಡಿದೆ. ಹಿಂದೆ ಭಾರೀ ಭರವಸೆ ಮೂಡಿಸಿದ್ದ ನಡು-ಎಡ ಪಕ್ಷ ಶೇ.3 ರಷ್ಟು ಮತ ಕಳೆದುಕೊಂಡಿದೆ. ಕಮ್ಯುನಿಸ್ಟ್ ಪಕ್ಷ 2 ಸೀಟುಗಳನ್ನು ಉಳಿಸಿಕೊಂಡಿದೆ. ಶೇ. 0.5 ರಷ್ಟು ಮತಗಳನ್ನು ಕಳೆದುಕೊಂಡಿದೆ. ಇಲ್ಲೂ ಉಗ್ರ ಬಲಪಂಥೀಯ 'ಗೋಲ್ಡನ್ ಡಾನ್' ನ ಮತಗಳಿಕೆ ಶೇ. 9.3ರಿಂದ ಶೇ. 4.8ಕ್ಕೆ ಕುಸಿದಿದೆ ಎಂಬುದು ಸಕಾರಾತ್ಮಕ ಅಂಶ.

ಇಟಲಿ

ಇಟಲಿಯಲ್ಲಿ ಮಾತ್ರ ಉಗ್ರ ಬಲಪಂಥೀಯ ಪಕ್ಷವೊಂದು ಮತಗಳಿಕೆ ಹೆಚ್ಚಿಸಿಕೊಂಡಿದೆ. ನಾರ್ತರ್ನ್ ಲೀಗ್ ಎಂಬ ಉಗ್ರ ಬಲಪಂಥೀಯ ಪಕ್ಷ ಶೇ. 28ರಷ್ಟು ಮತಗಳಿಕೆ ಹೆಚ್ಚಿಸಿಕೊಂಡಿದೆ. ಆದರೆ ಇನ್ನೊಂದು ಉಗ್ರ ಬಲಪಂಥೀಯ 'ರಾಷ್ಟ್ರೀಯವಾದಿ' ಪಕ್ಷ ಪೋರ್ಜಾ ಇಟಾಲಿಯ ಶೇ. 8ರಷ್ಟು ಮತ ಕಳೆದುಕೊಂಡಿದೆ. ಅಲ್ಲಿನ ಮುಖ್ಯ ಧಾರೆಯ ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿ ಶೇ.18ರಷ್ಟು ಮತ ಕಳೆದುಕೊಂಡಿದೆ. ಫೈವ್ ಸ್ಟಾರ್ ಮೂವ್ ಮೆಂಟ್ ಎಂಬ ನಡು-ಎಡಪಂಥೀಯ ಪಕ್ಷ ಶೇ. 5ರಷ್ಟು ಮತ ಕಳೆದುಕೊಂಡಿದೆ. ಇಟಲಿ ರಾಜಕೀಯವಾಗಿ ಸ್ಪಷ್ಟವಾಗಿ ಬಲಪಂಥದತ್ತ ವಾಲುತ್ತಿದೆ.

ಸ್ಪೈನ್ ಮತ್ತು ಪೋರ್ಚುಗಲ್

ಈ ದೇಶಗಳಲ್ಲಿ ಮುಖ್ಯಧಾರೆಯ ಪಕ್ಷಗಳಿಗೆ ತಮ್ಮ ಬಲ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಮುಖ್ಯಧಾರೆಯ ಪಕ್ಷವಾದ 'ಸೋಶಿಯಲ್ ಡೆಮೊಕ್ರಾಟಿಕ್' ಪಕ್ಷಗಳು ತಮ್ಮ ಬಲ ಹೆಚ್ಚುಕಡಿಮೆ ಉಳಿಸಿಕೊಂಡಿವೆ. ಆದರೆ ಇನ್ನೊಂದು ಮುಖ್ಯಧಾರೆಯ ಪಕ್ಷವಾದ ಸಾಂಪ್ರದಾಯಿಕ ಪಕ್ಷ ಶೇ. 6 ಮತ್ತು 8 ರಷ್ಟು ಮತಗಳಿಕೆ ಕಳೆದುಕೊಂಡಿವೆ. ಕಮ್ಯುನಿಸ್ಟ್ ಮತ್ತು ಗ್ರೀನ್ ಪಕ್ಷಗಳ ಕೂಟ ಒಂದು ಕಡೆ, ಇನ್ನೊಂದು ಎಡ ಕೂಟ ಸೇರಿ ತಮ್ಮ ಮತಗಳಿಕೆ ಉಳಿಸಿಕೊಂಡಿವೆ. ಪೊಡೆಮೊಸ್ ಎಡ ಪಕ್ಷಗಳ ಜತೆ ಎಡ ಕೂಟವಾಗಿ ಸ್ಪರ್ಧಿಸಿದ್ದು ಶೇ. 10 ಮತ ಗಳಿಸಿವೆ. ಇತ್ತೀಚೆಗೆ ಅಪಾಯಕಾರಿಯಾಗಿ ಬಲಗೊಳ್ಳುತ್ತಿದ್ದ ವೋಕ್ಸ್ ಪಾರ್ಟಿ ಶೇ. 6 ಮಾತ್ರ ಮತಗಳಿಸಿದೆ. ಆದರೆ ಅದರ ನಿರೀಕ್ಷಿತ ಭಾರೀ ಹೆಚ್ಚಳ ಆಗದಿದ್ದರೂ, ಈಗಿನ ಮಟ್ಟವೂ ಆತಂಕಕಾರಿಯಾಗಿದೆ.

ಬ್ರಿಟನ್

ಇಲ್ಲೂ ಎರಡೂ 'ಮುಖ್ಯಧಾರೆಯ' ಪಕ್ಷಗಳು ಮತ ಕಳೆದುಕೊಂಡಿವೆ. ಟೋರಿ ಶೇ. 15 ಮತ ಕಳೆದುಕೊಂಡು 5ನೇ ಸ್ಥಾನಕ್ಕೆ ಕುಸಿದಿದೆ. ಲೇಬರ್ ಪಕ್ಷ ಶೇ. 11 ಮತ ಕಳೆದುಕೊಂಡಿವೆ. ಲಿಬರಲ್ ಪಕ್ಷ ಶೇ. 13ರಷ್ಟು ಮತಗಳಿಕೆಯನ್ನು ಹೆಚ್ಚಿಸಿಕೊಂಡಿದೆ. ಗ್ರೀನ್ ಪಕ್ಷ ಶೇ. 4ರಷ್ಟು ಹೆಚ್ಚು ಮತ ಪಡೆದಿದೆ. ಉಗ್ರ ಬಲಪಂಥೀಯ ರಾಷ್ಟ್ರೀಯವಾದಿ ಯು.ಕೆ.ಐ.ಪಿ ಯ ಮತಗಳಿಕೆ ಶೇ. 26.7ರಿಂದ ಶೇ. 3.5ಕ್ಕೆ ಕುಸಿದಿದೆ. ಇದಕ್ಕೆ ಕಾರಣ ಯು.ಕೆ.ಐ.ಪಿ ಯ ಫರಾಜ್ ಎನ್ನುವ ನಾಯಕನೊಬ್ಬ ಬ್ರೆಕ್ಸಿಟ್ ಪಾರ್ಟಿ ಕಟ್ಟಿ ಅದು ಶೇ. 30 ಮತ ಗಳಿಸಿದೆ. ಜನತೆ ಯುರೋ ಕೂಟವನ್ನು ಬ್ರೆಕ್ಸಿಟ್ ಜನಮತಸಂಗ್ರಹದಲ್ಲಿ ನಿರಾಕರಿಸಿರುವುದರಿಂದ ಈ ಚುನಾವಣೆಯಲ್ಲಿ ಮತ ನೀಡಬಾರದೆಂದು ಕರೆ ನೀಡಿತ್ತು.

ಬೆಲ್ಜಿಯಂ

ಇಲ್ಲಿ ಯುರೋ ಪಾರ್ಲಿಮೆಂಟು ಜತೆ ರಾಷ್ಟ್ರೀಯ ಮತ್ತು ಪ್ರಾಂತೀಯ ಪಾರ್ಲಿಮೆಂಟುಗಳಿಗೂ ಚುನಾವಣೆ ನಡೆದಿತ್ತು. ಇಲ್ಲಿ ಎಡಕೂಟ ಉತ್ತಮ ಮುನ್ನಡೆ ಸಾಧಿಸಿದೆ. ಬೆಲ್ಜಿಯಂ ಮತ್ತು ಯುರೋ ಕೂಟದಲ್ಲಿ ನಗಣ್ಯ ಪ್ರಾತಿನಿಧ್ಯವಿದ್ದ ಬೆಲ್ಜಿಯನ್ ವರ್ಕರ್ಸ್ ಪಾರ್ಟಿ ಒಂದು ಯುರೋ ಮತ್ತು 12 ಸೀಟುಗಳನ್ನು ಬೆಲ್ಜಿಯಂ ಪಾರ್ಲಿಮೆಂಟಿನಲ್ಲಿ ಗೆದ್ದುಕೊಂಡಿದೆ. ಯುರೋ, ರಾಷ್ಟ್ರೀಯ ಮತ್ತು ಪ್ರಾಂತೀಯ ಪಾರ್ಲಿಮೆಂಟುಗಳು ಒಟ್ಟು ಸೇರಿ, ಆ ಪಕ್ಷದ ಪಾರ್ಲಿಮೆಂಟು ಸದಸ್ಯರ ಸಂಖ್ಯೆ 8ರಿಂದ 42ಕ್ಕೆ ಏರಿದೆ. ಇದು ಯುರೋ ದೇಶಗಳಲ್ಲೇ ಎಡ ಶಕ್ತಿಗಳು ಪಡೆದ ಭಾರೀ ಮುನ್ನಡೆ. ಕಳೆದ 4 ವರ್ಷಗಳಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ಬಲಗೊಂಡಿದ್ದು ಹವಾಮಾನ ಬದಲಾವಣೆಯ ಬಗ್ಗೆ ವಿದ್ಯಾರ್ಥಿ ಚಳುವಳಿಗಳಿಗೆ ಭಾರೀ ಪ್ರತಿಕ್ರಿಯೆ ದೊರಕಿದೆ. ಕಳೆದ 40 ವರ್ಷಗಳಲ್ಲೇ ಮೊದಲ ಬಾರಿಗೆ ಬೆಲ್ಜಿಯಂನಲ್ಲಿ ಸಾರ್ವತ್ರಿಕ ಮುಷ್ಕರ ನಡೆದಿದೆ.

ಸೈಪ್ರಸ್

ಸೈಪ್ರಸ್ ನ ಎಡಪಕ್ಷ ಅಕೆಲ್ ತನ್ನ ಮತಗಳಿಕೆ ಹೆಚ್ಚಿಸಿಕೊಂಡಿದೆ ಮತ್ತು ಎರಡು ಸೀಟುಗಳನ್ನು ಉಳಿಸಿಕೊಂಡಿದೆ. ಶೇ. 27 ಮತ ಗಳಿಸಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ.

ದೇಶವಾರಾಗಿ ಯುರೋ ಚುನಾವಣೆಗಳನ್ನು ನೋಡುವುದಾದರೆ ಮುಖ್ಯಧಾರೆಯ ಪಕ್ಷಗಳು ಸ್ಪೈನ್, ಪೋರ್ಚುಗಲ್ ಮತ್ತು ಗ್ರೀಸ್ ಬಿಟ್ಟರೆ ಇನ್ನೆಲ್ಲಾ ದೇಶಗಳಲ್ಲಿ ಭಾರೀ ಹಿನ್ನಡೆ ಕಂಡಿವೆ. ಇದರಿಂದ ಪ್ರಯೋಜನೆ ಪಡೆದು ಉಗ್ರ ಬಲಪಂಥೀಯ ಪಕ್ಷಗಳು ಮುನ್ನಡೆ ಸಾಧಿಸಬಹುದೆಂದು ಆತಂಕ ಇಟಲಿ ಬಿಟ್ಟರೆ ಬೇರೆಲ್ಲೂ ನಿಜವಾಗಿಲ್ಲ. ಆದರೂ ಹೆಚ್ಚಿನ ದೇಶಗಳಲ್ಲಿ ಅವು ತಮ್ಮ ಮತಗಳಿಕೆ ಉಳಿಸಿಕೊಂಡಿವೆ ಅಥವಾ ಸ್ವಲ್ಪ ಹೆಚ್ಚಿಸಿಕೊಂಡಿವೆ. ಎಡ ಪಕ್ಷ ಬೆಲ್ಜಿಯಂ ನಲ್ಲಿ ಭಾರೀ ಮುನ್ನಡೆ ಸಾಧಿಸಿವೆ. ಇತರ ಎಲ್ಲಾ ದೇಶಗಳಲ್ಲಿ ತಮ್ಮ ಮತಗಳಿಕೆ/ಸೀಟುಗಳನ್ನು ಸ್ವಲ್ಪ ಹೆಚ್ಚು-ಕಡಿಮೆ ಉಳಿಸಿಕೊಂಡಿವೆ. ಗ್ರೀನ್ ಪಕ್ಷಗಳು ಎಲ್ಲಾ ದೇಶಗಳಲ್ಲಿ ಉತ್ತಮ ಮುನ್ನಡೆ ಸಾಧಿಸಿವೆ. ●

ದೇಶದ ಸಾರ್ವಭೌಮತೆ ಮತ್ತು ಆತ್ಮಾಭಿಮಾನವನ್ನು ಬಲಿಗೊಟ್ಟು ಅಮೆರಿಕಾದ ಎದುರು ತಲೆಬಾಗಿಸುವುದನ್ನು ಒಪ್ಪಲು ಸಾಧ್ಯವಿಲ್ಲ-ಬಿಜೆಪಿ ಸರಕಾರಕ್ಕೆ ಎಡಪಕ್ಷಗಳ ಎಚ್ಚರಿಕೆ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಕಾರ್ಯದರ್ಶಿಯ ಭಾರತ ಭೇಟಿಯ ಸಂದರ್ಭದಲ್ಲಿ ಭಾರತದ ಕೈತಿರುಚುವ ಅಮೆರಿಕಾದ ಅಜೆಂಡಾಕ್ಕೆ ಎಡಪಕ್ಷಗಳು ದೃಢ ವಿರೋಧವನ್ನು ವ್ಯಕ್ತಪಡಿಸಿವೆ. ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್.ಸುಧಾಕರ ರೆಡ್ಡಿ, ಸಿಪಿಐ(ಎಂಎಲ್ ಲಿಬರೇಷನ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬಬ್ರತ್ ಬಿಸ್ವಾಸ್ ಮತ್ತು ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಕ್ಷಿತಿ ಗೋಸ್ವಾಮಿ ಜಂಟಿ ಹೇಳಿಕೆಯೊಂದನ್ನು ಜೂನ್ 20ರಂದು ನೀಡಿದ್ದಾರೆ.

ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಜೂನ್ 25 ಮತ್ತು 26ರಂದು ಭಾರತಕ್ಕೆ ಭೇಟಿ ನೀಡುತ್ತಿರುವುದಾಗಿ ಪ್ರಕಟಿಸಿದ್ದಾರೆ. ಈ ಭೇಟಿಯ ಉದ್ದೇಶ ಭಾರತವು ತನ್ನ ಆರ್ಥಿಕ ವ್ಯವಸ್ಥೆಯನ್ನು ಇನ್ನಷ್ಟು ತೆರೆಯುವತ್ತ ತಳ್ಳುವುದು, ವ್ಯಾಪಾರ ಅಡೆ-ತಡೆಗಳನ್ನು ಕೈಬಿಡುವಂತೆ ಮಾಡುವುದು, ಮತ್ತು ಭಾರತಕ್ಕೆ ಅಮೆರಿಕನ್ ರಕ್ಷಣಾ ಸಾಧನಗಳನ್ನು ಮಾರುವುದು ಎನ್ನಲಾಗಿದೆ. ಈ ಭೇಟಿ, ಅಮೆರಿಕಾದ 'ಸಾಮಾನ್ಯಗೊಳಿಸಿದ ಆದ್ಯತಾ ಕಾರ್ಯಕ್ರಮ'(ಜಿಪಿಪಿ)ದ ಫಲಾನುಭವಿ ಎಂದು ಭಾರತಕ್ಕೆ ಕೊಟ್ಟಿದ್ದ ಸ್ಥಾನವನ್ನು ಕೊನೆಗೊಳಿಸಿರುವ ಹಿನ್ನೆಲೆಯಲ್ಲಿ ಬಂದಿದೆ. ಇದುವರೆಗೆ ಈ ಸ್ಥಾನಮಾನದಿಂದಾಗಿ ಭಾರತದ ಉತ್ಪನ್ನಗಳು ಸುಂಕ-ಮುಕ್ತವಾಗಿ ಅಮೆರಿಕಾ ಪ್ರವೇಶಿಸಲು ಅವಕಾಶವಿತ್ತು. ಈಗ ಅದು ಇಲ್ಲವಾಗಿದೆ. ಅಲ್ಲದೆ ಭಾರತವು ಇರಾನ್, ವೆನೆಝುವೆಲ ಮುಂತಾದ ದೇಶಗಳಿಂದ ತೈಲ ಖರೀದಿಸಿದರೆ ನಿರ್ಬಂಧಗಳನ್ನು ಹೇರುವುದಾಗಿಯೂ ಅಮೆರಿಕಾ ಬೆದರಿಕೆ ಹಾಕಿದೆ ಎಂಬುದನ್ನು ಎಡಪಕ್ಷಗಳು ನೆನಪಿಸಿವೆ.

ತನ್ನ ಆಣತಿಗಳಿಗೆ ಲಕ್ಷ್ಯ ಕೊಡದಿದ್ದರೆ ಹೊಸ ನಿರ್ಬಂಧಗಳನ್ನು ಹಾಕುವುದಾಗಿ ಅಮೆರಿಕನ್ ಆಡಳಿತ ಜಗತ್ತಿನಾದ್ಯಂತ ದೇಶಗಳಿಗೆ ಬೆದರಿಕೆ ಹಾಕುತ್ತಿದೆ. ಅದು ಕ್ಯೂಬ, ವೆನೆಝುವೆಲ, ಇರಾನ್ ಮತ್ತು ನಿಕರಗುವ ದೇಶಗಳಲ್ಲಿ ಆಡಳಿತಗಳನ್ನು ಬದಲಿಸುವುದಕ್ಕಾಗಿ ಅವುಗಳ ಕುತ್ತಿಗೆ ಹಿಸುಕುವ ಪ್ರಯತ್ನ ನಡೆಸುತ್ತಿದೆ. ಈಗ ನಡೆಯುತ್ತಿರುವ ವ್ಯಾಪಾರ ಸಮರ ಈಗಾಗಲೇ ತತ್ತರಿಸುತ್ತಿರುವ ಜಾಗತಿಕ ಆರ್ಥಿಕ ಪರಿಸ್ಥಿತಿಯನ್ನು ಮತ್ತೊಂದು ಹಿಂಜರಿತದತ್ತ ತಳ್ಳುವ ಬೆದರಿಕೆಯನ್ನು ಒಡ್ಡಿದೆ. ಭಾರತವು ಅಮೆರಿಕಾದ ಧೋರಣೆಗಳಿಗೆ ತನ್ನನ್ನು ಒಳಗಾಗಿಸಿಕೊಳ್ಳಬೇಕು, ಇರಾನ್ ಮತ್ತು ವೆನೆಝುವೆಲದಿಂದ ತೈಲ ಖರೀದಿಸುವುದನ್ನು ಮತ್ತು ರಷ್ಯಾದಿಂದ ಎಸ್-400 ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸುವುದನ್ನು ನಿಲ್ಲಿಸಬೇಕು ಎಂದು ಅದು ನಿರ್ಬಂಧಿಸುತ್ತಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಅಮೆರಿಕಾ ಈ ರೀತಿ ಕೈತಿರುಚುತ್ತಿರುವುದನ್ನು ಪ್ರತಿರೋಧಿಸುವ ಬದಲು ಅದರ ಒತ್ತಡಗಳಿಗೆ ಕುಸಿಯುತ್ತಿದೆ. ನಮ್ಮ ಸಾರ್ವಭೌಮತೆ ಮತ್ತು ಆತ್ಮಾಭಿಮಾನವನ್ನು ಬಲಿಗೊಟ್ಟು ಅಮೆರಿಕಾದ ಎದುರು ತಲೆಬಾಗಿಸುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಎಚ್ಚರಿಸಿರುವ ಎಡಪಕ್ಷಗಳು, ಬಿಜೆಪಿ ಸರಕಾರ ಭಾರತದ ಹಿತಾಸಕ್ತಿಗಳನ್ನು ಅಮೆರಿಕಾಕ್ಕೆ ಒಪ್ಪಿಸಿ ಬಿಡುತ್ತಿರುವುದನ್ನು ವಿರೋಧಿಸಬೇಕು ಮತ್ತು ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಪಟ್ಟಾಗಿ ಭದ್ರಪಡಿಸಿಕೊಳ್ಳುವ ಒಂದು ಸ್ವತಂತ್ರ ಧೋರಣೆಯನ್ನು ಅನುಸರಿಸಬೇಕು ಎಂದು ದೃಢವಾಗಿ ಆಗ್ರಹಿಸಬೇಕು ಎಂದು ಭಾರತದ ಜನತೆಯನ್ನು ಕೇಳಿಕೊಂಡಿವೆ. ●

JANASHAKTHI KANNADA VARA PATRIKE JUNE 24-30, 2019 Price: Rs. 10/- Date of Publication: 21 JUNE 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಕಣ್ಮರೆಯಾದ ಕಾರ್ಮಿಕ ಕಣ್ಮಣಿ – ಬಿ. ಮಾಧವ



ಸಿಪಿಐ(ಎಂ) ಪಕ್ಷದ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಮುಖಂಡರೂ, ವಿಮಾ ಕಾರ್ಮಿಕ ಮುಖಂಡರೂ ಆದ ಬಿ.ಮಾಧವ ಅವರು ಜೂನ್ 19ರ ಮುಂಜಾನೆ ಮಂಗಳೂರಿನ ಅಳಪೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾದರು. ದಿ:14–6–1938 ರಂದು ಜನಿಸಿದ ಬಿ.ಮಾಧವ ಅವರು 81 ವರ್ಷ ಪೂರ್ಣವಾಗಿತ್ತು. ಬಿ.ಮಾಧವ ಅವರು ಪತ್ನಿ, ಮೂವರು ಗಂಡು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಎಂ.ಎ., ಎಲ್‌ಎಲ್‌ಬಿ ಪದವೀಧರರಾದ ಬಿ.ಮಾಧವ ಅವರು ಮೂಲತ: ಕಾಸರಗೋಡು ತಾಲೂಕಿನ ಬಳ್ಳೂರಿನವರು. ಜೀವ ವಿಮಾ ನಿಗಮದಲ್ಲಿ ಉದ್ಯೋಗಿಯಾಗಿ ಮುಂಬಯಿ, ಉಡುಪಿ, ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಅಖಿಲ ಭಾರತ ವಿಮಾ ನೌಕರರ ಸಂಘದ ನೇತೃತ್ವದಲ್ಲಿ ವಿಮಾ ನೌಕರರನ್ನು ಸಂಘಟಿಸಿ, ಆ ಮೂಲಕ ಕಾರ್ಮಿಕ ವರ್ಗದ ಸಂಘಟನೆಯ ಕಡೆಗೆ ಬಂದರು.

ಬಳಿಕ ಸಿಪಿಐ(ಎಂ) ಪಕ್ಷದ ಕಡೆಗೆ ಆಕರ್ಷಿತರಾಗಿ, ಪಕ್ಷದಲ್ಲೂ, ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆಗಳಲ್ಲೂ ಸಕ್ರಿಯ ಪಾತ್ರ ವಹಿಸಲು ಪ್ರಾರಂಭಿಸಿದರು. ವಿಮಾ ನೌಕರರ ಸಂಘಟನೆಯ ಜೊತೆಗೆ ದ.ಕ.ಜಿಲ್ಲಾ ಹಂಚು ಕಾರ್ಮಿಕ ಸಂಘ, ದ.ಕ.ಜಿಲ್ಲಾ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್, ದ.ಕ. ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ ಹಾಗೂ ಜಿಲ್ಲಾ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಸಂಘದಲ್ಲಿ ಮುಖ್ಯ ಜವಾಬ್ದಾರಿಯನ್ನು ವಹಿಸಿಕೊಂಡು, ಹಂಚು ಕಾರ್ಮಿಕರ, ಮೋಟಾರ್ ಇಂಜಿನಿಯರಿಂಗ್ ಕಾರ್ಮಿಕರ, ಬೀಡಿ ಕಾರ್ಮಿಕರ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರ ಹಲವಾರು ಹೋರಾಟಗಳನ್ನು ಮುನ್ನಡೆಸಿ ಅವರಿಗೆ ಸವಲತ್ತುಗಳನ್ನು ತೆಗೆಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ವೈಜ್ಞಾನಿಕ ಸಮಾಜವಾದ, ಮಾರ್ಕ್ಸ್‌ವಾದ, ಆಧುನಿಕ ಕನ್ನಡ ಸಾಹಿತ್ಯಗಳ ಕುರಿತು ವಿಸ್ತೃತ ಅಧ್ಯಯನ ನಡೆಸಿದ ಬಿ.ಮಾಧವ ಅವರು ಸಮುದಾಯ ಕರ್ನಾಟಕ ಸಾಂಸ್ಕೃತಿಕ ಸಂಘಟನೆ 1970ರ ದಶಕದ ಅಂತ್ಯದಲ್ಲಿ ರಚಿತವಾದಾಗ, ಅದರ ಸ್ಥಾಪಕ ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದರು. ಇ.ಎಂ. ಎಸ್.ನಂಬೂದಿರಿಪಾದ್, ಎ.ಕೆ.ಗೋಪಾಲನ್, ಲೆನಿನ್ ಮೊದಲಾದವರ ಪುಸ್ತಕಗಳನ್ನು ಮಲಯಾಳ ಹಾಗೂ ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿದ್ದಲ್ಲದೆ, ಭಾರತದ ಸಮಕಾಲೀನ ರಾಜಕೀಯ ಸಾಮಾಜಿಕ ವಿದ್ಯಮಾನಗಳ ಬಗ್ಗೆ ಹಲವಾರು ಲೇಖನಗಳನ್ನೂ ಬರೆದಿದ್ದರು.

ದುಡಿಯುವ ಜನರೇ ಪ್ರಮುಖ ಬೆಂಬಲಿಗರಾಗಿದ್ದ ಸಿಪಿಐ(ಎಂ) ಪಕ್ಷಕ್ಕೆ ಬಿ.ಮಾಧವ ಅವರು ತಮ್ಮ ವಾಗ್ಮಿತೆ ಹಾಗೂ ಬರಹಗಳಿಂದ ವಿದ್ಯಾವಂತರನ್ನು ಹಾಗೂ ಮಧ್ಯಮ ವರ್ಗದವರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದರು.



ಇದರಿಂದಾಗಿ ಅವರ ಮಾರ್ಗದರ್ಶನದಲ್ಲಿ ಸಮುದಾಯ, ಭಾರತ ವಿದ್ಯಾರ್ಥಿ ಫೆಡರೇಶನ್, ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಮೊದಲಾದ ಸಂಘಟನೆಗಳ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿದರು. 1988 ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಶೈಕ್ಷಣಿಕ ಪ್ರವಾಸಕ್ಕಾಗಿ ಹೋದ ಸಿಐಟಿಯು ತಂಡದ ಸದಸ್ಯರಾಗಿದ್ದರು. ಅಲ್ಲದೆ ಕಟ್ಟಡ ಕಾರ್ಮಿಕ ಸಂಘಟನೆಯ ಅಖಿಲ ಭಾರತ ತಂಡದ ಸದಸ್ಯರಾಗಿ 2011 ರಲ್ಲಿ ಜಪಾನಿಗೂ ಅಧ್ಯಯನ ಪ್ರವಾಸ ಕೈಗೊಂಡಿದ್ದರು.

ಜೀವ ವಿಮಾ ನಿಗಮದ ಉದ್ಯೋಗದಿಂದ ಸ್ವಯಂ ನಿವೃತ್ತಿ ಪಡೆದು ಕಳೆದ 20 ವರ್ಷಗಳಿಗೂ ಮೀರಿ, ಬಿ.ಮಾಧವ ಅವರು ಸಿಪಿಐ(ಎಂ) ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿದ್ದಾರೆ. ಸಿಐಟಿಯು ದ.ಕ.ಜಿಲ್ಲಾ ಸಮಿತಿ ಮುಖಂಡತ್ವದ ಬಳಿಕ ಅವರಿಗೆ ಒದಗಿ ಬಂದ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಸ್ಥಾನವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದರು. ಸಿಐಟಿಯು ಅಖಿಲ ಭಾರತ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಅಖಿಲ ಭಾರತ ಬೀಡಿ ಕಾರ್ಮಿಕ ಒಕ್ಕೂಟದ ಅಧ್ಯಕ್ಷರೂ ಆಗಿ, ಅಲ್ಲದೆ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಸಂಘದ ಅಖಿಲ ಭಾರತ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರೂ ಆಗಿ ಸಮರ್ಥವಾಗಿ ಸಂಯೋಜಿಸಿದ್ದರು.

ಸಿಪಿಐ(ಎಂ) ಪಕ್ಷದ ದ.ಕ.ಜಿಲ್ಲಾ ಸಮಿತಿ ಸದಸ್ಯ ಸ್ಥಾನದಿಂದ 2008 ರಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ತಮ್ಮ ದೇಣಿಗೆ ನೀಡಿದ್ದಾರೆ. ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿ ಪಕ್ಷದ ರಾಜ್ಯ ಚಳುವಳಿಯಲ್ಲಿ ಶಿಕ್ಷಣ, ತರಬೇತಿ, ಪತ್ರಿಕೆಗಳ ಬಗ್ಗೆ ಜವಾಬ್ದಾರಿ ವಹಿಸಿದ್ದರು. ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ 1999 ರಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ರಾಜ್ಯ ವಿಧಾನಸಭೆಗೆ ಹಾಗೂ 2009 ರಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೂ ಸ್ಪರ್ಧಿಸಿದ್ದರು. ಎಡಪಕ್ಷಗಳು ಮತ್ತು ಪ್ರಗತಿಪರ ಸಂಘಟನೆಗಳನ್ನು ದ.ಕ.ಜಿಲ್ಲೆಯಲ್ಲಿ ಒಗ್ಗೂಡಿಸಿ ಕೋಮು ಸೌಹಾರ್ದ ಸಂಘಟನೆಯನ್ನು

ಪುಟ 10 ಕ್ಕೆ

ಬಿ.ಮಾಧವ ಅವರಿಗೆ ದ.ಕ.ಜಿಲ್ಲೆಯ ವಿವಿಧ ಸಂಘಟನೆಗಳ ಶ್ರದ್ಧಾಂಜಲಿ

ಸಿಪಿಐ(ಎಂ), ಸಿಐಟಿಯು ಸಂಘಟನೆಗಳ ದ.ಕ. ಜಿಲ್ಲಾ ಮುಖಂಡರಾಗಿದ್ದು, ಜೂನ್ 19 ರಂದು ನಿಧನರಾದ ಬಿ.ಮಾಧವ ಅವರಿಗೆ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಹಾಗೂ ಸಿಐಟಿಯು ದ.ಕ.ಜಿಲ್ಲಾ ಸಮಿತಿಗಳು ಶ್ರದ್ಧಾಂಜಲಿ ಸಲ್ಲಿಸಿವೆ.

ಬಿ. ಮಾಧವ ಅವರು ಮಾರ್ಗದರ್ಶನ ನೀಡಿದ ಸಮುದಾಯ, ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳ ದ.ಕ.ಜಿಲ್ಲಾ ಸಮಿತಿಗಳು, ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿ ಶ್ರದ್ಧಾಂಜಲಿ ಸಲ್ಲಿಸಿವೆ.

ಅಖಿಲ ಭಾರತ ಕಿಸಾನ್ ಸಭಾ ದ.ಕ.ಜಿಲ್ಲಾ ಸಮಿತಿ, ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ, ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ದ.ಕ. ಜಿಲ್ಲಾ ಸಮಿತಿಗಳು ಬಿ.ಮಾಧವ ಅವರಿಗೆ ಗೌರವ ಶ್ರದ್ಧಾಂಜಲಿ ಸಲ್ಲಿಸಿವೆ.

ಬಿ.ಮಾಧವ ಅವರಿಗೆ ಹಿರಿಯ ಸಿಪಿಐ(ಎಂ) ನಾಯಕರ ಶ್ರದ್ಧಾಂಜಲಿ

ಜೂನ್ 19 ರಂದು ನಿಧನರಾದ ಸಿಪಿಐ(ಎಂ)ನ ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಮುಖಂಡರಾಗಿದ್ದ ಬಿ.ಮಾಧವರ ಗೌರವಾರ್ಥ ಹಲವರು ಕಮ್ಯೂನಿಸ್ಟ್ ನಾಯಕರು ಶೋಕ ವ್ಯಕ್ತಪಡಿಸಿದ್ದಾರೆ.

ಸಿಪಿಐ(ಎಂ) ಅಖಿಲ ಭಾರತ ಸಮಿತಿ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರನ್ ಪಿಳ್ಳೆ ಮತ್ತು ಎಂ.ಎ.ಬೇಬಿ ಶೋಕ ವ್ಯಕ್ತಪಡಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ, ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ, ಡಿವೈಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಸಮುದಾಯ ಕರ್ನಾಟಕದ ಸ್ಥಾಪಕ ಉಪಾಧ್ಯಕ್ಷರಾಗಿದ್ದ ಬಿ.ಮಾಧವ ಅವರಿಗೆ ಸಮುದಾಯ ಕರ್ನಾಟಕ ರಾಜ್ಯ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ.

ಕಾಂ. ಮಾಧವ ಅವರು ಕಾರ್ಮಿಕ ನಾಯಕರು ಮಾತ್ರ ಆಗಿರಲಿಲ್ಲ. ಅವರು ಮಂಗಳೂರು ಸಮುದಾಯದ ಸಂಸ್ಥಾಪನೆಯಲ್ಲಿ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿದವರು. ದಕ್ಷಿಣ ಕನ್ನಡದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಹತ್ವ ತಂದುಕೊಟ್ಟವರು

ದ.ಕ.ಜಿಲ್ಲೆಯ ಕಾರ್ಮಿಕರನ್ನು ಸಾಂಸ್ಕೃತಿಕ ಚಳುವಳಿಯ ಜೊತೆ ಬೆರೆಯಲು ಗಂಭೀರವಾಗಿ ಪ್ರಯತ್ನಿಸಿದವರು. ಎಲ್.ಐ.ಸಿ.ಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಎಡ ಚಳುವಳಿಯಲ್ಲಿ ಪೂರ್ಣ ತೊಡಗಿಸಿಕೊಂಡು ಕೆಲಸ ಮಾಡಿದರು. ವಿಮಾ ಕಾರ್ಪೊರೇಷನ್ ನೌಕರರ ಸಂಘದ ನೇತಾರರಾಗಿ ಕಾರ್ಯ ನಿರ್ವಹಿಸಿದವರು. ಬಿ.ಮಾಧವರ ನಿಧನಕ್ಕೆ ಸಮುದಾಯ ರಾಜ್ಯ ಸಮಿತಿಯು ಶ್ರದ್ಧಾಂಜಲಿ ಅರ್ಪಿಸುತ್ತದೆ.

ಬಿ.ಮಾಧವ ಅವರ ಶ್ರದ್ಧಾಂಜಲಿ ಸಭೆ

ಬಿ. ಮಾಧವ ಅವರ ಪಾರ್ಥಿವ ಶರೀರವನ್ನು ದಿ:19–6–2019 ರಂದು ಅಪರಾಹ್ನ ಬೋಳಾರದ ಸಿಪಿಐ(ಎಂ) ಕಚೇರಿಯಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ನೂರಾರು ಸಂಖ್ಯೆಯ ಅಭಿಮಾನಿಗಳು ಮತ್ತು ಪಕ್ಷದ ಕಾರ್ಯಕರ್ತರು ಅವರ ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸಿದರು. ಕಚೇರಿಯ ಆವರಣದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್, ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಕರ್ನಾಟಕದ ಮಾಜಿ ಸಚಿವ ಬಿ.ರಮಾನಾಥ ರೈ, ಜನತಾದಳ ಎಸ್‌ನ ಎಂ.ಬಿ.ಸದಾಶಿವ, ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಸಿಪಿಐ(ಎಂ) ರಾಜ್ಯ ಮುಖಂಡರಾದ ನಿತ್ಯಾನಂದ ಸ್ವಾಮಿ, ಕೆ.ಶಂಕರ್, ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಕಾಸರಗೋಡು ಜಿಲ್ಲಾ ಸಮಿತಿ ಸದಸ್ಯ ಕೆ.ಆರ್. ಜಯಾನಂದ್ ಮಾತನಾಡಿ, ಬಿ.ಮಾಧವನವರು ಸಿಪಿಐ(ಎಂ) ಪಕ್ಷದ ಚಳುವಳಿಗೆ, ಕಾರ್ಮಿಕ ಚಳುವಳಿಗೆ ಹಾಗೂ ಸಾಂಸ್ಕೃತಿಕ ರಂಗಕ್ಕೆ ನೀಡಿದ ಕೊಡುಗೆಯನ್ನು ಶ್ಲಾಘಿಸಿ ಗೌರವ ಸೂಚಿಸಿದರು.

ಈ ಶ್ರದ್ಧಾಂಜಲಿ ಸಭೆಯಲ್ಲಿ ವೆಲ್ಫೇರ್ ಪಾರ್ಟಿ ಜಿಲ್ಲಾಧ್ಯಕ್ಷ ಸುಲೇಮಾನ್ ಕಲ್ಲರ್ಪೆ, ಸಿಪಿಐ(ಎಂ) ರಾಜ್ಯ ನಾಯಕರಾದ ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಿಮಾ ನೌಕರರ ಸಂಘದ ನಾಯಕರಾದ ಪ್ರಭಾಕರ ಕುಂದರ್, ಸಿಪಿಐ(ಎಂ) ಜಿಲ್ಲಾ ನಾಯಕರಾದ ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ವಾಸುದೇವ್ ಉಚ್ಚಿಲ್, ಸಂತೋಷ್ ಬಜಾಲ್, ಜಯಂತಿ ಬಿ.ಶೆಟ್ಟಿ, ಸದಾಶಿವ ದಾಸ್, ಪದ್ಮಾವತಿ ಶೆಟ್ಟಿ, ರಮಣಿ, ಯೋಗೀಶ್ ಜಪ್ಪಿನಮೊಗರು, ರಾಮಣ್ಣ ವಿಟ್ಲ, ಶಿವಕುಮಾರ್, ಹರಿದಾಸ್, ಜಯಂತ ನಾಯಕ್, ರೈತ ಮುಖಂಡರಾದ ರವಿಕಿರಣ್ ಪುಣಚ, ಓಸ್ವಾಲ್ಡ್ ಫೆರ್ನಾಂಡೀಸ್, ವಿವಿಯನ್ ಪಿಂಟೊ, ಜಿಲ್ಲೆಯ ಪ್ರಗತಿಪರ ಚಿಂತಕರಾದ ಡಾ.ರಾಜೇಂದ್ರ ಉಡುಪ, ಪ್ರೊ.ನರೇಂದ್ರ ನಾಯಕ್, ಡಾ.ಕೃಷ್ಣಪ್ಪ ಕೊಂಚಾಡಿ, ಯಶವಂತ ಮರೋಳಿ, ಐವನ್ ಮಿನೇಜಸ್, ಕಾರ್ಮಿಕ ಮುಖಂಡರಾದ ವಿ.ನರಸಿಂಹ, ಸುರೇಶ್ ಕಲ್ಲಾಗರ, ಎಚ್.ಸುನಂದ, ಮುಜೀಬ್, ಧರ್ಮೇಶ್ ನವೀನ್ ಮತ್ತಿತರರು ಉಪಸ್ಥಿತರಿದ್ದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**